ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



₹ 14

ಜುಲೈ 2017

PACKAGE TOURS 2017

Hotel Room Accom. & South Indian Veg. Food

Shaktipeetha Manali Special : 18 Days

Aug 28

Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi

Charodham Yatra : 19 Days

Aug 28 Sep 16, 25 Oct 02

Haridwar, Kempty Falls, Yamunotri, Uttarkashi, Ganganani, Gangotri, Kedarnath, Triyugi (optional), Maana, Badrinath, Rishikesh, New Delhi

*Avail Rs. *20,000/- subsidy*

Kashi Nepal : 16 Days

Sep 06

Kashi, Kathmandu, Patan, Pokhara, Manokamana, Jomsom, Mukthinath, Gorakhpur

Thirth Yatra : 14 Days

Oct 02

Kashi, Chitrakoota, Allahabad, Naimisharanya, Ayodhya, Saranath, Gaya, Bodhgaya

Kolkata Darjeeling : 16 Days

Oct 04

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling, Tiger Hills

Darjeeling Bhutan : 16 Days

Oct 18

Siliguri, Gangtok, Chengu Lake, Harbhajan Singh Mandir, Darjeeling, Tiger Hills, Jaigaon, Punstoling, Thimpu, Paro



Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70
: hansaatravels@gmail.com : hansaatravels.com
080-26643276 / 26543891 / 9341215612 / 9341415612

ಮಹಾಚೇತನಕ್ಕೆ ಅಶ್ರುಪೂರ್ಣ ಶ್ರದ್ಧಾಂಜಲಿ



ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ (೧೯೧೯-೨೦೧೭)

ರಾಮಕೃಷ್ಣ ಮಹಾಸಂಘದ ಹದಿನೈದನೆಯ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರ ಮಹಾಸಮಾಧಿ



ರಾಮಕೃಷ್ಣ ಮಹಾಸಂಘದ ೧೫ನೇ ಪರಮಾಧ್ಯಕ್ಷ ರಾಗಿದ್ದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು **೨೦೧೭ರ ಜೂನ್ ೧೮, ಭಾನುವಾರ**ದಂದು ಸಂಜೆ ೫.೩೦ಕ್ಕೆ ಕೊಲ್ಕತ್ತಾದ 'ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನ' ಆಸ್ಪತ್ರೆಯಲ್ಲಿ ಮಹಾಸಮಾಧಿಯನ್ನು ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೯೮ ವರ್ಷ ವಯಸ್ಸಾಗಿತ್ತು. ವೃದ್ಧಾಪ್ಯಕ್ಕೆ ಸಂಬಂಧಿಸಿದ ಅನಾರೋಗ್ಯಗಳಿಂದ ಬಳಲುತ್ತಿದ್ದ ಅವರನ್ನು ಚಿಕಿತ್ಸೆಗಾಗಿ ೨೦೧೫ರ ಫೆಬ್ರವರಿ ೨೧ರಂದು 'ಸೇವಾ ಪ್ರತಿಷ್ಠಾನ' ಕ್ಕೆ ಸೇರಿಸಲಾಗಿತ್ತು. ಅವರಿಗೆ ಅತ್ಯುತ್ತಮ ವೈದ್ಯಕೀಯ ಚಿಕಿತ್ಸೆ ನೀಡಲಾಗಿದ್ದರೂ, ಈಚಿನ ಕೆಲವು ದಿನಗಳಲ್ಲಿ ಆರೋಗ್ಯ ಹದಗೆಡುತ್ತ ಬಂದಿತ್ತು.

ಜನನ, ದೀಕ್ಷೆ ಹಾಗೂ ಸಂನ್ಯಾಸ: ಇಂದಿನ ಬಾಂಗ್ಲಾದೇಶದ ಢಾಕಾ ಸಮೀಪದ ಸಬಜ್‌ಪುರ್ ಎಂಬ ಪ್ರದೇಶದಲ್ಲಿ ೧೯೧೯ನೇ ಇಸವಿಯ ಬುದ್ಧ ಪೂರ್ಣಿಮೆಯ ದಿನದಂದು ಜನಿಸಿದ ಪರಮಪೂಜ್ಯ ಸ್ವಾಮೀಜಿಯವರು ೧೯೩೮ರಲ್ಲಿ ಶ್ರೀರಾಮಕೃಷ್ಣರ ನೇರ ಶಿಷ್ಯರಾದ **ಸ್ವಾಮಿ ವಿಜ್ಞಾನಾನಂದ**ರಿಂದ ಮಂತ್ರದೀಕ್ಷೆಯನ್ನು ಪಡೆದರು. ೧೯೪೧ರ ಜನವರಿ ೩ರಂದು, ತಮ್ಮ ೨೨ನೇ ವಯಸ್ಸಿನಲ್ಲಿ ಅವರು ಬೇಲೂರು ಮಠದಲ್ಲಿ ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡರು. ಅವರು ಶ್ರೀಮಾತೆಯವರ ಶಿಷ್ಯರೂ ರಾಮಕೃಷ್ಣ ಮಹಾಸಂಘದ ಆರನೇ ಪರಮಾಧ್ಯಕ್ಷರೂ ಆಗಿದ್ದ ಸ್ವಾಮಿ ವಿರಜಾನಂದರಿಂದ ೧೯೪೫ರಲ್ಲಿ ಬ್ರಹ್ಮಚರ್ಯ ದೀಕ್ಷೆ ಹಾಗೂ ೧೯೪೯ರಲ್ಲಿ ಅವರಿಂದಲೇ ಸಂನ್ಯಾಸ ದೀಕ್ಷೆ ಪಡೆದು ಅನುಗೃಹೀತರಾಗಿ, **ಸ್ವಾಮಿ ಆತ್ಮಸ್ಥಾನಂದ** ಎಂಬ ಹೆಸರನ್ನು ಪಡೆದರು.


ವಿವಿಧ ಕೇಂದ್ರಗಳಲ್ಲಿ ಸೇವಾಕಾರ್ಯ: ಬೇಲೂರು ಮಠದಲ್ಲಿ ಹಾಗೂ ಜಾರ್ಖಂಡ್ ರಾಜ್ಯದ ದೇವಘರ್‌ನಲ್ಲಿರುವ ರಾಮಕೃಷ್ಣ ವಿದ್ಯಾಪೀಠದಲ್ಲಿ ಕೆಲವು ಕಾಲ ಸೇವೆ ಸಲ್ಲಿಸಿದ ಬಳಿಕ, ಪೂಜ್ಯರಿಗೆ ಸಂಘದ ಆಗಿನ ಪರಮಾಧ್ಯಕ್ಷರಾಗಿದ್ದ ಸ್ವಾಮಿ ವಿರಜಾನಂದರಿಗೆ ಬಹಳ ದೀರ್ಘಕಾಲ ಸೇವೆ ಮಾಡುವ ಸದವಕಾಶ ಲಭಿಸಿತು. ಉತ್ತರಾಖಂಡದ ಹಿಮಾಲಯದ ಒಂದು ಪರ್ವತದ ತಪ್ಪಲಲ್ಲಿರುವ **ಮಾಯಾವತಿ ಅದ್ವೈತ ಆಶ್ರಮ**ದಲ್ಲಿ, ಹಾಗೂ ಸ್ವಲ್ಪ ದೂರದಲ್ಲೇ ಬೆಟ್ಟಗಳ ಮಡಿಲಲ್ಲಿರುವ **ಶ್ಯಾಮಲಾ ತಾಲ್**‌ನಲ್ಲಿರುವ ರಾಮಕೃಷ್ಣ ಮಿಷನ್ನಿನ ಆಶ್ರಮದ ಪ್ರಶಾಂತ ವಾತಾವರಣದಲ್ಲಿ ಸ್ವಾಮಿ ವಿರಜಾನಂದರ ದಿವ್ಯಸಾನ್ನಿಧ್ಯದಲ್ಲಿ ಪೂಜ್ಯರು ಕೆಲವು ವರ್ಷಗಳನ್ನು ಕಳೆದರು. ೧೯೫೨ರಲ್ಲಿ ಅವರು ರಾಂಚಿಯಲ್ಲಿರುವ ಟಿ.ಬಿ. ಸ್ಯಾನಟೋರಿಯಂ ಶಾಖಾಕೇಂದ್ರದ ಸಹ ಕಾರ್ಯದರ್ಶಿಗಳಾಗಿ ನಿಯುಕ್ತರಾದರು. ಅಲ್ಲಿ ಅವರು ಸ್ಯಾನಟೋರಿಯಂನ ಸೇವಾಕಾರ್ಯಗಳು ಹಲವು ಬಗೆಗಳಲ್ಲಿ ವಿಸ್ತರಿಸುವಂತೆ ವಿಶೇಷ ಶ್ರಮವಹಿಸಿ ದುಡಿದರು. ೧೯೫೮ರಲ್ಲಿ ಅವರು ಬರ್ಮಾದ ರಂಗೂನ್ (ಯಂಗೋನ್) ಸೇವಾಶ್ರಮದ ಕಾರ್ಯದರ್ಶಿಗಳಾಗಿ ನೇಮಕ ಹೊಂದಿ, ಅಲ್ಲಿಗೆ ಕಳುಹಿಸಲ್ಪಟ್ಟರು. ಅಲ್ಲಿ ಅವರು ಸೇವಾಶ್ರಮ ಆಸ್ಪತ್ರೆಯನ್ನು ಅತ್ಯದ್ಭುತವಾಗಿ ಅಭಿವೃದ್ಧಿಗೊಳಿಸಿದರು. ಇಡೀ ಬರ್ಮಾ (ಇಂದಿನ ಮ್ಯಾನ್ಮಾರ್) ದೇಶದಲ್ಲೇ ಆ

೪೩ನೇ ಪುಟಕ್ಕೆ...

ವಿವೇಕಪ್ರಭ


ಜುಲೈ-2017

ಸಂಪುಟ 18 ಸಂಚಿಕೆ 07



ವಿಶೇಷ ಲೇಖನ



ಧಾರಾವಾಹಿ

ವ್ಯವಸ್ಥಾಪಕ ಸಂಪಾದಕರು
ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು
ಸ್ವಾಮಿ ಜ್ಞಾನಯೋಗಾನಂದ

ನೆರವು:
ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷೀ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ
ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ
ಮಯೂರ್ ಗ್ರಾಫಿಕ್ಸ್, ಬೆಂಗಳೂರು

ಮುಖಪುಟ:
ತಸ್ಮೈ ಶ್ರೀ ಗುರವೇ ನಮಃ

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

E-mail: mysuru.vivekaprabha@rkmm.org
Website: www.vivekaprabha.net
ಫೋನ್ : 9481533505

ಚಂದಾ ವಿವರ

ಬಿಡಿ ಪ್ರತಿ : ₹ 14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.
ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300
ಪೋಷಕರು : $ 600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳು ಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಪ್ರಾರ್ಥನೆ

ಮನೀಷಾ ಪಂಚಕಮ್ – ೧



ಜಾಗ್ರತ್ ಸ್ವಪ್ನಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಂಭತೇ
ಯಾ ಬ್ರಹ್ಮಾದಿ ಪಿಪೀಲಿಕಾಂತ ತನುಷು ಪ್ರೋತಾ ಜಗತ್ಸಾಕ್ಷಿಣೀ ।
ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಪಿ ಯಸ್ಯಾಸ್ತಿ ಚೇತ್
ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥ ೧॥

ಯಾವ ಚೈತನ್ಯವು ಎಚ್ಚರ, ಸ್ವಪ್ನ, ಗಾಢನಿದ್ರೆಗಳೆಂಬ ಮೂರು ಅವಸ್ಥೆಗಳಲ್ಲಿಯೂ ಬಹಳ ಸ್ಪಷ್ಟವಾಗಿ ತೋರಿಕೊಳ್ಳುವುದೋ, ಯಾವುದು ಚತುರ್ಮುಖ ಬ್ರಹ್ಮನಿಂದ ಇರುವೆಯ ವರೆಗಿನ ಎಲ್ಲ ವಿಧದ ಶರೀರಗಳಲ್ಲಿಯೂ ಜಗತ್‌ಸಾಕ್ಷಿಯ ರೂಪದಿಂದ ವ್ಯಾಪಿಸಿ ಕೊಂಡಿದೆಯೊ ಅದೇ ನಾನು, ಕಣ್ಣಿಗೆ ಕಾಣುತ್ತಿರುವ ಈ ಶರೀರವಲ್ಲ — ಎಂಬ ದೃಢವಾದ ಪ್ರಜ್ಞೆಯು ಯಾರಿಗಿರುವುದೋ ಅವನು ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ, ಅವನೇ ಗುರುವು, ಎಂಬುದು ನನ್ನ ತಿಳಿವಳಿಕೆ.

ಬ್ರಹ್ಮೈವಾಹಮಿದಂ ಜಗಚ್ಚ ಸಕಲಂ ಚಿನ್ಮಾತ್ರ ವಿಸ್ತಾರಿತಂ
ಸರ್ವಂ ಚೈತದವಿದ್ಯಯಾ ತ್ರಿಗುಣಯಾಽಶೇಷಂ ಮಯಾ ಕಲ್ಪಿತಮ್ ।
ಇತ್ಥಂ ಯಸ್ಯ ದೃಢಾ ಮತಿಃ ಸುಖತರೇ ನಿತ್ಯೇ ಪರೇ ನಿರ್ಮಲೇ
ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥ ೨॥

ನಾನು ಬ್ರಹ್ಮವೇ, ಈ ಜಗತ್ತೂ (ಬ್ರಹ್ಮವೇ). ಎಲ್ಲವೂ ಚಿದ್ವಸ್ತುವಾದ (ಬ್ರಹ್ಮದ) ಆವಿರ್ಭಾವವೇ. ಇದೆಲ್ಲವೂ ತ್ರಿಗುಣಾತ್ಮಕವಾದ ಅವಿದ್ಯೆಯಿಂದ ನಾನು ಕಲ್ಪಿಸಿಕೊಂಡಿರುವುದೇ — ಹೀಗೆ ಯಾವನಿಗೆ ದೃಢವಾದ ಬುದ್ಧಿಯಿರುವುದೋ (ಮತ್ತು) ಸುಖರೂಪವೂ ನಿತ್ಯವೂ ಶ್ರೇಷ್ಠವೂ ನಿರ್ಮಲವೂ (ಆದ ಬ್ರಹ್ಮದಲ್ಲಿ ದೃಢವಾಗಿ ಬುದ್ಧಿಯು ನೆಲೆಸಿರುವುದೋ) ಅವನು ಚಂಡಾಲನಾಗಿರಲಿ ಅಥವಾ ಬ್ರಾಹ್ಮಣನಾಗಿರಲಿ, ಅವನೇ ಗುರುವು ಎಂಬುದು ನನ್ನ ತಿಳಿವಳಿಕೆ.

ಶಶ್ವನ್ನಶ್ವರಮೇವ ವಿಶ್ವಮಖಿಲಂ ನಿಶ್ಚಿತ್ಯ ವಾಚಾ ಗುರೋಃ
ನಿತ್ಯಂ ಬ್ರಹ್ಮ ನಿರಂತರಂ ವಿಮೃಶತಾ ನಿರ್ವ್ಯಾಜಶಾಂತಾತ್ಮನಾ ।
ಭೂತಂ ಭಾವಿ ಚ ದುಷ್ಕೃತಂ ಪ್ರದಹತಾ ಸಂವಿನ್ಮಯೇ ಪಾವಕೇ
ಪ್ರಾರಬ್ಧಾಯ ಸಮರ್ಪಿತಂ ಸ್ವವಪುರಿತ್ಯೇಷಾ ಮನೀಷಾ ಮಮ ॥ ೩ ॥

ಈ ಪ್ರಪಂಚವೆಲ್ಲವೂ ಯಾವಾಗಲೂ ನಶ್ವರವೇ ಎಂದು ಗುರುವಾಕ್ಯದಿಂದ ನಿಶ್ಚಯಿಸಿಕೊಂಡು, ನಿಷ್ಕಾರಣವಾಗಿಯೇ ಶಾಂತವಾಗಿರುವ ಅಂತಃಕರಣದಿಂದ ನಿತ್ಯವಾದ ಬ್ರಹ್ಮವನ್ನು ಎಡೆಬಿಡದೆ ವಿಮರ್ಶಿಸುತ್ತಿರುವ, ಹಿಂದಿನ ಮತ್ತು ಮುಂದಿನ ಪುಣ್ಯಪಾಪಗಳನ್ನು ಜ್ಞಾನಾಗ್ನಿಯಲ್ಲಿ ಸುಟ್ಟು ಹಾಕಿರುವ ಜ್ಞಾನಿಯು ತನ್ನ ಶರೀರವನ್ನು ಪ್ರಾರಬ್ಧಕ್ಕೆ ಒಪ್ಪಿಸಿರುವನೆಂಬುದು ನನ್ನ ಮತವು.

ಸೂಕ್ತಿಪ್ರಭ

ಚಿಂತನೆಯ ಸೂಕ್ತಿಗಳು



ಮಾನವನು ಸೋಲುವುದಕ್ಕಾಗಿ ಹುಟ್ಟಿದವನಲ್ಲ. ಅವನನ್ನು ನಾಶ ಮಾಡಬಹುದು, ಆದರೆ ಅವನೆಂದಿಗೂ ಸೋತು ಹೋಗಲಾರ.

ಅರ್ನೆಸ್ಟ್ ಹೆಮಿಂಗ್ ವೇ




ಕಲಿಕೆ ಎಂದೂ ಮನಸ್ಸಿಗೆ ಆಯಾಸ ತರಲಾರದು.

ಲಿಯೋನಾರ್ಡೋ ಡಾ ವಿಂಚಿ



ಕರುಣೆಯ ಭಾವನೆಯು ಅದೆಷ್ಟೇ ಸಣ್ಣದಾಗಿರಲಿ, ಎಂದಿಗೂ ವ್ಯರ್ಥವಾಗದು.

ಈಸೋಪ



ಸಾವಿರ ಮೈಲು ದೂರದ ಯಾತ್ರೆ ಆರಂಭವಾಗುವುದು ಒಂದೇ ಒಂದು ಹೆಜ್ಜೆಯಿಂದ.

ಲಾವೋ ತ್ಸು



ನಿಜವಾದ ಸ್ನೇಹಿತರು ತಮ್ಮ ಪ್ರೀತಿಯನ್ನು ತೋರಿಸುವುದು ವಿಪತ್ತು ಬಂದಾಗ, ಸಂತಸದ ಗಳಿಗೆಯಲ್ಲಲ್ಲ.

ಯೂರಿಪಿಡಿಸ್



ಬೆಂಕಿಯಿಲ್ಲದೆ ದೀಪ ಉರಿಯಲಾರದು. ಅಂತೆಯೇ, ಆಧ್ಯಾತ್ಮಿಕ ಜೀವನವಿಲ್ಲದೆ ಮನುಷ್ಯ ಬದುಕಲಾರ.

ಭಗವಾನ್ ಬುದ್ಧ

ರಾಮಕೃಷ್ಣ ಮಠ

(ನಿರಂಜನಾನಂದ ಧಾಮ), ಗ್ರಾಮ: ವಿಷ್ಣುಪುರ (ಘೋಷ್‌ಪಾರ)
ಅಂಚೆ: ರಾಜಾರ್‌ಹಾಟ್ ವಿಷ್ಣುಪುರ, ಪಶ್ಚಿಮ ಬಂಗಾಳ 700135
ಫೋನ್: 7699648789
Email: rkm.rajarhat@gmail.com, www.rkmrajarhat.org
www.facebook.com/RKMRajarhatBishnupur/





ಆತ್ಮೀಯ ಭಕ್ತರೇ ಹಾಗೂ ಹಿತೈಷಿಗಳೇ,

ಪಶ್ಚಿಮ ಬಂಗಾಳದ ರಾಜಾರ್‌ಹಾಟ್ ವಿಷ್ಣುಪುರದಲ್ಲಿರುವ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಶಾಖಾಕೇಂದ್ರವಾದ ರಾಮಕೃಷ್ಣ ಮಠವು ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ನಿರಂಜನಾನಂದರ ಜನ್ಮಸ್ಥಳವಾಗಿದೆ. ನಮ್ಮ ಧ್ಯೇಯಗಳೆಲ್ಲವೂ ಅನುಷ್ಠಾನ ವೇದಾಂತ ತತ್ತ್ವಗಳನ್ನು ಆಧರಿಸಿವೆ. ಈ ಶಾಖಾ ಕೇಂದ್ರದ ಪ್ರಮುಖ ಚಟುವಟಿಕೆಗಳು ಹೀಗಿವೆ:

- ಆಧ್ಯಾತ್ಮಿಕ ಪ್ರವಚನ (ಭಗವದ್ಗೀತೆ, ಕಥಾಮೃತ (ವಚನವೇದ), ಜಪಯಜ್ಞ, ಭಕ್ತ ಸಮಾಗಮ ಇತ್ಯಾದಿ)
- ೧೫೦ ಮಂದಿ ವಿದ್ಯಾರ್ಥಿಗಳಿಗೆ ಸರ್ವಾಂಗೀಣ ಸಹಾಯ-ತರಗತಿ ೧-೧೨ (ಅಧ್ಯಯನ, ದೈಹಿಕ ಶಿಕ್ಷಣ ತರಬೇತಿ, ಆಹಾರ ವ್ಯವಸ್ಥೆ, ಸಂಗೀತ ಹಾಗೂ ಚಿತ್ರಕಲೆ
- ಯುವಕರಿಗಾಗಿ ವೃತ್ತಿಪರ ತರಬೇತಿ, ಮೌಲ್ಯ ಶಿಕ್ಷಣ ತರಬೇತಿ
- ವಿಧವೆಯರಿಗೆ ಹಾಗೂ ವೃದ್ಧರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಪರಿಹಾರ ಕಾರ್ಯಗಳು

ನಮ್ಮ ಈ ಯೋಜನೆಗಳಿಗೆ ಉದಾರವಾಗಿ ಧನಸಹಾಯ ಮಾಡಬೇಕೆಂದು ನಿಮ್ಮನ್ನು ನಾವು ಕೋರುತ್ತೇವೆ. ಚೆಕ್, ಡ್ರಾಫ್ಟ್‌ಗಳನ್ನು ''Ramakrishna Math, Rajarhat Bishnupur'' ಎಂಬ ಹೆಸರಿನಲ್ಲಿ ತೆಗೆದು, ನಮ್ಮ ವಿಳಾಸಕ್ಕೆ ಕಳುಹಿಸಬೇಕು: Ramakrishna Math, (Niranjan Dham), Village: Bishnupur (Ghoshpara), P.O. Rajarhat Bishnupur, P.S. Rajarhat, West Bengal 700135, Ph: 7699648789. ಹಣವನ್ನು ಬ್ಯಾಂಕಿಗೆ ನೇರ ವರ್ಗಾವಣೆ ಮಾಡಬಹುದು. (A/c No. 30496330847, State Bank of India, IFS Code: SBIN0006208, Branch : Luahati) ಎಲ್ಲ ದೇಣಿಗೆ, ಕಾಣಿಕೆಗಳಿಗೂ ಕೃತಜ್ಞತೆ ಸಲ್ಲಿಸಲಾಗುವುದು. ದಿವ್ಯತ್ರಯರ ಹಾಗೂ ಸ್ವಾಮಿ ನಿರಂಜನಾನಂದರ ಕೃಪೆ ಸದಾ ನಿಮ್ಮ ಮೇಲಿರಲಿ ಎಂಬುದೇ ನಮ್ಮ ಪ್ರಾರ್ಥನೆ.

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ಹರಿಮಯಾನಂದ
ಅಧ್ಯಕ್ಷರು









ವಾರ್ಷಿಕ ಧನಸಂಗ್ರಹ ಯೋಜನೆ

೧.	ವಿದ್ಯಾರ್ಥಿಗಳಿಗೆ ತಗಲುವ ವೆಚ್ಚ	10,00,000
೨.	ನೈತಿಕ ಶಿಕ್ಷಣ ಯೋಜನೆ	5,00,000
೩.	ವೃತ್ತಿಪರ ತರಬೇತಿ (ಕಂಪ್ಯೂಟರ್, ಹೊಲಿಗೆ)	5,00,000
೪.	ಗುರುಮಹಾರಾಜರ ಸೇವಾನಿಧಿ	5,00,000
೫.	ಸಾಧುಸೇವಾ ನಿಧಿ	5,00,000
೬.	ಪ್ರವಚನಕ್ಕಾಗಿ ದೃಶ್ಯಶ್ರಾವ್ಯ ಮಾಧ್ಯಮದ ಸಲಕರಣೆಗಳು	1,00,000
೭.	ವಿಧವೆಯರಿಗೆ ಹಾಗೂ ವೃದ್ಧರಿಗೆ ಪರಿಹಾರಕಾರ್ಯ	10,00,000



ಸಂಪಾದಕೀಯ

ಬೆಳಕ ಬೀರುವ ಹಾದಿ

ಭಾಗ ೨

ಪ್ರಪಂಚದಲ್ಲಿ ಧರ್ಮಗಳ ಉಗಮ, ಮಹಾಪುರುಷರ ಹಾಗೂ ದೈವೀ ವ್ಯಕ್ತಿತ್ವಗಳ ಆವಿರ್ಭಾವ ಹೇಗೆ ಅಲೌಕಿಕ ಸತ್ಯ ಹಾಗೂ ಅದರ ಅನುಭವದಲ್ಲೇ ಕೇಂದ್ರಿತವಾಗಿತ್ತು ಎಂಬ ವಿಷಯ ವನ್ನು ಹಿಂದಿನ ಸಂಚಿಕೆಯಲ್ಲಿ ಗಮನಿಸಿದೆವು. ಇಂಥ ಅಲೌಕಿಕ ಅನುಭವಗಳ ಸ್ವರೂಪವೇನು? ಅದರ ವ್ಯಾಪಕತೆ, ಪ್ರಪಂಚದಲ್ಲಿ ಅದರ ಪ್ರಭಾವ, ಮಾನವನ ಜೀವನದ ಮೇಲೆ ಅದು ಮಾಡಿದ ಪ್ರಭಾವ – ಈ ವಿಷಯಗಳನ್ನು ಕುರಿತು ಇಲ್ಲಿ ಚರ್ಚಿಸೋಣ:

ಆಧ್ಯಾತ್ಮಿಕ ಮಹಾಪುರುಷರ ಅಲೌಕಿಕ ಅನುಭವ

ಜಗತ್ತಿನ ಧರ್ಮಗಳಲ್ಲೆಲ್ಲ ಬಹಳ ಪ್ರಾಚೀನ ಕಾಲದಿಂದಲೇ ಅನೇಕ ಮಂದಿ ಮಹಾಪುರುಷರು ಆಗಿಹೋಗಿದ್ದಾರೆ. ಅವರಲ್ಲಿ ಧರ್ಮಸಂಸ್ಥಾಪಕರು, ಅವರ ಒಡನಾಡಿಗಳು, ಇನ್ನಿತರ ಸಮ ಕಾಲೀನ ಸಾಧಕರು ಹಾಗೂ ಮುಂದೆ ವಿವಿಧ ಕಾಲಘಟ್ಟಗಳಲ್ಲಿ ಆಗಿಹೋದ ಸಾಧು-ಸಂತರುಗಳು ತಮ್ಮ ಅಸಾಧಾರಣ ಆಧ್ಯಾ ತ್ಮಿಕ ಅನುಭವಗಳಿಂದಲೇ ಜನರ ಶ್ರದ್ಧೆ, ಗೌರವಗಳಿಗೆ ಪಾತ್ರರಾದು ದನ್ನು ನಾವು ಕಾಣುತ್ತೇವೆ. ಈ ಅನುಭವಗಳು ಈ ವ್ಯಕ್ತ ಪ್ರಪಂಚ ವನ್ನು ಮೀರಿದ್ದೂ, ಇಂದ್ರಿಯಗಳಿಗೆ ಅಗೋಚರವಾದ ಬೇರೆಯೇ ಒಂದು ನೆಲೆಗೆ ಸೇರಿದ್ದೂ ಆಗಿತ್ತೆಂದು ಅವರ ಅನುಭವಗಳ ವಿವ ರಣೆಗಳಿಂದ ತಿಳಿದುಬರುತ್ತದೆ. ಭಾರತದಲ್ಲಿ ಇಂತಹ ಮಹಾತ್ಮರ ದೊಡ್ಡ ಪರಂಪರೆ ಅನಾದಿಕಾಲದಿಂದ ಇತ್ತೀಚಿನವರೆಗೂ ಮುಂದು ವರಿದುಕೊಂಡು ಬಂದಿತು. ಇವರಲ್ಲೂ ಹಲವು ಶ್ರೇಣಿಯ, ವಿಭಿನ್ನ ಆಧ್ಯಾತ್ಮಿಕ ಸ್ತರಗಳ ಮಹಾತ್ಮರು ಕಂಡುಬರುತ್ತಾರೆ. ಈ ಕುರಿತು ಸ್ವಾಮಿ ಶಾರದಾನಂದರು ಹೇಳುತ್ತಾರೆ: ''ಭಗವಂತನ ದರ್ಶನದ ಮೇಲೆಯೇ ಭಾರತದ ಧರ್ಮ ಪ್ರತಿಷ್ಠಿತವಾಗಿದೆ ಎಂಬುದನ್ನು ಸಹಜವಾಗಿಯೇ ಊಹಿಸಬಹುದು. ವೈದಿಕ ಕಾಲದಿಂದಲೂ ಧರ್ಮಸಂಸ್ಥಾಪಕರಾದ ಆಚಾರ್ಯರು – ಋಷಿ, ಆಪ್ತ, ಅಧಿ ಕಾರಿ, ಪ್ರಕೃತಿಲೀನ ಪುರುಷ ಮುಂತಾದ ಹೆಸರಿನಿಂದ ಕರೆಯಲ್ಪಟ್ಟಿ ದ್ದಾರೆ. ಇದರಿಂದಲೇ ಮೇಲಿನ ಮಾತು ಸ್ಪಷ್ಟವಾಗುತ್ತದೆ. ಇವರೆಲ್ಲ ಇಂದ್ರಿಯಾತೀತ ವಸ್ತುವನ್ನು ಸಾಕ್ಷಾತ್ಕರಿಸಿಕೊಂಡು ಅಸಾಧಾರಣ ಶಕ್ತಿಯನ್ನು ಪಡೆದಿದ್ದುದ್ದರಿಂದಲೇ ಇವರು ಈ ಮೇಲಿನ ಹೆಸರು ಗಳಿಂದ ಕರೆಯಲ್ಪಟ್ಟಿದ್ದಾರೆ. ವೈದಿಕ ಕಾಲದ ಋಷಿಗಳಿಂದ ಹಿಡಿದು ಪುರಾಣಯುಗದ ಅವತಾರಪುರುಷರೆಲ್ಲರಿಗೂ ಈ ಮಾತು ಸಮಾನ ವಾಗಿ ಅನ್ವಯಿಸುತ್ತದೆ... ಅವರಲ್ಲಿ ಕೆಲವರು ಆಧ್ಯಾತ್ಮಿಕ ಜಗತ್ತಿನ ಸೂರ್ಯನಂತಿದ್ದರೆ, ಇನ್ನು ಕೆಲವರು ಚಂದ್ರನಂತೆ, ಮತ್ತೆ ಕೆಲ ವರು ನಕ್ಷತ್ರ ಸಮಾನರು, ಇನ್ನು ಕೆಲವರು ಸಾಮಾನ್ಯ ದೀಪ ವಿದ್ದಂತೆ...'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಸಂ.೧, ಪು.೨)* ವೈದಿಕ ಕಾಲದಲ್ಲಿ ಮಹಾತ್ಮರ ಈ ಶಕ್ತಿ-ಸಾಮರ್ಥ್ಯಗಳಲ್ಲಿನ ತಾರತಮ್ಯ ತಿಳಿಯದೆ, ಎಲ್ಲರನ್ನು 'ಋಷಿ'ಗಳೆಂದೇ ಕರೆದರೆಂದೂ, ಮುಂದೆ ಪುರಾಣಗಳ ಕಾಲದಲ್ಲಿ ಅವತಾರ ಪುರುಷರು ಆಧ್ಯಾತ್ಮಿಕತೆಯಲ್ಲಿ ಎಲ್ಲರನ್ನೂ ಮೀರಿದವರಾಗಿದ್ದರು ಎಂಬುದು ತಿಳಿದುಬಂತೆಂದೂ ಇಲ್ಲಿ ಹೇಳುತ್ತಾರೆ. ಕೇವಲ ಭಾರತದ ಮಹಾಪುರುಷರನ್ನು ಕುರಿತು ಹೇಳಿರುವ ಈ ವಿಷಯಗಳು ಪ್ರಪಂಚದ ಇತರ ಆಧ್ಯಾತ್ಮಿಕ ಮಹಾಪುರುಷರಿಗೂ ಅನ್ವಯಿಸುತ್ತವೆ. ಅವರ ತಾರತಮ್ಯ, ಶಕ್ತಿ ಭೇದ ಹಾಗೂ ಮಹಿಮಾತಿಶಯಗಳನ್ನು ಅರಿತುಕೊಳ್ಳುವುದು ಅಂಥ ಅನುಭವವನ್ನು ಪಡೆದವರಿಗೆ ಮಾತ್ರ ಶಕ್ಯವೆಂಬುದನ್ನಿಲ್ಲಿ ನಾವು ಮರೆಯಬಾರದು.

ಆಧ್ಯಾತ್ಮಿಕ ಅನುಭವಗಳ ಅನಿರ್ವಚನೀಯತೆ

ದಿವ್ಯ ವ್ಯಕ್ತಿತ್ವವನ್ನು ಹೊಂದಿದ್ದ ಮಹಾಪುರುಷರು ಪಡೆದ ಅಲೌಕಿಕ ಅನುಭವಗಳಾದರೂ ಎಂಥವು? ಅವುಗಳನ್ನು ಅವರು ಹೇಗೆ ವಿವರಿಸಿದ್ದಾರೆ? ನಾವು ಅವುಗಳನ್ನು ಹೇಗೆ ಅರ್ಥೈಸಿಕೊಳ್ಳ ಬೇಕು? — ಇಂಥ ಪ್ರಶ್ನೆಗಳಿಲ್ಲಿ ಮೂಡುವುದು ಸಹಜ. ಇಲ್ಲಿ ಅಪರಿಹಾರ್ಯವಾದ ಒಂದು ಸಮಸ್ಯೆಯನ್ನು ನಾವು ಗಮನಿಸ ಬೇಕು. ಮಹಾಪುರುಷರೆಲ್ಲ ತಮಗಾದ ದಿವ್ಯ ಅನುಭವಗಳು ಅಗಾಧವೂ, ಅಸಾಧಾರಣವೂ ಈ ಲೋಕವನ್ನು ಮೀರಿದ್ದೆಂದೂ ಹೇಳುತ್ತಾರೆ; ಅವುಗಳ ದಿವ್ಯಸ್ಮೃತಿ, ಅಚ್ಚಳಿಯದ ಮುದ್ರೆ ಅವರ ಚಿತ್ತದಲ್ಲಿ ಚಿರಕಾಲವೂ ಉಳಿಯುವಂತೆ ವರ್ಣಿಸುತ್ತಾರೆ. ಆದರೆ, ನಿಜವಾಗಿಯೂ ಅವರಿಗೆ ಆದ ಅನುಭವ, ದರ್ಶನ ಎಂಥದು? –

ಇದನ್ನು ಮಾತ್ರ ಸ್ಪಷ್ಟವಾಗಿ ವಿವರಿಸಲಾರರು. ಹೆಚ್ಚೆಂದರೆ 'ಅಗಮ್ಯ' 'ಅಗೋಚರ'ವೆಂದೂ 'ಅನಿರ್ವಚನೀಯ' – ಎಂದರೆ ಮಾತಿಗೆ ನಿಲುಕದ್ದು, ಹಾಗಾಗಿ ವಿವರಿಸಲಾಗದ್ದೆಂದೂ ಹಲವೆಡೆ ಹೇಳಿದ್ದಿದೆ. ಇದರರ್ಥ, ದಿವ್ಯಾನುಭವ ಯಾರಿಗೆ ಆಗಿದೆಯೋ ಅವರಿಗೆ ಮಾತ್ರ ಅದು ಅರ್ಥವಾಗುವುದು. ಅದನ್ನು ಮಾತಿನ ಮೂಲಕ, ಮನಸ್ಸು–ಬುದ್ಧಿಗಳ ಮೂಲಕ ವಿವರಿಸಲಾಗುವುದಿಲ್ಲ. ಏಕೆಂದರೆ, ಆ ಅನುಭವ ಮನಸ್ಸು–ಬುದ್ಧಿ–ಭಾಷೆಗಳ ಹಾಗೂ ಪ್ರಾಪಂಚಿಕ ಗ್ರಹಿಕೆಯನ್ನೇ ಮೀರಿದ ಒಂದು ಉಚ್ಚ ಸ್ತರದ ಸ್ಥಿತಿ. ಅದನ್ನು ವರ್ಣಿಸಲಾಗದ ಕಾರಣ, ಅದರ ಅನುಭವವಾಗದವರಿಗೆ ಅದು ಅರ್ಥವಾಗುವಂತಿಲ್ಲ. ಅಂದರೆ, ಆಧ್ಯಾತ್ಮಿಕ ಅನುಭವವನ್ನು ಕುರಿತು ನಾವು ತಿಳಿದುಕೊಳ್ಳುವುದೆಲ್ಲ ಕೇವಲ ಊಹೆ, ಕಲ್ಪನೆ ಎಂದಷ್ಟೇ ಎಂದಂತಾಗುವುದು. ಇದನ್ನು ಕುರಿತು ಶ್ರೀರಾಮಕೃಷ್ಣರಿಗೆ ಸಂಬಂಧಿಸಿದ ಘಟನೆಯೊಂದಿದೆ. ಸಮಾಧಿ ಎಂದರೆ ಆಧ್ಯಾತ್ಮಿಕ ಅನುಭವಗಳಲ್ಲೆಲ್ಲ ಅತ್ಯುನ್ನತವಾದ ಹಂತ. ಅಂಥ ಅವಸ್ಥೆಯಲ್ಲಾಗುವ ಅನುಭವವನ್ನು ಕುರಿತು ವಿವರಿಸಲು ಶ್ರೀರಾಮಕೃಷ್ಣರ ಶಿಷ್ಯರೆಲ್ಲ ಅವರನ್ನು ಒತ್ತಾಯಿಸಿದರು. ಒಂದು ಸಲ ಅವರು ಹೀಗೆಂದರು, ''ಇಂದು ನಿಮಗೆ ಎಲ್ಲ ಹೇಳಿಬಿಡುತ್ತೇನೆ, ಏನನ್ನೂ ಬಚ್ಚಿಡುವುದಿಲ್ಲ.'' ಹೀಗೆ ಅವರು ಪರಮಾತ್ಮನ ದರ್ಶನವನ್ನು ಕುರಿತು ಹೇಳತೊಡಗುತ್ತಿದ್ದಂತೆಯೇ ಸಮಾಧಿಸ್ಥರಾಗಿಬಿಟ್ಟರು! ಆ ಹಂತದಿಂದ ಸಾಮಾನ್ಯ ಹಂತಕ್ಕೆ ಇಳಿದು ಬಂದ ಮೇಲೆ ಅವರು ತಮ್ಮ ಅಸಹಾಯಕತೆಯನ್ನು ತೋರ್ಪಡಿಸುತ್ತ, ''ತಾಯಿ ನನ್ನನ್ನು ಹೇಳಲು ಬಿಡುವುದಿಲ್ಲ'' ಎಂದರು. ''ಮಾತುಕತೆ ನಡೆಯುವುದು ಮನಸ್ಸು, ಬುದ್ಧಿಗಳ ಸಹಾಯದಿಂದ. ಅವು ಬಹುದೂರ ಹೋಗುವುದಿಲ್ಲ. ಆದ್ದರಿಂದಲೇ ಪರಮಹಂಸರು ಅದನ್ನು ವರ್ಣಿಸ ಲಾಗಲಿಲ್ಲ'' ಎನ್ನುತ್ತಾರೆ ಸ್ವಾಮಿ ಶಾರದಾನಂದರು. *(ಲೀಲಾಪ್ರಸಂಗ, ಸಂ.೧, ಪು. ೪೦೫)* ಈ ಮಿತಿಯನ್ನು ಗಮನದಲ್ಲಿಟ್ಟುಕೊಂಡೇ ಆಧ್ಯಾತ್ಮಿಕ ವ್ಯಕ್ತಿಗಳ ಅಲೌಕಿಕ ಅನುಭವಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು.

ದಿವ್ಯಾನುಭವಗಳು : ವೇದ, ಉಪನಿಷತ್ತುಗಳಲ್ಲಿ

ಈ ಹಿಂದೆಯೇ ನಾವು ನೋಡಿರುವಂತೆ ವೇದಗಳೇ ಜಗತ್ತಿನ ಧಾರ್ಮಿಕ ಮುಂಬೆಳಗಿನಲ್ಲಿ ಮೂಡಿಬಂದ ಮೊದಲ ಬೆಳಕಿನ ರೇಖೆಗಳು. ಅವುಗಳು ಉದಯಿಸಿ ಬಂದುದು ಪ್ರಾಚೀನ ಋಷಿಗಳ ಗಾಢ ಧ್ಯಾನದ ಆಳದಿಂದ, ಕಾವ್ಯಮಯ ಹೃದಯಗರ್ಭದಿಂದ. ವೇದಮಂತ್ರಗಳಲ್ಲಿ ಕಂಡುಬರುವ ಉಪಾಸನೆ, ಸ್ತುತಿರೂಪದ ಸೂಕ್ತಗಳಲ್ಲಿ ಅಲ್ಲಲ್ಲಿ ಪಾರಮಾರ್ಥಿಕ ದಿವ್ಯಾನುಭವದ ಮಿಂಚುಗಳು ಕಂಡುಬರುತ್ತವೆ. ಮಾತು, ಮನಸ್ಸಿಗೆ ನಿಲುಕದ ಅತೀತದ ಅನುಭವದ ಮಿಂಚುಗಳ ಸ್ಮೃತಿಯೊಂದೇ ಅಲ್ಲಿ ಅಚ್ಚರಿಯ ಧನ್ಯತೆಯಾಗಿ ಮಡುಗಟ್ಟಿ ನಿಲ್ಲುತ್ತದೆ : ''ಮಹಿಮಾವಂತನಾದ ಆ ದಿವ್ಯಪುರುಷನನ್ನು ನಾನು ಅರಿತೆನು. ಅವನು ಸೂರ್ಯನಂತೆ ಪ್ರಜ್ವಲನೂ, ಎಲ್ಲ ಕತ್ತಲೆಯನ್ನು ದಾಟಿದವನೂ ಆಗಿದ್ದಾನೆ... ಅವನನ್ನು ಅರಿತುಕೊಂಡ ಜ್ಞಾನಿಯು ಅಮೃತತ್ತ್ವವನ್ನು ಹೊಂದುತ್ತಾನೆ. ಇದಕ್ಕೆ ಬೇರೊಂದು ಮಾರ್ಗವೇ ಇಲ್ಲ.'' *(ಪುರುಷಸೂಕ್ತ, ೭)*

ಆದರೆ, ವೇದಗಳಲ್ಲಿ ಉದ್ದಕ್ಕೂ ಕಂಡುಬರುವುದು ಪಾರಮಾರ್ಥಿಕ ಸತ್ಯದ ನಿರಂತರ ಅನ್ವೇಷಣೆ. ವಿವಿಧ ದೇವತೆಗಳ, ವಿವಿಧ ಶಕ್ತಿಗಳ ಉಪಾಸನೆ, ಆರಾಧನೆ ಅಲ್ಲಿ ನಡೆಯುತ್ತದೆ; ಮಾತು–ಬುದ್ಧಿಗಳಾಚೆಗೆ ಅವ್ಯಕ್ತ ರೂಪದಿಂದಿದ್ದು ಮರೆಯಾಗಿರುವ ಸತ್ಯವನ್ನು ಕಂಡುಕೊಳ್ಳಲು ಮಾನವನು ನಡೆಸಿದ ಅವಿರತ ಪ್ರಯತ್ನ, ಹೋರಾಟ, ಛಲ, ತಪಸ್ಸುಗಳನ್ನಿಲ್ಲಿ ಕಾಣಬಹುದು. ಸತ್ಯಾನ್ವೇಷಣೆಯಲ್ಲಿ ಅವನಿಗಿದ್ದ ಶ್ರದ್ಧೆ, ಸತ್ಯದರ್ಶನಕ್ಕಾಗಿ ಅವನಲ್ಲಿದ್ದ ಕಾತರತೆ ಅವನನ್ನು ಮುಂದಕ್ಕೆ ಕೊಂಡೊಯ್ದಿತು. ವೇದಗಳ ಕೊನೆಯ ಭಾಗಗಳಲ್ಲಿ (ಇವೇ 'ಉಪನಿಷತ್' ಎನಿಸಿಕೊಳ್ಳುತ್ತವೆ.) ದಾಖಲಾಗಿರುವ ವಿವಿಧ ಅನುಭವಗಳೆಲ್ಲವೂ ಅವರ ಅನ್ವೇಷಣೆಯ ಫಲ. ಆಧ್ಯಾತ್ಮಿಕ ಅನುಭೂತಿಯ ವಿವರಣೆಗಳು ನಮಗೆ ಸ್ಪಷ್ಟವಾಗಿ ದೊರಕುವುದು ಇಲ್ಲೇ.

ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ ದಿವ್ಯಾನುಭವಗಳ ನಿರೂಪಣೆ ಸರಳ ಹಾಗೂ ಸುಂದರ; ಆದರೆ ಆ ಅನುಭವಗಳ ಆಳ ಅಳೆಯಲಾಗದ್ದು. ಅನಿರ್ವಚನೀಯ ಅನುಭವಗಳನ್ನು ಮಾತಿನ ಮೂಲಕ ಹಿಡಿದಿಡಲಾಗದು. ಇದರ ಅರಿವಿದ್ದೂ ಉಪನಿಷತ್ತುಗಳು ಈ ಸಾಹಸಕ್ಕೆ ಕೈ ಹಾಕುತ್ತವೆ. ''ಅಲ್ಲಿಗೆ ಕಣ್ಣು, ಮಾತು, ಮನಸ್ಸು ಹೋಗುವುದಿಲ್ಲ. ಆ ಸತ್ಯ ಹೇಗಿದೆಯೆಂಬುದನ್ನು ನಾವು ಅರಿಯೆವು. ಅದನ್ನು ಹೇಗೆ ತಿಳಿಸಿಕೊಡಬೇಕೋ ತಿಳಿಯಲಾರೆವು'' *(ಕೇನೋಪನಿಷತ್ತು, ೧.೩)* ಎಂದು ಹೇಳುತ್ತಲೇ ಮುಂದೆ, ''ಮಿಂಚಿನ ಹೊಳಪಿನಂತೆ, ಕಣ್ಣುಮಿಟುಕಿಸಿದಂತೆ ಈ ಸತ್ಯವು ಕ್ಷಿಪ್ರವಾಗಿ ತೋರಿ ಮಾಯವಾಗುತ್ತದೆ'' ಎನ್ನಲಾಗಿದೆ *(ಅಲ್ಲೇ, ೪.೪)*. ಅಗೋಚರ ಸತ್ಯವನ್ನು ವರ್ಣಿಸುವಾಗ ಅನೇಕ ವೇಳೆ ಉಪಮೆ, ರೂಪಕಗಳಿಂದ ಕೂಡಿದ ವಿವರಣೆ ಕಂಡುಬರುತ್ತದೆ (ಮೇಲಿನ ಉದಾಹರಣೆಯಲ್ಲಿರುವಂತೆ). ಇನ್ನು, ಅನೇಕ ಕಡೆ ವಿರುದ್ಧ ಸಂಗತಿಗಳನ್ನು ಒಂದೆಡೆ ತಂದು ಜೋಡಿಸುತ್ತಾರೆ: ''ಅದು ಚಲಿಸುತ್ತದೆ; ಆದರೆ ಚಲಿಸುವುದಿಲ್ಲ. ಅದು ಅತ್ಯಂತ ದೂರದಲ್ಲಿದೆ; ಆದರೆ ಅತ್ಯಂತ ಹತ್ತಿರವಿದೆ. ಅದು ಎಲ್ಲದರ ಒಳಗೂ ಇದೆ, ಹೊರಗೂ ಇದೆ'' *(ಈಶೋಪನಿಷತ್ತು, ೫)*. ''ಆ ಬ್ರಹ್ಮವು ಅಣುವಿಗಿಂತ ಅಣುವಾಗಿಯೂ, ಅತಿದೊಡ್ಡ ವಸ್ತುವಿಗಿಂತ ಇನ್ನೂ ದೊಡ್ಡದಾಗಿಯೂ ಇದೆ.'' *(ಕಠೋಪನಿಷತ್ತು, ೧.೨.೨೧)*.

ಉಪನಿಷತ್ತುಗಳಲ್ಲಿ ಕಂಡುಬರುವ ದಿವ್ಯಾನುಭವಗಳ ಸ್ವರೂಪವನ್ನು ಹೀಗೆ ಸಮೀಕರಿಸಿ ಹೇಳುತ್ತಾರೆ: **ಸತ್** (ಇರುವಿಕೆ, ಅಸ್ತಿತ್ವ), **ಚಿತ್** (ಪ್ರಜ್ಞೆ, ಅರಿವು) ಹಾಗೂ **ಆನಂದ** (ದಿವ್ಯಾನುಭವದ ಅಮಿತ ಆನಂದ). ಈ 'ಸತ್–ಚಿತ್–ಆನಂದ' ವೆಂಬ ಮೂರು ಲಕ್ಷಣಗಳು ಉಪನಿಷತ್ತುಗಳಲ್ಲಿ ಒಂದೆಡೆ ಒಂದೇ ಮಾತಿನಲ್ಲಿ ಕಂಡುಬರುವುದಿಲ್ಲ; ಆದರೆ ವಿವಿಧ ಉಪನಿಷತ್ತುಗಳಲ್ಲಿ ಕಾಣಿಸುವ ಆತ್ಮನ ಲಕ್ಷಣಗಳ ಸಾರವೇ ಇದಾಗಿದೆ. ತೈತ್ತಿರೀಯ ಉಪನಿಷತ್ತಿನಲ್ಲಿ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದೂ, ಬೃಹದಾರಣ್ಯಕೋಪನಿಷತ್ತಿನಲ್ಲಿ 'ವಿಜ್ಞಾನಮಾನಂದಂ ಬ್ರಹ್ಮ' ಎಂದೂ ಹೇಳಲಾಗಿದೆ. ಈ ಮೂರು ಲಕ್ಷಣಗಳನ್ನೇ ಇನ್ನೊಂದು ರೀತಿಯಲ್ಲಿ 'ಅಸ್ತಿ–ಭಾತಿ–ಪ್ರಿಯಂ' (ಇರುತ್ತದೆ, ಬೆಳಗುತ್ತದೆ, ಪ್ರಿಯವಾಗಿದೆ)

ಎಂದೂ ಹೇಳುತ್ತಾರೆ. ಇಡೀ ವಿಶ್ವದ ಮೂಲ ನಿಯಮಗಳಿವು. ಪ್ರತಿಯೊಂದು ವಸ್ತುವೂ, ಪ್ರತಿಯೊಂದು ಜೀವಜಾಲವೂ ಈ ಮೂರು ಲಕ್ಷಣಗಳಿಂದಲೇ ನಿರ್ಮಿತವಾಗಿವೆ; ಅಂತಿಮವಾಗಿ ಅವುಗಳಲ್ಲೇ ಲಯಹೊಂದುತ್ತವೆ. ಯಾರು ಈ ಸತ್ಯವನ್ನು ಅರಿತಿದ್ದಾನೋ ಅವನಿಗೆ ಈ ಪ್ರಪಂಚವೆಲ್ಲವೂ ಆ ಸತ್ಯದ ಅಭಿವ್ಯಕ್ತಿಯಾಗಿ ಕಂಡುಬರುತ್ತದೆ.

ದಿವ್ಯಾನುಭವವನ್ನು ಪಡೆದವನಿಗೆ ಏನಾಗುತ್ತದೆ? ೧) ಅವನು ಮುಂದೆ ಏನನ್ನೂ ಬಯಸುವುದಿಲ್ಲ, ಯಾವ ಕಾರಣದಿಂದಲೂ ಶೋಕಿಸುವುದಿಲ್ಲ.('ನ ಶೋಚತಿ ನ ಕಾಂಕ್ಷತಿ') ಏಕೆಂದರೆ ಅವನು ಪರಿಪೂರ್ಣತೆಯನ್ನು ಹೊಂದುತ್ತಾನೆ; ಪೂರ್ಣ ತೃಪ್ತಿಯನ್ನು ಹೊಂದುತ್ತಾನೆ. ಅವನು ಹೊಂದಬೇಕಾದದ್ದೇನೂ ಉಳಿದಿರುವುದಿಲ್ಲ. ೨) ಅವನು ಮೃತ್ಯುವನ್ನು ದಾಟಿ ಹೋಗುತ್ತಾನೆ, ಮರಣವೇ ಇಲ್ಲದ ಸ್ಥಿತಿಯನ್ನು ಹೊಂದಿ ಅಮರನಾಗುತ್ತಾನೆ. ೩) ಅವನ ದೇಹ ಜೀವಂತವಿರುವವರೆಗೂ ಅವನು ಜಗತ್ತಿನ ಏರುಪೇರುಗಳಿಗೆ ನಿರ್ಲಿಪ್ತನಾಗಿರುತ್ತಾನೆ. ಬಾಹ್ಯಜಗತ್ತಿನ ದ್ವಂದ್ವಗಳು ಅವನನ್ನು ಬಾಧಿಸಲಾರವು. ೪) ಅವನಿಗೆ ಎಲ್ಲ ಜ್ಞಾನವೂ ಬಂದೊದಗುತ್ತದೆ. ಏಕೆಂದರೆ, ಅವನ ದಿವ್ಯದೃಷ್ಟಿ ತೆರೆಯಲ್ಪಡುವುದು. ಅವನು ಆ ಪರಮಸತ್ಯವಾದ ಬ್ರಹ್ಮದಲ್ಲಿ ಒಂದಾಗುತ್ತಾನೆ.

ಹೀಗೆ ವೇದಗಳಲ್ಲಿ ಅವ್ಯಕ್ತ ತತ್ತ್ವದ, ಅಗೋಚರ ಸತ್ಯದ ಅನ್ವೇಷಣೆಯಿದೆ, ಆ ಸತ್ಯದ ಇರುವಿಕೆಯಲ್ಲಿ ಅಸಾಧಾರಣ ನಂಬಿಕೆಯಿದೆ. ಮುಂದೆ ತಪಸ್ಸು, ಧ್ಯಾನ, ಸಾಧನೆಗಳಿಂದ ಅಂತಹ ಸತ್ಯದ ದಿವ್ಯದರ್ಶನವಾಗುವುದು; ಇಂಥ ಆಧ್ಯಾತ್ಮಿಕ ಅನುಭವದಲ್ಲೇ ಮಾನವನ ಜೀವನದ ಸಾರ್ಥಕತೆ ಎಂಬ ಸಂದೇಶವೂ ಇಲ್ಲಿದೆ. ಇಂಥ ದಿವ್ಯಾನುಭವವನ್ನು ಹೊಂದಬೇಕಾದರೆ ಮಾರ್ಗವೇನು? ಉಪನಿಷತ್ತುಗಳಲ್ಲಿ ಇದನ್ನು ಹಲವು ರೀತಿಯಲ್ಲಿ ವಿವರಿಸಲಾಗಿದೆ. ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಮುಂದೆ ಕಂಡುಬರುವ ಅನೇಕ ದರ್ಶನಗಳಿಗೂ, ದ್ವೈತ-ಅದ್ವೈತ-ವಿಶಿಷ್ಟಾದ್ವೈತವೇ ಮೊದಲಾದ ತತ್ತ್ವಗಳಿಗೂ, ಶೈವ-ವೈಷ್ಣವ- ಸ್ಮಾರ್ತ-ಗಾಣಾಪತ್ಯವೇ ಮೊದಲಾದ ಸಂಪ್ರದಾಯಗಳಿಗೂ ಉಪನಿಷತ್ತುಗಳಲ್ಲಿನ ಈ ಸಾಧನಕ್ರಮಗಳೇ ದಾರಿ ಮಾಡಿಕೊಟ್ಟವು ಎಂಬುದು ಇಲ್ಲಿ ಗಮನಿಸಬೇಕಾದ ಪ್ರಧಾನ ಸಂಗತಿಯಾಗಿದೆ.

ದಿವ್ಯಾನುಭವ: ತಾರ್ಕಿಕ ಜಿಜ್ಞಾಸೆ

ಮಾನವನು ತನ್ನ ಗ್ರಹಿಕೆಗೆ ನಿಲುಕುವ ಪ್ರತಿಯೊಂದನ್ನೂ ಪರೀಕ್ಷೆಗೆ ಒಡ್ಡುತ್ತಾನೆ. ತರ್ಕದ, ವಿಚಾರದ ಮೂಸೆಯಲ್ಲಿ ತನ್ನ ಪ್ರತಿಯೊಂದು ಅನುಭವವನ್ನೂ ಒರೆಗೆ ಹಚ್ಚುತ್ತಾನೆ. ಇದು ಭಾರತದಲ್ಲೂ ನಡೆಯಿತು, ಪಾಶ್ಚಾತ್ಯದೇಶಗಳಲ್ಲೂ ನಡೆಯಿತು. ನಮ್ಮಲ್ಲಿ ದೈವೀ ಅನುಭವಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ ಚಾರ್ವಾಕರಂಥವರೂ ಇದ್ದರು; ಆತ್ಮನ ಅಸ್ತಿತ್ವವನ್ನೊಪ್ಪದ ಬೌದ್ಧರಂಥವರೂ ಇದ್ದರು. ಸಾಂಖ್ಯ, ಯೋಗ, ವೈಶೇಷಿಕವೇ ಮೊದಲಾದ ಆಸ್ತಿಕ ದರ್ಶನಗಳಲ್ಲೂ ಆತ್ಯಂತಿಕ ಸತ್ಯದ, ದಿವ್ಯಾನುಭವದ ವಿಚಾರ ಬರುತ್ತದೆ; ಅದು ತರ್ಕದ ಪರೀಕ್ಷೆಗೊಳಗಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಇದಕ್ಕೆ ಜೊತೆಜೊತೆಯಾಗಿ ಅವತಾರ ಪುರುಷರ, ಋಷಿಮುನಿಗಳ, ಸಾಧುಸಂತರುಗಳ ಉಜ್ವಲ ಪರಂಪರೆ ಬೆಳೆದು ಬಂದುದು, ಅವರ ದಿವ್ಯಜೀವನ ಎಲ್ಲ ದಾರ್ಶನಿಕ ಪಂಥಗಳ ವಿದ್ವಾಂಸರನ್ನು ಪ್ರಭಾವಿಸಿದುದು ವಿಶೇಷ. ಇದರಿಂದ ನಮ್ಮಲ್ಲಿ ತಾರ್ಕಿಕ ಪಂಥಗಳೆಲ್ಲ ಆಧ್ಯಾತ್ಮಿಕ ಅನುಭವಗಳಿಗೆ ಹಾಗೂ ದೈವೀ ವ್ಯಕ್ತಿತ್ವಗಳಿಗೆ ಉನ್ನತ ಸ್ಥಾನವನ್ನು ಕೊಟ್ಟಿದ್ದುದನ್ನು ಕಾಣುತ್ತೇವೆ. ಎಲ್ಲ ತರ್ಕಗಳ ಸಿದ್ಧಾಂತದಲ್ಲಿ ದೈವೀಪುರುಷರ ವಾಣಿಗೆ (ಇದೇ 'ಶ್ರುತಿ') ವಿಶೇಷ ಸ್ಥಾನವಿದ್ದುದನ್ನು ಇಲ್ಲಿ ಗಮನಿಸಬೇಕು.

ಪಾಶ್ಚಾತ್ಯ ದೇಶಗಳಲ್ಲಿ ತಾರ್ಕಿಕ ಜಿಜ್ಞಾಸೆ ಬೇರೆಯೇ ಒಂದು ರೀತಿ ಕವಲೊಡೆಯಿತು. ಧಾರ್ಮಿಕ ಪಂಗಡಗಳ ತರ್ಕ ಒಂದೆಡೆ, ತತ್ತ್ವಜ್ಞಾನಿಗಳ ತರ್ಕ ಇನ್ನೊಂದೆಡೆ, ವೈಜ್ಞಾನಿಕ ಅನ್ವೇಷಕರ ತರ್ಕ ಇನ್ನೊಂದೆಡೆ — ಹೀಗೆ ಒಂದಕ್ಕೊಂದು ಹೊಂದಿಕೆಯಾಗದೆ ಮುಂದುವರಿಯಿತು. ಪ್ರಶ್ನಿಸುವ, ಪರೀಕ್ಷಿಸುವ ಹಾಗೂ ಪ್ರಯೋಗದ ಮೂಲಕವೇ ಸಿದ್ಧಾಂತ ಮಾಡುವ ಪ್ರವೃತ್ತಿ ಅಲ್ಲಿ ಉಳಿದೆಲ್ಲ ತಾರ್ಕಿಕ ಪ್ರವಣತೆಗಳನ್ನೂ ಹಿಂದಿಕ್ಕಿತು. ಇದಕ್ಕೆ ಸರಿಸಮನಾಗಿ ಬೆಳೆದು ಬಂದ ವೈಜ್ಞಾನಿಕ ಬೆಳವಣಿಗೆ, ವಿಚಾರವಾದ, ಗಣಿತ-ಭೌತ-ರಸಾಯನ ಶಾಸ್ತ್ರಗಳ ಪ್ರಗತಿ ಉಳಿದೆಲ್ಲ ತಾರ್ಕಿಕ ಪಂಥಗಳಿಗಿಂತ ಹೆಚ್ಚು ಪ್ರಭಾವ ಬೀರಿತು. ಪರಿಣಾಮವಾಗಿ, ಧಾರ್ಮಿಕ ಅನುಭವ ಹಾಗೂ ಆಧ್ಯಾತ್ಮಿಕ ದಿವ್ಯತೆಯ ಅಸ್ತಿತ್ವವನ್ನು ಅಲ್ಲಗಳೆಯುವವರ ಪ್ರಾಬಲ್ಯವೇ ಹೆಚ್ಚಿತು. ಆದರೆ ಪಾಶ್ಚಾತ್ಯ ದೇಶಗಳಲ್ಲೂ ಕಾಲಕಾಲಕ್ಕೆ ಹಲವು ಮಂದಿ ಸಂತರ, ಧಾರ್ಮಿಕ ಮಹಾವ್ಯಕ್ತಿಗಳ ಆವಿರ್ಭಾವ ಅಲ್ಲಿನ ಧಾರ್ಮಿಕ ಪರಂಪರೆಯಲ್ಲಿ ಕಂಡುಬರುವ ದಿವ್ಯಾನುಭವಗಳಿಗೂ ಜೀವತುಂಬಿ, ಆಯಾ ಧರ್ಮಗಳಲ್ಲಿ ಆಧ್ಯಾತ್ಮಿಕ ಸಾಧನೆ, ಮಾರ್ಗ ಉಳಿಯುವಂತೆ ಮಾಡಿತು.

'ಯದ್ಯದ್ವಿಭೂತಿ ಮತ್ ಸತ್ವಂ ಶ್ರೀಮದೂರ್ಜಿತಮೇವ ವಾ। ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಮ್' (ಯಾವ ಯಾವ ವಸ್ತು ವಿಭೂತಿಯುಳ್ಳದ್ದೋ, ಶ್ರೀಯುಕ್ತವೋ ಅಥವಾ ಉತ್ಸಾಹದಿಂದ ಕೂಡಿದೆಯೋ ಅದೆಲ್ಲವೂ ನನ್ನ ತೇಜಸ್ಸಿನ ಒಂದು ಅಂಶದಿಂದ ಉಂಟಾದುದೆಂದು ತಿಳಿದುಕೊ' ಎಂದು ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ. *(ಗೀತೆ. ೧೦.೪೧)*

ಈ ಅರ್ಥದಲ್ಲಿ ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಆದಿಯಿಂದ ಹಿಡಿದು ಇಂದಿನವರೆಗೂ ಮೂಡಿಬಂದ ಹಲವು ಮಂದಿ ದೈವೀಪುರುಷರ, ಸಾಧು-ಸಂತರ, ಮಹಾತ್ಮರ ಹಾಗೂ ಆಧ್ಯಾತ್ಮಿಕ ಸಾಧಕರ ದಿವ್ಯಾನುಭವಗಳೆಲ್ಲ ಸಾಕ್ಷಾತ್ ಭಗವಂತನಿಂದಲೇ ಬಂದವುಗಳು; ಅವುಗಳನ್ನು ಪಡೆಯುವ ಮಾರ್ಗಗಳೂ ಅಂತಿಮವಾಗಿ ಅವನನ್ನೇ ಸೇರಬೇಕು. ಶ್ರೀರಾಮಕೃಷ್ಣರು ಹೇಳುವಂತೆ, 'ಎಷ್ಟು ಮತಗಳೋ, ಅಷ್ಟು ಪಥಗಳು'. ಈ ಅರ್ಥದಲ್ಲಿ ಜಗತ್ತಿನ ಪ್ರತಿಯೊಂದು ಧರ್ಮವೂ ಅದೇ ಭಗವಂತನನ್ನು ಸೇರಲು ಇರುವ ಮಾರ್ಗ. ಈ ಮಾರ್ಗದಲ್ಲಿ ದೀಪವಾಗಿ ನಿಂತವರೇ ಅವತಾರ ಪುರುಷರು. ಅವರ ಅಲೌಕಿಕ ಅನುಭವಗಳೇ ಆ ದೀಪದಿಂದ ಹೊರಸೂಸುವ ಬೆಳಕಿನ ಕಿರಣಗಳು. *(ಮುಂದಿನ ಸಂಚಿಕೆಗೆ)*

ಸಾಧು ಜೀವನ



✽ ಪಂಡಿತನಿಗೂ ಸಾಧುವಿಗೂ ಅಜಗಜಾಂತರ ವ್ಯತ್ಯಾಸ. ಯಾರು ಕೇವಲ ಪಂಡಿತರೋ ಅವರಿಗೆ ಕಾಮಕಾಂಚನಗಳಲ್ಲಿ ಮನಸ್ಸಿರುತ್ತದೆ. ಆದರೆ ಸಾಧುಗಳ ಮನಸ್ಸು ಹರಿಯ ಪಾದ ಪದ್ಮಗಳಲ್ಲಿ ನೆಲೆಸಿರುತ್ತದೆ. ಪಂಡಿತ ಬಾಯಲ್ಲಿ ಹೇಳುವುದು ಒಂದು, ಕೈಯಲ್ಲಿ ಮಾಡುವುದು ಇನ್ನೊಂದು. ಸಾಧುಗಳ ಮಾತು ಬಿಟ್ಟುಬಿಡು. ಸಾಮಾನ್ಯವಾಗಿ ಯಾರು ಹರಿಯ ಪಾದಪದ್ಮಗಳಲ್ಲಿ ಮನಸ್ಸಿಟ್ಟಿರುತ್ತಾರೋ ಅವರ ಮಾತುಕತೆ, ವರ್ತನೆ ಎಲ್ಲಾ ಬೇರೆ.

✽ ಕಾಶಿಯಲ್ಲಿ ನಾನಕ್ ಪಂಥದ ಒಬ್ಬ ಯುವಕ ಸಂನ್ಯಾಸಿಯನ್ನು ನೋಡಿದೆ. ನನ್ನನ್ನು ಸಂಬೋಧಿಸುತ್ತಿದ್ದ: 'ಪ್ರೇಮೀ ಸಾಧು' ಎಂದು. ಕಾಶಿಯಲ್ಲಿ ಅವರ ಪಂಥದ ಒಂದು ಮಠ ಇದೆ. ಅಲ್ಲಿಗೆ ಅವರು ಒಂದು ದಿನ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿನ ಮಹಂತ ಮನೆಯ ಒಳ್ಳೆ ಯಜಮಾನಿಯ ಹಾಗೆ ಕಂಡ. ಆತನನ್ನು ಕೇಳಿದೆ: 'ಮಾರ್ಗವೇನು?' ಅದಕ್ಕೆ ಆತ ಹೇಳಿದ: 'ಕಲಿಯುಗಕ್ಕೆ ನಾರದೀಯ ಭಕ್ತಿ.' ನಾನು ಹೋಗಿದ್ದಾಗ ಆತ ಸ್ತೋತ್ರಪಾಠ ಮಾಡುತ್ತಿದ್ದ. ಅದು ಮುಗಿದ ನಂತರ ಹೇಳಲಾರಂಭಿಸಿದ: 'ಜಲೇ ವಿಷ್ಣುಃ ಸ್ಥಲೇ ವಿಷ್ಣುಃ ವಿಷ್ಣುಃ ಪರ್ವತ ಮಸ್ತಕೇ । ಸರ್ವಂ ವಿಷ್ಣುಮಯಂ ಜಗತ್' ಜಲದಲ್ಲಿ ವಿಷ್ಣು, ಸ್ಥಳದಲ್ಲಿ ವಿಷ್ಣು, ಪರ್ವತದ ತುದಿಯಲ್ಲೂ ವಿಷ್ಣು. ಈ ಇಡೀ ಜಗತ್ತೇ ವಿಷ್ಣುಮಯ.

✽ ಒಮ್ಮೆ ಇಲ್ಲಿಗೆ ಒಬ್ಬ ವೇದಾಂತವಾದಿ ಸಾಧು ಬಂದಿದ್ದ. ಮೇಘ ಕಣ್ಣಿಗೆ ಬಿತ್ತು ಎಂದರೆ ನರ್ತಿಸುತ್ತಿದ್ದ. ಬಿರುಗಾಳಿ ಮಳೆ ಕಂಡರೆ ಬಹಳ ಆನಂದ. ಧ್ಯಾನದ ಸಮಯದಲ್ಲಿ ಯಾರಾದರೂ ಆತನನ್ನು ಸಮೀಪಿಸಿದರೆ ಆತನಿಗೆ ಉಗ್ರ ಕೋಪ ಬಂದುಬಿಡುತ್ತಿತ್ತು. ಒಂದು ದಿನ ನಾನು ಹಾಗೇ ಹೋಗಿಬಿಟ್ಟೆ. ಸಮೀಪಿಸಿದ ಒಡನೆಯೇ ಆತನಿಗೆ ಬಹಳವಾಗಿ ಸಿಟ್ಟು ಬಂತು. ಯಾವಾಗ ನೋಡಿದರೂ 'ಬ್ರಹ್ಮ ಸತ್ಯಂ, ಜಗನ್ಮಿಥ್ಯಾ' ಅಂತ ವಿಚಾರದಲ್ಲಿ ತೊಡಗುತ್ತಿದ್ದ. ನಾನಾತ್ವಕ್ಕೆ ಮಾಯೆಯೇ ಕಾರಣವಾದ್ದರಿಂದ, ಕೈಯಲ್ಲಿ ಯಾವಾಗಲೂ ಗೊಂಚಲು ದೀಪದ ಒಂದು ಮುಪ್ಪಟ್ಟೆ ಗಾಜನ್ನು (ಪ್ರಿಸಮ್) ಇಟ್ಟುಕೊಂಡಿರುತ್ತಿದ್ದ. ಅದರ ಮೂಲಕ ನೋಡಿದರೆ ಅನೇಕ ಬಣ್ಣಗಳು ಕಣ್ಣಿಗೆ ಬೀಳುತ್ತವೆ. ಆದರೆ ವಾಸ್ತವಿಕವಾಗಿ ಯಾವ ಬಣ್ಣವೂ ಇಲ್ಲ. ಹಾಗೇನೆ ವಸ್ತುತಃ ಬ್ರಹ್ಮನ ಹೊರತು ಬೇರೇನೂ ಇಲ್ಲ. ಆದರೆ ಮಾಯೆಯ ದೆಸೆಯಿಂದ, ಅಹಂಕಾರದ ದೆಸೆಯಿಂದ, ನಾನಾತ್ವ ಕಣ್ಣಿಗೆ ಬೀಳುತ್ತದೆ. ಮಾಯೆಯ ಬಲೆಗೆ ಬೀಳಬೇಕಾಗಿ ಬರಬಹುದು, ಆಸಕ್ತಿಯುಂಟಾಗಬಹುದು — ಎಂದು ಹೆದರಿ ಯಾವ ವಸ್ತುವನ್ನೂ ಆತ ಒಂದು ಸಲಕ್ಕಿಂತ ಹೆಚ್ಚಾಗಿ ನೋಡುತ್ತಿರಲಿಲ್ಲ. ಸ್ನಾನದ ಸಮಯದಲ್ಲಿ ಹಕ್ಕಿ ಹಾರುವುದನ್ನು ನೋಡಿ ವಿಚಾರದಲ್ಲಿ ತೊಡಗುತ್ತಿದ್ದ.. ಇಲ್ಲಿ ಮೂರು ದಿನ ಮಾತ್ರ ಇದ್ದ. ಒಂದು ದಿನ ನದಿಯ ದಡದ ಹತ್ತಿರ ಕೊಳಲ ನಾದವನ್ನು ಕೇಳಿ ಹೇಳಿದ. 'ಯಾರಿಗೆ ಬ್ರಹ್ಮದರ್ಶನವಾಗಿದೆಯೋ, ಆತನ ಕಿವಿಗೆ ಇದು ಬಿತ್ತು ಎಂದರೆ, ಆತ ಸಮಾಧಿಸ್ಥನಾಗಿಬಿಡುತ್ತಾನೆ' ಎಂದು.

✽ ಒಮ್ಮೆ ಒಬ್ಬ ಸಾಧುವಿಗೆ ತಡೆಯಲಾರದ ಬಾಯಾರಿಕೆಯಾಯಿತು. ಚಕ್ಕಳದಲ್ಲಿ ನೀರು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ವ್ಯಕ್ತಿ ನೀರು ಕೊಡಲು ಮುಂದೆ ಬಂದ. ಸಾಧು ಆತನನ್ನು ಕೇಳಿದ: 'ಏನು, ನಿನ್ನ ಚೀಲವನ್ನು ಚೆನ್ನಾಗಿ ತೊಳೆದಿದ್ದೀಯಾ?' ಆತ ಹೇಳಿದ: 'ಸ್ವಾಮಿ, ನನ್ನ ಚೀಲ ಸಂಪೂರ್ಣವಾಗಿ ಪರಿಶುದ್ಧವಾಗಿದೆ. ಆದರೆ ನಿಮ್ಮ ಚೀಲದೊಳಗೆ ಮಲ ಮೂತ್ರ, ಇನ್ನೂ ಏನೇನೋ ಕಶ್ಮಲ ತುಂಬಿವೆ. ಆದ್ದರಿಂದ ನಾನು ಹೇಳುತ್ತೇನೆ, ನೀವು ನಿಸ್ಸಂಕೋಚವಾಗಿ ನನ್ನ ಚೀಲದಿಂದ ನೀರು ಕುಡಿಯಬಹುದು. ಇದರಿಂದ ನಿಮಗೆ ಯಾವ ಕೇಡೂ ಸಂಭವಿಸದು.' 'ನಿಮ್ಮ ಚೀಲ' ಎಂಬುದಾಗಿ ಆ ನೀರು ಹೊರುವ ವ್ಯಕ್ತಿ ಹೇಳಿದುದರ ಅರ್ಥ ದೇಹ, ಹೊಟ್ಟೆ ಇತ್ಯಾದಿ.

✽ ಹಿಮಾಲಯ ಪರ್ವತರಾಜನ ಮನೆಯಲ್ಲಿ ಭಗವತಿ ಜನ್ಮ ತಳೆದಾಗ ಆಕೆ ಅನೇಕ ರೂಪಗಳನ್ನು ಧರಿಸಿ ತನ್ನ ತಂದೆಗೆ ದರ್ಶನ ಕೊಟ್ಟಳು. ರಾಜ ಆಕೆಗೆ ತಿಳಿಸಿದ: 'ನನಗೆ ಬ್ರಹ್ಮದರ್ಶನ ಪಡೆಯಲು ಇಚ್ಛೆಯಾಗುತ್ತಿದೆ.' ಅದಕ್ಕೆ ಭಗವತಿ ಹೇಳಿದಳು: 'ಹೇ ತಂದೆ, ನಿಮಗೆ ಆ ಇಚ್ಛೆಯುಂಟಾಗಿರುವುದಾದರೆ, ನೀವು ಸಾಧುಸಂಗ ಮಾಡಬೇಕು. ಸಂಸಾರವನ್ನು ಬಿಟ್ಟು ನಿರ್ಜನ ಪ್ರದೇಶದಲ್ಲಿದ್ದು ಆಗಾಗ ಸಾಧುಸಂಗ ಮಾಡಿ.'

✽ ಸಾಧುಗಳು ಭಗವಂತನ ಮೇಲೆ ತಮ್ಮ ಭಾರವನ್ನು ಸಂಪೂರ್ಣವಾಗಿ ಹಾಕಬೇಕು. ಅವರು ಸಂಚಯ ಮಾಡಿಡ ಕೂಡದು. ಆದರೆ ಈ ನಿಯಮ ಸಂಸಾರಿಗಳಿಗಲ್ಲ. ಸಂಸಾರಿ ತನ್ನ ಸಂಸಾರಪೋಷಣೆ ಮಾಡಬೇಕಾಗಿದೆ; ಆದ್ದರಿಂದ ಆತನಿಗೆ ಸಂಚಯದ ಆವಶ್ಯಕತೆ ಇದೆ. ಹಕ್ಕಿ ಮತ್ತು ಸಾಧು ಸಂಚಯ ಮಾಡಿ ಇಡುವುದಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ

ಅಘೋರಮಣಿ ದೇವಿ

ಅನುರಾಧಾ ವಸಂತಕುಮಾರ್

ಶ್ರೀರಾಮಕೃಷ್ಣರ ದಿವ್ಯತೆಯ ಸಾನ್ನಿಧ್ಯದಲ್ಲಿ ಅರಳಿ ನಿಂತ ಆಧ್ಯಾತ್ಮಿಕ ಪುಷ್ಪಗಳಲ್ಲಿ ಅದ್ವಿತೀಯಳೂ, ಅಸಾಧಾರಣ ಉನ್ನತಿಗೆ ಏರಿದವಳೂ ಆದ ಅಘೋರಮಣಿ ದೇವಿ, 'ಗೋಪಾಲೇರ್ ಮಾ' (ಗೋಪಾಲನ ತಾಯಿ) ಎಂದೇ ರಾಮಕೃಷ್ಣ ಪರಂಪರೆಯಲ್ಲಿ ಖ್ಯಾತಳಾದವಳು. ಅವಳ ಜೀವನದ ವಿವರಗಳನ್ನು ಅರಿಯುವುದೇ ಒಂದು ಪೂಜೆಯಂತೆ. ಶ್ರೀಮಾತೆ, ಸ್ವಾಮೀಜಿ, ನಿವೇದಿತಾ ಇವರೆಲ್ಲ ಅವಳೊಂದಿಗೆ ನಿಕಟ ಸಂಪರ್ಕದಿಂದಿದ್ದರು. ಅವಳ ಜೀವನವನ್ನು ಇಲ್ಲಿ ಸರಳವಾಗಿ ನಿರೂಪಿಸಿರುವ ಲೇಖಕಿ, ಬೆಂಗಳೂರು ಶಾರದಾ ಮಠದ ಭಕ್ತರು.

ಅನಾದಿಕಾಲದಿಂದಲೂ ಭಗವಂತನನ್ನು ನಿರ್ಗುಣ-ನಿರಾಕಾರ ಮತ್ತು ಸಗುಣ-ಸಾಕಾರನೆಂದು ಪರಿಗಣಿಸಿದ್ದಾರೆ. ಆದರೆ ಅದರ ಅನುಭವವನ್ನು ಪಡೆದವರ ಸಂಖ್ಯೆಯನ್ನು ಬೆರಳಿನಲ್ಲಿ ಎಣಿಸಬಹುದು. ಭಗವಂತನನ್ನು ನಾವು ಬಾಹ್ಯವಸ್ತುಗಳಲ್ಲಿ ಹುಡುಕುತ್ತೇವೆ. ಅವನು ನಮ್ಮ ಹೃದಯಕಮಲದಲ್ಲಿ ನೆಲೆಸಿದ್ದಾನೆಂಬ ಭರವಸೆ ಮತ್ತು ನಂಬಿಕೆ ನಮಗೆ ಬಹಳ ಕಡಿಮೆ. ಆಧ್ಯಾತ್ಮಿಕ ಜೀವನ ನಡೆಸುತ್ತಿರುವ ಶ್ರೇಷ್ಠ ವ್ಯಕ್ತಿಗಳಿಗೆ ಈ ಪ್ರಪಂಚದಲ್ಲಿ ಕೆಟ್ಟದೆಂಬುದೇ ಇರುವುದಿಲ್ಲ. ಎಲ್ಲವೂ ಭಗವಂತನ ಆವಿರ್ಭಾವದಂತೆ ಕಾಣಿಸುತ್ತದೆ. ಸಗುಣರೂಪದಲ್ಲಿ ವಾತ್ಸಲ್ಯ ಭಾವದ ಮೂಲಕ ಗೋಪಾಲನನ್ನು (ದೇವರನ್ನು) ಸಾಕ್ಷಾತ್ಕಾರ ಮಾಡಿಕೊಂಡಿರುವುದಕ್ಕೆ ಒಂದು ಜಾಜ್ವಲ್ಯಮಾನವಾದ ಉದಾಹರಣೆಯಾಗಿದ್ದಾಳೆ, ಅಘೋರಮಣಿ ದೇವಿ.

ಕಲ್ಕತ್ತೆಯ ದಕ್ಷಿಣೇಶ್ವರದಿಂದ ಕೇವಲ ಮೂರು ಮೈಲಿ ದೂರದಲ್ಲಿರುವ ಕಾಮಾರಹಾಟಿಯಲ್ಲಿ, ೧೮೨೨ರಲ್ಲಿ ಅಘೋರಮಣಿ ಜನಿಸಿದಳು. ಅವಳು ಬಾಲವಿಧವೆ. ತನ್ನ ಗಂಡನ ಮನೆತನದ ಗುರುಗಳಿಂದ ಮಂತ್ರದೀಕ್ಷೆಯನ್ನು ಪಡೆದಳು. ಅವರು ಅವಳಿಗೆ ಗೋಪಾಲನ ಮಂತ್ರವನ್ನು ಅನುಗ್ರಹ ಮಾಡಿದರು. ತಂದೆ ಹಾಗೂ ತಾಯಿಯ ಮರಣಾನಂತರ ಕಾಮಾರಹಾಟಿಯಲ್ಲಿದ್ದ ಗೋವಿಂದನ ದೇವಸ್ಥಾನದಲ್ಲಿ ಒಂದು ಕೋಣೆಯನ್ನು ಮಾಡಿಕೊಂಡಳು. ದೇವಸ್ಥಾನದ ಮಾಲೀಕಳು ಒಬ್ಬಾಕೆ ಶ್ರೀಮಂತ ಮಹಿಳೆ; ಅಘೋರಮಣಿಯ ಆಪ್ತ ಸ್ನೇಹಿತೆಯಾಗಿದ್ದಳು ಮತ್ತು ಅವಳೂ ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿಯನ್ನು ಹೊಂದಿದ್ದಳು. ಅಲ್ಲಿಂದ ಗಂಗಾನದಿಯ ಸುಂದರ ದೃಶ್ಯವನ್ನು ಕಂಡು ಆನಂದಿಸುತ್ತಿದ್ದಳು. ಶುದ್ಧವಾದ ಜೀವನವನ್ನು ನಡೆಸುತ್ತ ಧ್ಯಾನ, ಜಪ, ಪೂಜೆ ಮುಂತಾದ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿ, ಗೋಪಾಲನನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಪೂಜಿಸುತ್ತಿದ್ದಳು.

ಸ್ವತಂತ್ರ ಪ್ರಕೃತಿಯುಳ್ಳ ಅಘೋರಮಣಿ ತನ್ನಲ್ಲಿದ್ದ ಒಡವೆಗಳನ್ನು ಮಾರಿ, ಅದರ ಹಣದಿಂದ ಬಂದ ಬಡ್ಡಿಯಿಂದ ಜೀವನ ನಡೆಸುತ್ತಿದ್ದಳು. ಭಗವಂತನ ಸಾಕ್ಷಾತ್ಕಾರಕ್ಕೆ ಏಕಾಗ್ರತೆ, ನಿಷ್ಠೆ, ಕ್ರಮಬದ್ಧವಾದ ಆಧ್ಯಾತ್ಮಿಕ ಸಾಧನೆ ಅತ್ಯಂತ ಮುಖ್ಯ. ಅಘೋರಮಣಿ ಇಂತಹ ಸಾಧನೆಯನ್ನು ಕೈಗೊಂಡಿದ್ದಳು. ಬೆಳಗಿನ ಜಾವ ೨ ಗಂಟೆಗೇ ಎದ್ದು, ಸ್ನಾನಾದಿಗಳನ್ನು ಮುಗಿಸಿ ಶುಭ್ರವಾದ



ನಂತರ ೮ ಗಂಟೆಯವರೆಗೆ ಜಪ ಮಾಡುತ್ತಿದ್ದಳು. ಅನಂತರ ರಾಧಾಕೃಷ್ಣ ದೇವರ ಪೂಜಾಪಾತ್ರೆಯನ್ನು ಶುಚಿಮಾಡಿ, ಹೂವಿನಿಂದ ಗೋಪಾಲನಿಗೆ ಹಾರ, ಗಂಧ ಮತ್ತು ನೈವೇದ್ಯಕ್ಕೆ ಅನ್ನ, ಬೇಳೆ ಮತ್ತು ಆಲೂಗಡ್ಡೆಯನ್ನು ಬೇಯಿಸಿ ಅರ್ಪಿಸುತ್ತಿದ್ದಳು. ಇದನ್ನೆಲ್ಲಾ ಪ್ರಸಾದವಾಗಿ ಸ್ವೀಕರಿಸಿ, ಸಂಜೆಯ ಹೊತ್ತು ಕೀರ್ತನೆ, ಭಜನೆ, ನಂತರ ಗೋಪಾಲನಿಗೆ ಸ್ವಲ್ಪ ಹಾಲು ಮತ್ತು ತೆಂಗಿನಕಾಯಿಯ ಉಂಡೆ ಸಮರ್ಪಿಸಿ, ಪ್ರಸಾದ ಸ್ವೀಕರಿಸಿ ಮಧ್ಯರಾತ್ರಿಯವರೆಗೆ ಜಪ ಮಾಡುತ್ತಿದ್ದಳು. ಈ ದಿನಚರಿಯನ್ನು ೧೮೫೨ ರಿಂದ ೧೮೮೪ ರವರೆಗೆ ೩೦ ವರ್ಷಗಳ ಕಾಲ ನಿರಂತರವಾಗಿ ನಡೆಸಿಕೊಂಡು ಬಂದಳು.

ಅಘೋರಮಣಿಯ ಸಾಧನೆಯ ಕಾಲದಲ್ಲಿ ನಡೆದ ಘಟನೆಯೊಂದನ್ನು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು ವಿವರಿಸಿದ್ದಾರೆ: ಒಂದು ದಿನ ಗೋಪಾಲನಿಗೆ ನೈವೇದ್ಯ ಮಾಡಲು ಅಡಿಗೆ ಮಾಡಬೇಕಿತ್ತು. ಆದರೆ ಸೌದೆ ಹಸಿಯಾಗಿತ್ತು, ಜೊತೆಗೆ ಗಾಳಿ ಜೋರಾಗಿ ಬೀಸುತ್ತಿದ್ದು ಸೌದೆ ಸರಿಯಾಗಿ ಉರಿಯದೆ ಹೊಗೆ ತುಂಬಿಕೊಂಡು, ಇವಳ ಕಣ್ಣುಗಳನ್ನೂ ಆವರಿಸಿತು. ಹೇಗೋ ಅಡಿಗೆ ಮಾಡಿ ಮುಗಿಸಿದ ಮೇಲೆ ಅನ್ನ ಮತ್ತು ಪಲ್ಯವನ್ನು ಎಲೆಗೆ ಬಡಿಸುವ ಸಮಯದಲ್ಲಿ ಗಾಳಿಯಲ್ಲಿ ಎಲೆ ತೂರಿಹೋಯಿತು. ತನ್ನ ಶ್ರಮ ವ್ಯರ್ಥವಾಯಿತಲ್ಲಾ, ಗೋಪಾಲನಿಗೆ ನೈವೇದ್ಯ ಮಾಡಲಾಗಲಿಲ್ಲವಲ್ಲಾ ಎಂಬ ದುಃಖ ಅಘೋರಮಣಿಯನ್ನು ಆವರಿಸಿ, ಆಕೆ ಗೋಪಾಲನನ್ನು ಬಯ್ಯತೊಡಗಿದಳು. ಆಶ್ಚರ್ಯವೆಂದರೆ, ಒಬ್ಬ ಪುಟ್ಟ ಬಾಲಕ ಎಲೆಯನ್ನು ತಂದುಕೊಟ್ಟನು. ಅಘೋರಮಣಿ ಅನ್ನ ಮತ್ತು ತರಕಾರಿ ಪಲ್ಯವನ್ನು ಬಡಿಸುವವರೆಗೂ ಅವನು ಎಲೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

ಅಘೋರಮಣಿ ಸಂತೋಷದಿಂದ ಗೋಪಾಲನಿಗೆ ನೈವೇದ್ಯ ಮಾಡಿದಳು. ನಂತರ ಆ ಬಾಲಕ ಕಾಣಿಸಲಿಲ್ಲ. ಆ ಬಾಲಕನೇ ಬಾಲಗೋಪಾಲನೆಂದು ಅಘೋರಮಣಿಗೆ ಅರಿವಾಯಿತು. ಅಂದಿನಿಂದ ಹಗಲು ರಾತ್ರಿ ಊಟ, ನಿದ್ರೆಗಳನ್ನು ತೊರೆದು, 'ನನ್ನ ಗೋಪಾಲನೆಲ್ಲಿ, ನನ್ನ ಗೋಪಾಲನೆಲ್ಲಿ?' ಎನ್ನುತ್ತಾ ಹಂಬಲಿಸತೊಡಗಿದಳು. ಇವಳು ಹುಚ್ಚಿಯಾದಳೆಂದು ಜನರು ಭಾವಿಸಿದರು.*

೧೯ನೇ ಶತಮಾನದ ಮಧ್ಯಭಾಗದಲ್ಲಿ ರಾಣಿ ರಾಸಮಣಿಯಿಂದ ದಕ್ಷಿಣೇಶ್ವರದಲ್ಲಿ ನಿರ್ಮಿತವಾದ ಕಾಳೀಮಂದಿರದಲ್ಲಿ ಶ್ರೀರಾಮಕೃಷ್ಣರು ಸಾಧನೆಯನ್ನೆಲ್ಲಾ ಮುಗಿಸಿ ಶಿಷ್ಯರಿಗಾಗಿ ಎದುರು ನೋಡುತ್ತಿದ್ದ ಸಮಯದಲ್ಲಿ ಅಘೋರಮಣಿ ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದಳು. ಶ್ರೀರಾಮಕೃಷ್ಣರು ಕಾಳೀಮಾತೆಯನ್ನು ಪೂಜಿಸಿ ಅವಳಿಗೆ ಸ್ವತಃ ಊಟ ಮಾಡಿಸುತ್ತಿದ್ದರು, ಗಾಳಿ ಬೀಸುತ್ತಿದ್ದರು, ತಾವು ತಿಂದು ರುಚಿ ನೋಡಿ ಭಗವತಿಗೆ ಅರ್ಪಿಸುತ್ತಿದ್ದರು. ಇದು ಕೇವಲ ಅವತಾರ ವ್ಯಕ್ತಿಗಳಿಗೆ ಮಾತ್ರ ಸಾಧ್ಯ.

ಅಘೋರಮಣಿ ಶ್ರೀರಾಮಕೃಷ್ಣರಿಗೆ ತಾನು ಕಂಡ ಗೋಪಾಲನ ಹಾವಭಾವ, ಅವನು ತನಗಿತ್ತ ವಿವಿಧ ರೂಪಗಳ ದರ್ಶನ, ಅವನು ಇವಳನ್ನು ಹಾಲು, ಬೆಣ್ಣೆ, ತಿಂಡಿ ಇವುಗಳಿಗಾಗಿ ಕಾಡಿ ಬೇಡಿದ ಬಗೆ ಮತ್ತು ಜಪ ಮಾಡುತ್ತಿದ್ದಾಗ ತೊಡೆಯ ಮೇಲೆ ಕುಳಿತು ಜಪಮಾಲೆಯನ್ನೇ ಕಸಿದುಕೊಳ್ಳುವ ಅವನ ಆಟಗಳನ್ನು ವಿವರಿಸಿದಳು. ಅಘೋರಮಣಿ ವಾತ್ಸಲ್ಯಭಾವದಿಂದ ಗೋಪಾಲನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಾಳೆಂದು ತಿಳಿದುಕೊಂಡು ಪರಮಹಂಸರು, ಬಹಳ ಸಂತೋಷಪಟ್ಟರು. ಶ್ರೀರಾಮಕೃಷ್ಣರನ್ನು ನೋಡುವುದಕ್ಕೆ ಹೋದಾಗಲೆಲ್ಲ ಅಘೋರಮಣಿಯು ಅಂಗಡಿಯಿಂದ ಸಂದೇಶವನ್ನು ತೆಗೆದುಕೊಂಡು ಹೋಗುತ್ತಿದ್ದಳು. ಶ್ರೀರಾಮಕೃಷ್ಣರು ಅವಳಿಗೆ, ''ಮನೆಯಲ್ಲಿ ಮಾಡಿದ ಪಲ್ಯ ತಂದರೆ ಸಾಕು, ಹಣವನ್ನು ವೆಚ್ಚ ಮಾಡಬೇಡ'' ಎಂದು ಹೇಳುತ್ತಿದ್ದರು.

ಒಮ್ಮೆ ಅಘೋರಮಣಿ ಶ್ರೀರಾಮಕೃಷ್ಣರನ್ನು ನೋಡಲು ಹೋದಾಗ ತನ್ನ ಪುಟ್ಟ ಗೋಪಾಲನು ಶ್ರೀರಾಮಕೃಷ್ಣರಲ್ಲಿ ಐಕ್ಯವಾಗುವುದನ್ನು ನೋಡಿದಳು ಮತ್ತು ಪುನಃ ತನ್ನ ಬಳಿಗೇ ಬರುವಂತೆ ಕಂಡಳು. ಇದರಿಂದ ಶ್ರೀರಾಮಕೃಷ್ಣರು ಬೇರೆಯಲ್ಲ, ತನ್ನ ಗೋಪಾಲ ಬೇರೆಯಲ್ಲ ಎಂಬುದನ್ನು ಆಕೆ ಅರಿತಳು. ಅಂದಿನಿಂದ ಶ್ರೀರಾಮಕೃಷ್ಣರು ಅಘೋರಮಣಿಯನ್ನು 'ಗೋಪಾಲೇರ್ ಮಾ', ಎಂದರೆ 'ಗೋಪಾಲನ ತಾಯಿ' ಎಂದು ಕರೆದರು. ಗೋಪಾಲ್ ಮಾ (ಆಕೆಯನ್ನು ಸಂಕ್ಷಿಪ್ತವಾಗಿ ಹೀಗೂ ಕರೆಯುತ್ತಿದ್ದರು) ಳಂತಹ ಶ್ರೇಷ್ಠ ಆಧ್ಯಾತ್ಮಿಕ ತಪಸ್ವಿನಿ ಪ್ರಾಪಂಚಿಕ ಸೋಂಕಿಗೆ ಸಿಲುಕದೆ, ಐಹಿಕ ಸಿರಿ ಸಂಪತ್ತಿಗಾಗಲಿ, ಸುಖ ಸೌಖ್ಯಗಳಿಗಾಗಲಿ ಲವಲೇಶವೂ ಮನಸ್ಸು ಕೊಡದೆ, ಕೇವಲ ಕೃಷ್ಣನ ಗುಂಗಿನಲ್ಲೇ, ಅವನ ಒಡನಾಟದಲ್ಲೇ ತನ್ನ ಜೀವನವನ್ನೆಲ್ಲ ಕಳೆದಳು.

ಈಕೆಯ ಜೀವನದಲ್ಲಿ ನಡೆದ ಮತ್ತೊಂದು ರೋಚಕವಾದ ಘಟನೆ ಎಂದರೆ, ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಧ್ಯಾನ ಮಾಡುತ್ತಿದ್ದಾಗ ಪರಮಹಂಸರು ತನ್ನ ತೊಡೆಯ ಮೇಲೆ ಕುಳಿತಂತೆ ಕಂಡಳು. ಕೆಲವು ಕ್ಷಣಗಳ ನಂತರ ಮತ್ತೆ ತನ್ನ ಇಷ್ಟದೇವತೆಯಾದ ಗೋಪಾಲನನ್ನು ಕಂಡಳು. ಮತ್ತೊಂದು ದಿನ, ಗೋಪಾಲ್ ಮಾ ಶ್ರೀಶಾರದಾದೇವಿಯವರು ಇದ್ದ ದಕ್ಷಿಣೇಶ್ವರದ ನಹಬತ್‌ನಲ್ಲಿ ಜಪ ಮಾಡುತ್ತಿದ್ದಾಗ ಶ್ರೀರಾಮಕೃಷ್ಣರು ಅಲ್ಲಿಗೆ ಬಂದು, ''ಇನ್ನು ಮುಂದೆ ನೀನು ಜಪ ಮಾಡುವ ಅಗತ್ಯವಿಲ್ಲ. ನೀನಾಗಲೇ ಬೇಕಾದಷ್ಟು ಪಡೆದಿರುವೆ. ಇನ್ನೂ ನೀನು ಗೋಪಾಲಭಾವದಲ್ಲಿದ್ದರೆ ನಿನ್ನ ದೇಹವನ್ನು ತ್ಯಾಗ ಮಾಡುವೆ'' ಎಂದರು.

ಶ್ರೀರಾಮಕೃಷ್ಣರ ಶ್ರೇಷ್ಠ ಭಕ್ತನಾದ ಬಲರಾಮ ಬಸು, ಬಾಗ್‌ಬಜಾರ್‌ನಲ್ಲಿದ್ದ ತನ್ನ ಮನೆಯಲ್ಲಿ ಜಗನ್ನಾಥನ ರಥೋತ್ಸವವನ್ನು ಏರ್ಪಡಿಸಿದ್ದನು. ರಾಮಕೃಷ್ಣರೂ ಅಲ್ಲಿಗೆ ಆಗಮಿಸಿದ್ದರು. 'ಗೋಪಾಲ್ ಮಾ ಭಗವಂತನಲ್ಲೇ ತನ್ನ ಮನಸ್ಸನ್ನು ವಿಲೀನಗೊಳಿಸಿ ಆನಂದದಲ್ಲಿ ಉನ್ಮತ್ತಳಾಗುವ ಮತ್ತು ಗೋಪಾಲನನ್ನು ಸಾಕಾರ ರೂಪದಲ್ಲಿ ಕಂಡ ಶ್ರೇಷ್ಠ ಮಹಿಳೆ' ಎಂದು ರಾಮಕೃಷ್ಣರು ಶ್ಲಾಘಿಸಿದಾಗ ಬಲರಾಮ ಬಸು ಗೋಪಾಲ್ ಮಾಳನ್ನು ಕರೆತರಲು ಕಳುಹಿಸಿದನು. ಪರಮಹಂಸರು ಸಮಾಧಿಸ್ಥರಾಗಿ ಗೋಪಾಲನ ಭಾವದಿಂದ ಅಂಬೆಗಾಲನ್ನು ಇಡುತ್ತಾ ಬಾಲಗೋಪಾಲನಂತೆ ಗೋಪಾಲ್ ಮಾಳನ್ನು ಎದುರುನೋಡುತ್ತಿದ್ದರು. ಗೋಪಾಲ್ ಮಾ ತನ್ನ ಇಷ್ಟದೈವವಾದ ಗೋಪಾಲನನ್ನು ಶ್ರೀರಾಮಕೃಷ್ಣರಲ್ಲಿ ನೋಡಿ ಬಹಳ ಸಂತಸಗೊಂಡಳು. ಅಲ್ಲಿ ನೆರೆದಿದ್ದ ಭಕ್ತರೆಲ್ಲರೂ ಈ ದೈವೀ ದೃಶ್ಯವನ್ನು ನೋಡಿ ಬೆರಗಾದರು. ವಜ್ರದ ಗುಣವನ್ನು ವಜ್ರದ ವ್ಯಾಪಾರಿ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಅಲ್ಪ ಮಾನವರಿಗೆ ಅದು ಅಸಾಧ್ಯ.

* ***They Lived with God*** by Swami Chetanananda, p.339 & 350

ಭಕ್ತರು ಪ್ರಾಪಂಚಿಕ ವಿಷಯಗಳಿಂದ ದೂರವಾಗಿರುವಂತೆ ಪರಮಹಂಸರು ಅವರನ್ನೆಲ್ಲಾ ಸದಾಕಾಲ ಗಮನದಲ್ಲಿಟ್ಟಿದ್ದರು. ಗೋಪಾಲ್ ಮಾ ಹೊರಟಾಗ ಬಲರಾಮ ಬಸು ಗೋಪಾಲ್ ಮಾಗೆ ಒಂದು ಸೀರೆ ಮತ್ತು ಅಡಿಗೆ ಮಾಡುವುದಕ್ಕೆ ಬೇಕಾದ ಕೆಲವು ವಸ್ತುಗಳನ್ನು ದೋಣಿಯಲ್ಲಿಟ್ಟರು. ದೋಣಿಯಲ್ಲಿ ಪರಮ ಹಂಸರು, ''ದೇವರನ್ನು ನಂಬಿರುವವರು ಪ್ರಾಪಂಚಿಕ ವಸ್ತು ಗಳನ್ನು ನಿರಾಕರಿಸಬೇಕು. ಮೋಹಕ್ಕೆ ಒಳಗಾಗಬಾರದು. ಇದ ರಿಂದ ದೇವರ ಮೇಲೆ ಇಟ್ಟಿರುವ ನಂಬಿಕೆ ಮತ್ತು ಆಸರೆಗೆ ಭಂಗ ವಾಗುವುದು'' ಎಂದು ಹೇಳಿ, ಗೋಪಾಲ್ ಮಾ ಬಗ್ಗೆ ಸ್ವಲ್ಪ ತಾತ್ಸಾರ ಭಾವವನ್ನು ವ್ಯಕ್ತಪಡಿಸಿದರು. ಗೋಪಾಲ್ ಮಾ ನಹ ಬತ್‌ಖಾನೆಯಲ್ಲಿದ್ದ ಶ್ರೀಮಾತೆ ಶಾರದಾದೇವಿಯವರಿಗೆ ಬಲ ರಾಮನು ಕೊಟ್ಟ ವಸ್ತುಗಳನ್ನು ತೋರಿಸಿ, ಅವುಗಳನ್ನು ಯಾರಿ ಗಾದರೂ ಕೊಟ್ಟುಬಿಡುವುದಾಗಿ ಹೇಳಿದಳು. ಶ್ರೀಮಾತೆಯವರು ಅವಳಿಗೆ ಸಮಾಧಾನ ಮಾಡಿದರೂ, ಅವನ್ನೆಲ್ಲಾ ಇತರರಿಗೆ ದಾನ ಮಾಡಿದಳು. ತದನಂತರ ಪರಮಹಂಸರು ಗೋಪಾಲ್ ಮಾಳನ್ನು ಮೊದಲಿನಂತೆ ವಿಶ್ವಾಸದಿಂದ ಕಂಡರು.

ಒಂದು ದಿನ ಗೋಪಾಲ್ ಮಾ ಮತ್ತು ನರೇಂದ್ರನ (ಸ್ವಾಮಿ ವಿವೇಕಾನಂದರು) ಭೇಟಿ ದಕ್ಷಿಣೇಶ್ವರದಲ್ಲಿ ರಾಮಕೃಷ್ಣರ ಕೋಣೆ ಯಲ್ಲಿ ಆಯಿತು. ಪರಮಹಂಸರು ನರೇಂದ್ರನನ್ನು ಪರೀಕ್ಷಿಸಿ ಸ್ವಲ್ಪ ತಮಾಷೆಯನ್ನು ಮಾಡಲು ಮುಂದಾದರು. ಗೋಪಾಲ್ ಮಾಗೆ ಉಂಟಾದ ಆಧ್ಯಾತ್ಮಿಕ ಅನುಭವ ಮತ್ತು ಆಕೆ ಕಂಡ ಅಪೂರ್ವ ದೃಶ್ಯ, ಗೋಪಾಲಬಾಲನ ಒಡನಾಟ – ಎಲ್ಲಾ ವಿವರ ಗಳನ್ನೂ ನರೇಂದ್ರನಿಗೆ ವಿವರಿಸುವಂತೆ ಹೇಳಿದರು. ಗೋಪಾಲ್ ಮಾ ನರೇಂದ್ರನಿಗೆ ಎಲ್ಲವನ್ನೂ ಬಹಳ ಉನ್ಮತ್ತತೆಯಿಂದ, ಆನಂದ ಬಾಷ್ಪವನ್ನು ಸುರಿಸುತ್ತ, ತಾನು ಗೋಪಾಲನ ಅನುಗ್ರಹಕ್ಕೆ ಪಾತ್ರ ಳಾದ ವಿಷಯವನ್ನು ತಿಳಿಸಿದಳು. ನರೇಂದ್ರ ಸಾಕಾರವನ್ನು ಒಪ್ಪು ತ್ತಿರಲಿಲ್ಲ. ನಿರಾಕಾರವನ್ನು ಮಾತ್ರ ಒಪ್ಪುತ್ತಿದ್ದ ನರೇಂದ್ರನಿಗೆ ಗೋಪಾಲ್ ಮಾ, ''ನೀನು ಅತಿ ಬುದ್ಧಿವಂತ, ಸೂಕ್ಷ್ಮಮತಿ, ಆಧು ನಿಕ ವಿದ್ಯ ಮಾನಗಳನ್ನು ಬಲ್ಲ ನಿಪುಣ. ನಾನಾದರೋ ಬಡವಿ, ವಿದ್ಯೆಯ ಸೋಂಕೇ ಇಲ್ಲದವಳು. ನನಗೆ ಏನೂ ತಿಳಿಯದು. ನನಗೆ ಉಂಟಾದ ಅಪೂರ್ವ ದೃಶ್ಯವನ್ನು ನಂಬುತ್ತೀಯಾ ಮಗು?'' ಎಂದು ಅತಿ ಕಳಕಳಿಯಿಂದ ಹೇಳಿದಾಗ, ನರೇಂದ್ರ ಉನ್ಮತ್ತನಾಗಿ ಕಣ್ಣಿನಲ್ಲಿ ನೀರು ಸುರಿಸಿ, ''ತಾಯಿ, ನೀವು ನೋಡಿರುವುದೆಲ್ಲಾ ಸತ್ಯ, ಗೋಪಾಲನನ್ನು ಸಾಕಾರ ರೂಪದಲ್ಲಿ ಸಾಕ್ಷಾತ್ಕಾರ ಮಾಡಿ ಕೊಂಡಿದ್ದೀರಿ'' ಎಂದು ಅವಳನ್ನು ಸಮಾಧಾನಪಡಿಸಿದನು.

ಪರಮಹಂಸರ ನಿರ್ಯಾಣಾನಂತರ ಗೋಪಾಲ್ ಮಾ ದುಃಖ ತಪ್ತಳಾಗಿ ಹಲವಾರು ದಿನಗಳ ಕಾಲ ಏಕಾಂತದಲ್ಲಿ ಕಳೆದಳು. ಆಗ ಶ್ರೀರಾಮಕೃಷ್ಣರು ಇವಳಿಗೆ ದರ್ಶನ ನೀಡಿ ಸಮಾಧಾನಪಡಿಸಿ ದರು. ಒಂದು ಸಲ ಗಂಗಾನದಿಯ ಆಚೆಯ ದಡದಲ್ಲಿ ಮಹೇಶ ಎಂಬ ಊರಿಗೆ ಹೋದಳು. ಅಲ್ಲಿ ಜಗನ್ನಾಥನ ರಥದಲ್ಲಿ ಆಸೀನ ನಾಗಿರುವ ಜಗನ್ನಾಥನಲ್ಲಿ ತನ್ನ ಗೋಪಾಲನನ್ನು ಕಂಡು ಧನ್ಯ ಳಾದಳು. ಅಲ್ಲಿ ನೆರೆದಿದ್ದ ಭಕ್ತವೃಂದ ಜಗನ್ನಾಥನ ರಥವನ್ನು ಎಳೆಯುತ್ತಿರುವಾಗ ಅವರೆಲ್ಲರಲ್ಲಿಯೂ ಗೋಪಾಲನನ್ನು ಕಂಡು ತನ್ನನ್ನೇ ಮರೆತು ನಗುನಗುತ್ತಾ ಆನಂದದಿಂದ ನರ್ತಿಸುತ್ತಿರುವ ಗೋಪಾಲ್ ಮಾಳನ್ನು ಕಂಡ ಭಕ್ತರೆಲ್ಲರೂ ಆಗ ಮಂತ್ರಮುಗ್ಧ ರಾದರು.

೧೮೮೭ರಲ್ಲಿ ಬಲರಾಮಬಾಬುವಿನ ಮನೆಯಲ್ಲಿ ಗೋಪಾಲ್ ಮಾಳನ್ನು ಆಧ್ಯಾತ್ಮಿಕ ಅನುಭವಗಳ ವಿಷಯವಾಗಿ ಕೆಲವು ಭಕ್ತರು ಹಲವಾರು ಪ್ರಶ್ನೆಗಳನ್ನು ಕೇಳಿದಾಗ, ''ನಾನು ಓದು ಬರಹ ತಿಳಿಯದವಳು. ಯೋಗಿನ್, ತಾರಕ ಮತ್ತು ಶರತ್ (ರಾಮ ಕೃಷ್ಣರ ಶಿಷ್ಯರು) ಇವರನ್ನು ಕೇಳಿ'' ಎಂದಳು. ಭಕ್ತರು ಬಲವಂತ ಪಡಿಸಿದಾಗ, ''ನನ್ನ ಗೋಪಾಲನನ್ನು ಕೇಳುತ್ತೇನೆ'' ಎಂದು ಹೇಳಿ, ಆಧ್ಯಾತ್ಮಿಕ ವಿಷಯಕ್ಕೆ ಸಂಬಂಧಪಟ್ಟ ಅವರ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ನೀಡಿ ನೆರೆದಿದ್ದ ಭಕ್ತರನ್ನೆಲ್ಲಾ ಅವಾಕ್ಕುಗೊಳಿಸಿದಳು. ಬಾರಾನಗರ ಮಠದಲ್ಲಿ ರಾಮಕೃಷ್ಣರ ಶಿಷ್ಯರು ವಾಸಿಸುತ್ತಿದ್ದಾಗ ಗೋಪಾಲ್ ಮಾ ಮಠಕ್ಕೆ ಭೇಟಿ ನೀಡುತ್ತಿದ್ದಳು ಮತ್ತು ಶ್ರೀರಾಮ ಕೃಷ್ಣರಿಗೆ ಇಷ್ಟವಾದ ಪಲ್ಯ, ಸಿಹಿತಿಂಡಿಗಳನ್ನು ನೈವೇದ್ಯಕ್ಕೆ ಕೊಡು ತ್ತಿದ್ದಳು.

ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ಭಾರತಕ್ಕೆ ಹಿಂದಿರುಗಿದ ನಂತರ, ನಿವೇದಿತಾ, ಓಲೇ ಬುಲ್, ಮತ್ತು ಜೋಸೆ ಫಿನ್ ಮ್ಯಾಕ್ಲಿಯಾಡ್ — ಈ ಮೂವರನ್ನೂ ಗೋಪಾಲ್‌ಮಾ ಳನ್ನು ಭೇಟಿಮಾಡಲು ಕಳುಹಿಸಿಕೊಟ್ಟರು. ಗೋಪಾಲ್ ಮಾ ಅವರನ್ನೆಲ್ಲಾ ಪ್ರೀತಿಯಿಂದ ಬರಮಾಡಿಕೊಂಡು ಅವರ ಕೆನ್ನೆ ಮುಟ್ಟಿ ಮುದ್ದಿಸಿ, ಸಿಹಿತಿಂಡಿಗಳನ್ನು ಹಂಚಿ ತನಗೆ ಉಂಟಾದ ಹಲವಾರು ಆಧ್ಯಾತ್ಮಿಕ ಅನುಭವಗಳನ್ನು ಅವರೊಂದಿಗೆ ಹಂಚಿ ಕೊಂಡಳು.

ಇಬ್ಬರು ಭಕ್ತೆಯರು ಸ್ವಾಮಿ ವಿವೇಕಾನಂದರನ್ನು ಮಂತ್ರದೀಕ್ಷೆ ಗಾಗಿ ಪ್ರಾರ್ಥಿಸಿಕೊಂಡಾಗ, ಸ್ವಾಮೀಜಿ ಅವರನ್ನು ಗೋಪಾಲ್ ಮಾ ಬಳಿಗೆ ಕಳುಹಿಸಿಕೊಟ್ಟರು. ಗೋಪಾಲ್ ಮಾ ತಾನು ಮಂತ್ರ ದೀಕ್ಷೆ ಕೊಡಲು ಅನರ್ಹಳೆಂದೂ ಅದರ ಬಗ್ಗೆ ತನಗೆ ಏನೂ ತಿಳಿಯದೆಂದೂ ಹೇಳಿದಳು. ಆಗ ಸ್ವಾಮೀಜಿ, ''ನೀನು ಗೋಪಾಲ ನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದೀಯೆ. ನಿನ್ನ ಇಷ್ಟದೈವವಾದ ಗೋಪಾಲನ ಮಂತ್ರವನ್ನೇ ನೀಡು'' ಎಂದು ಪ್ರೋತ್ಸಾಹಿಸಿ ಆ ಭಕ್ತೆಯರನ್ನು ಮತ್ತೆ ಅವಳ ಬಳಿಗೆ ಕಳುಹಿಸಿಕೊಟ್ಟರು. ಸ್ವಾಮೀಜಿ ಯವರ ಆದೇಶದಂತೆ ಗೋಪಾಲೇರ್ ಮಾ ಆ ಭಕ್ತೆಯರಿಗೆ ಮಂತ್ರದೀಕ್ಷೆಯನ್ನು ಅನುಗ್ರಹಿಸಿದಳು. ಕೆಲವು ದಿನಗಳ ನಂತರ ಸ್ವಾಮಿ ವಿವೇಕಾನಂದರ ನಿರ್ಯಾಣದ ವಾರ್ತೆಯನ್ನು ಕೇಳಿ ಆಕೆ ತುಂಬಾ ನೊಂದು, ಬಹಳ ದುಃಖದಿಂದ ಕುಸಿದು ಬಿದ್ದಾಗ ಅವಳ ಮೊಳಕೈ ಪೆಟ್ಟಾಯಿತು.



ಗೋಪಾಲೇರ್ ಮಾ ಜೊತೆಗೆ ಸೋದರಿ ನಿವೇದಿತಾ

ಸ್ವಾಮೀಜಿಯವರ ಶಿಷ್ಯಳಾದ ಸೋದರಿ ನಿವೇದಿತಾ ಗೋಪಾಲ್ ಮಾಳತ್ತ ಆಕರ್ಷಿತಳಾದಳು. ನಿವೇದಿತಾಳನ್ನು ಗೋಪಾಲ್ ಮಾ ಅತ್ಯಂತ ಪ್ರೀತಿಯಿಂದ ಅವಳನ್ನು ತನ್ನ ಮಗಳಂತೆ ಕಂಡಳು. ೧೯೦೪ರಲ್ಲಿ ಗೋಪಾಲ್ ಮಾಳ ಆರೋಗ್ಯ ಕ್ಷೀಣಿಸಿದಾಗ ಅವಳನ್ನು ಬಲರಾಮ ಬಾಬುವಿನ ಮನೆಗೆ ಕರೆದುಕೊಂಡು ಹೋದರು. ಆದರೆ ನಿವೇದಿತಾ ಸ್ವತಃ ಮುಂದೆ ಬಂದು ಗೋಪಾಲ್ ಮಾಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಒಪ್ಪಿ, ಬಹಳ ಪ್ರೀತಿಯಿಂದ ಅವಳ ಸೇವೆ ಮಾಡಿದಳು. ಒಂದು ಪತ್ರದಲ್ಲಿ ನಿವೇದಿತಾ ಹೀಗೆ ಬರೆಯುತ್ತಾಳೆ:

''ಗೋಪಾಲ್‌ಮಾಳೊಂದಿಗೆ ಇದ್ದಾಗ ನಾನು ಪುಳಕಿತಳಾಗುವೆ. ಸಂತ ಎಲಿಜಬೆತ್ತಳ ಮಾತುಗಳು ನನ್ನ ಕಿವಿಯಲ್ಲಿ ಮೊಳಗುತ್ತವೆ. ನನ್ನ ದೇವನ ತಾಯಿ ನನ್ನನ್ನು ನೋಡಲು ಬಂದಿರುವಳು, ಅದೇನು ನನ್ನ ಭಾಗ್ಯ! ಗೋಪಾಲ್ ಮಾಳಲ್ಲಿ ಸಂತಳ ಗುಣ ಹೇಗಿರುವುದೆಂದರೆ ಅದು ಮುಕ್ತಾತ್ಮರಾದ ಪರಮಹಂಸರ ಸ್ಥಿತಿಯಷ್ಟೇ ಮಹತ್ತಾದುದು ಎಂದು ನನ್ನ ನಂಬಿಕೆ. ನಾನು ಅವಳನ್ನು ಸಾಕಾದಷ್ಟು ಉಪಾಸನೆ ಮಾಡಲು ಸಾಧ್ಯವಾದರೆ ಅವಳ ಕೃಪಾಶೀರ್ವಾದ ನಾನು ಪ್ರೀತಿಸುವ ಎಲ್ಲರ ಮೇಲೂ ಇಳಿದುಬರುವುದು. ಇದಕ್ಕಿಂತ ಹೆಚ್ಚು ಹೇಳಲು ಸಾಧ್ಯವೆ?''

ದಿನೇದಿನೇ ಗೋಪಾಲ್ ಮಾಳ ದೇಹಸ್ಥಿತಿ ಕುಂದಿದಾಗ ಜುಲೈ ೮, ೧೯೦೬ರಂದು ಅವಸಾನಕಾಲ ಪ್ರಾಪ್ತವಾಯಿತು. ಗಂಗಾ ನದಿಯ ತೀರದಲ್ಲಿ ತನ್ನ ದೇಹತ್ಯಾಗ ಮಾಡಬೇಕೆಂದು ಗೋಪಾಲ್ ಮಾ ನಿವೇದಿತಾಳನ್ನು ಕೇಳಿಕೊಂಡಳು. ನಿವೇದಿತಾ ಗೋಪಾಲ್ ಮಾಳ ದೇಹವನ್ನು ಪುಷ್ಪಗಳಿಂದ ಅಲಂಕರಿಸಿ ಗಂಗಾನದಿಯ ದಡಕ್ಕೆ ಕರೆದೊಯ್ದಳು. ಎರಡು ದಿನಗಳ ನಂತರ ಅವಳ ಪ್ರಾಣಪಕ್ಷಿ ಇಹಲೋಕವನ್ನು ತ್ಯಜಿಸಿ, ವಿಶ್ವವ್ಯಾಪಿಯಾಗಿ ಗೋಪಾಲನಲ್ಲಿ ಐಕ್ಯವಾಯಿತು.

ಭಗವಂತನ ಸಾಕ್ಷಾತ್ಕಾರಕ್ಕೆ ಜಾತಿಭೇದವಿಲ್ಲ, ಲಿಂಗಭೇದವಿಲ್ಲ. ನಿರಕ್ಷರಕುಕ್ಷಿಯಾಗಿದ್ದರೂ ಭಗವಂತನ ಕೃಪೆಗೆ ಪಾತ್ರರಾಗಬಹುದು. ಆದರೆ ನಮ್ಮಲ್ಲಿ ಅಂತಹ ಶ್ರದ್ಧೆ, ವ್ಯಾಕುಲತೆಗಳಿದ್ದು, ಕಾಮಕಾಂಚನದ ಸೋಂಕು ಲವಲೇಶವೂ ಇಲ್ಲದಿದ್ದರೆ ಮಾತ್ರ ಅವನ ಕೃಪೆಗೆ ಪಾತ್ರರಾಗಿ ಅವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ಎಲ್ಲ ಭಕ್ತರಿಗೂ ಭರವಸೆ ಮತ್ತು ಆಶ್ವಾಸನೆ ನೀಡಿದ್ದಾಳೆ, ಅಘೋರಮಣಿ ದೇವಿ. ಅವಳನ್ನು ಯಾರಾದರೂ ಸಲಹೆ ಕೇಳಿದಾಗ, ''ನಿನ್ನಲ್ಲಿ ಇರುವ ಗೋಪಾಲನನ್ನು (ಭಗವಂತನನ್ನು) ಕೇಳು. ಅವನೇ ನಿನಗೆ ಸರಿಯಾಗಿ ದಾರಿ ದೀಪವಾಗುತ್ತಾನೆ. ವ್ಯಾಕುಲತೆಯಿಂದ ಅವನನ್ನು ಕರೆ. ನೀನು ಅವನನ್ನು ಮುಟ್ಟುವೆ'' ಎಂದು ಹೇಳುತ್ತಿದ್ದಳು.

ಇಂತಹ ನಾರೀಶಿರೋಮಣಿಯ ಜೀವನಶೈಲಿಯನ್ನು ಸ್ವಲ್ಪ ಮಟ್ಟಿಗಾದರೂ ನಾವು ನಮ್ಮಲ್ಲಿ ಅಳವಡಿಸಿಕೊಂಡು ಭಗವಂತನ ಕೃಪೆಗೆ ಪಾತ್ರರಾಗೋಣ. ಇದೇ ನಾವು ಅಘೋರಮಣಿಗೆ ಕೊಡುವ ಶ್ರದ್ಧಾಂಜಲಿ.

ಸ್ವಾಮೀಜಿ ಹೃದಯವೈಶಾಲ್ಯ

ಸ್ವಾಮಿ ವಿವೇಕಾನಂದರು ಯಾವಾಗಲೂ ದುರ್ಬಲರಿಗೆ ಸಹಾಯ ಮಾಡುತ್ತಿದ್ದರು. ಒಮ್ಮೆ ಅವರು ಶ್ರೀರಾಮಕೃಷ್ಣರನ್ನು ಹಾಜರಾನಿಗಾಗಿ ಕಾಡಿದರು. ಆಗ ಗುರುಮಹಾರಾಜರು ಕಾಶೀಪುರದ ತೋಟದ ಮನೆಯಲ್ಲಿದ್ದರು. ಸ್ವಾಮೀಜಿ ಅವರನ್ನು ಬಿಡಲೇ ಇಲ್ಲ. ಅವರ ಅವಿಶ್ರಾಂತ ಪ್ರಾರ್ಥನೆ, 'ನೀವು ಅವನಿಗಾಗಿ ಏನನ್ನಾದರೂ ಮಾಡಲೇಬೇಕು. ಅವನನ್ನು ಆಶೀರ್ವದಿಸಬೇಕು' ಎಂಬುದಾಗಿತ್ತು. ಶ್ರೀರಾಮಕೃಷ್ಣರು 'ಅವನಿಗೀಗ ಏನೂ ದೊರಕದು. ಅವನು ಸಾಯುವ ಸಮಯದಲ್ಲಿ ಅವನಿಗೆ ದೊರಕುವುದು' ಎಂದರು. ಇದು ನಿಜವಾಗಿಯೂ ನಡೆಯಿತು. ಸ್ವಾಮಿ ವಿವೇಕಾನಂದರಿಗೆ ಕೃಪೆ ಮುಂತಾದ ವಿಷಯಗಳಲ್ಲಿ ತುಂಬಾ ನಂಬಿಕೆಯಿತ್ತು.

ಲಾಟು (ಸ್ವಾಮಿ ಅದ್ಭುತಾನಂದರು) ಬಹಳ ಬೇಗ ನಿದ್ರಿಸುತ್ತಿದ್ದ. ಒಮ್ಮೆ ಶ್ರೀರಾಮಕೃಷ್ಣರು ಇದಕ್ಕಾಗಿ ಕೋಪಗೊಂಡರು. ದಕ್ಷಿಣೇಶ್ವರದಿಂದ ಅವನನ್ನು ಕಳುಹಿಸಿಬಿಡಬೇಕೆಂದಿದ್ದರು. ಆದರೆ ಸ್ವಾಮಿ ವಿವೇಕಾನಂದರು ಮಧ್ಯೆ ಪ್ರವೇಶಿಸಿದ್ದರಿಂದ ಅದು ಶಾಂತಿಯಿಂದ ಮುಕ್ತಾಯವಾಯಿತು. ಈ ಕಾರಣದಿಂದ ಲಾಟು, ''ನಿಜವಾಗಿಯೂ ಗುರುಭಾಯಿ ಎಂದರೆ ಸ್ವಾಮಿ ವಿವೇಕಾನಂದರೊಬ್ಬರೆ'' ಎಂದು ಹೇಳುತ್ತಿದ್ದ.

(ಸ್ವಾಮಿ ತುರೀಯಾನಂದರು, 'ಸಾಧಕನ ಕೈದೀವಿಗೆ' ಗ್ರಂಥದಲ್ಲಿ)

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೭

ಪ್ರಸನ್ನ ಮಾವ ಸಿಮ್ಲಾ ಸ್ಟ್ರೀಟಿನಲ್ಲಿ ಒಂದು ಸಣ್ಣ ಹೆಂಚಿನ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ಊರಿನಿಂದ ದೊಡ್ಡತ್ತೆ (ನಳಿನಿಯ ತಾಯಿ) ಇಬ್ಬರು ಹೆಣ್ಣು ಮಕ್ಕಳು – ನಳಿನಿ ಹಾಗೂ ಮಾಕು, ಅಳಿಯ ಪ್ರಮಥ (ನಳಿನಿಯ ಪತಿ) ಇವರನ್ನು ಕರೆದುಕೊಂಡು ಬಂದ. ಪ್ರಮಥನ ಹೆಸರು ಈ ಗ್ರಂಥದಲ್ಲಿ ಹಿಂದೊಮ್ಮೆ ಬಂದಿತ್ತು, ಅವನ ವಿವಾಹದ ಸಂದರ್ಭದಲ್ಲಿ. ಈಗ ಮಾವನ ಮನೆಗೆ ಬಂದ ಮೇಲೆ ಅವನಿಗೆ ಅನಾರೋಗ್ಯವುಂಟಾ ಯಿತು. ಈ ವಿಷಯವನ್ನು ತಿಳಿದ ಶ್ರೀಮಾತೆ, ನನ್ನನ್ನು ಅಲ್ಲಿಗೆ ಹೋಗುವಂತೆ ಆದೇಶಿಸಿದರು. ಅಂತೆಯೇ ನಾನು ಅಲ್ಲಿಗೆ ಹೋದೆ. ಅದು ಸಾಧಾರಣ ಕಾಯಿಲೆಯಲ್ಲ; ಕೆಮ್ಮು ಜ್ವರ — ಬಿಡುವೇ ಇಲ್ಲದಂಥ ಜ್ವರ. ಶರತ್ ಮಹಾರಾಜ್ ಹಾಗೂ ಮಾಸ್ಟರ್ ಮಹಾಶಯರ ಆಲೋಚನೆಯ ಪ್ರಕಾರ ಇಬ್ಬರು ಪ್ರಸಿದ್ಧ ಡಾಕ್ಟರರನ್ನು ಅಲ್ಲಿಗೆ ಕರೆದುಕೊಂಡು ಹೋಗುವುದಾಗಿ ನಿಶ್ಚಯವಾಯಿತು. ಅವರಿಬ್ಬರೂ ಒಂದೆಡೆ ಕುಳಿತು ಚರ್ಚಿಸಿ ಚಿಕಿತ್ಸೆ ಮಾಡುವುದಾಗಿ ತೀರ್ಮಾನಿಸಿದರು. ಡಾಕ್ಟರ್‌ಗಳು ಬರುವುದಕ್ಕೆ ಎರಡು ಗಂಟೆ ಮೊದಲೇ ಸಿಮ್ಲಾ ಸ್ಟ್ರೀಟ್‌ನಲ್ಲೇ ಪ್ರಸನ್ನ ಮಾವನ ಮನೆಯನ್ನು ಹುಡುಕುತ್ತ ಹೋದೆ. ಒಂದು ಮನೆಯ ಬಾಗಿಲಲ್ಲಿ, ಒಬ್ಬ ಡಾಕ್ಟರರ ಹೆಸರಿದ್ದ ಫಲಕವೊಂದು ಕಣ್ಣಿಗೆ ಬಿತ್ತು.

ಅವರ ಹೆಸರನ್ನು ನೋಡಿ, ಅವರೊಂದಿಗೆ ನನಗೆ ತುಸು ಪರಿಚಯವಿದ್ದಂತೆ ಅನ್ನಿಸಿತು. ಇನ್ನೂ ಬೇಕಾದಷ್ಟು ಸಮಯವಿದೆಯಲ್ಲ ಎಂದುಕೊಂಡು ಆ ಮನೆಯನ್ನು ಪ್ರವೇಶಿಸಿ, ಹಜಾರದಲ್ಲಿ ಕುಳಿತಿದ್ದ ಒಬ್ಬ ಯುವಕ ಡಾಕ್ಟರನನ್ನು ಕಂಡೆ. ಅವನ ಕೈಯಲ್ಲೊಂದು ಹೈಪೋಡರ್ಮಿಕ್ ಇಂಜೆಕ್ಷನ್ ಕೂಡಾ ಇತ್ತು. ನನಗೆ ಕುಳಿತುಕೊಳ್ಳಲು ಹೇಳಿದ; ನಾನು ಕುಳಿತೆ. ಅವನೇ ಸ್ವತಃ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದ. ಅದನ್ನು ನೋಡಿ ಅವನನ್ನು ಕೇಳಿದೆ, ''ನಿಮಗೆ ಅನಾರೋಗ್ಯವೇನಾದರೂ ಇದೆಯೆ?'' ಅದಕ್ಕೆ ಉತ್ತರವಾಗಿ ತುಸು ಕಾಯಲು ಹೇಳಿದನಾತ. ಅನಂತರ ತನ್ನ ದೇಹವನ್ನು ಒರಗುದಿಂಬಿಗೆ ಒರಗಿಸಿಕೊಂಡು ಸುಮ್ಮನೆ ಕುಳಿತ. ಅವನೇನೋ ಚಿಂತೆ ಮಾಡುತ್ತಿದ್ದಂತೆ ಕಂಡುಬಂತು. ಅನಂತರ ಆ ದಿಂಬನ್ನು ಎಸೆದು ನನ್ನ ಹತ್ತಿರ ಬಂದು ಕುಳಿತ. ಅಸ್ಪಷ್ಟವಾದ ಧ್ವನಿಯಲ್ಲಿ ಹೇಳಿದ, ''ಹೇಳುತ್ತೇನೆ, ಎಲ್ಲವನ್ನೂ ಹೇಳಿಬಿಡುತ್ತೇನೆ. ಇಲ್ಲದಿದ್ದರೆ ನೀವೇ ಏಕೆ ಈ ವೇಳೆ ಇಲ್ಲಿಗೆ ಬರಬೇಕು? ನಿಮಗೆ ಹೇಳಲೇಬೇಕು.'' ಇನ್ನೂ ಏನೇನೋ ಹೇಳಹೊರಟಿದ್ದ. ಮತ್ತೆ ಆತ ಸುಮ್ಮನೆ ಕುಳಿತ. ನನಗನ್ನಿಸಿತು, ಇಂಜೆಕ್ಷನ್ ಪರಿಣಾಮವಾಗಿ ಅವನಿಗೆ



ಬುದ್ಧಿಭ್ರಮಣೆಯಾಗಿರಬೇಕು ಎಂದು. ಮತ್ತೆ ಅವನು ಸಹಜ ಸ್ಥಿತಿಗೆ ಮರಳಿ ಹೇಳಿದ, ''ನೀನು ನನ್ನ ಸ್ನೇಹಿತ, ನನ್ನ ಹಿತೈಷಿ. ಇಲ್ಲದಿದ್ದರೆ ಈ ವೇಳೆ ಯಾಕಾದರೂ ಬರುತ್ತಿದ್ದೆ? ನಾನು ಆಲೋಚಿಸಿದೆ, ನಿನಗೆಲ್ಲವನ್ನೂ ಹೇಳಬೇಕು ಅಂತ.''

ಅದನ್ನು ಕೇಳಿ ನನಗನ್ನಿಸಿತು, ಬಹುಶಃ ಅವನದೇನೋ ವೈಯಕ್ತಿಕವಾದ ರಹಸ್ಯ ವಿಚಾರವಿರಬೇಕು. ಅದನ್ನು ಅವನು ಹೇಳಬಯಸುತ್ತಿದ್ದಾನೆ. ಅವನು ಅದನ್ನು ಹೇಳಲಾರಂಭಿಸಿದರೆ ಮುಗಿಯುವುದು ತಡವಾಗಬಹುದೇನೋ. ಅಲ್ಲದೆ, ನಾನು ಯಾವ ಕೆಲಸಕ್ಕಾಗಿ ಬಂದಿದ್ದೆನೋ, ಅದಕ್ಕೆ ಇನ್ನು ಹೆಚ್ಚು ಸಮಯ ಉಳಿದಿಲ್ಲ. ಇನ್ನು ಕಾಯುವುದು ಸರಿಯಿಲ್ಲವೆಂದು ಭಾವಿಸಿ ಅವನಿಗೆ ಹೇಳಿದೆ, ''ನಿಮ್ಮ ಕಥೆಯನ್ನು ಹಿಂದಿರುಗಿ ಬರುತ್ತಾ ಕೇಳುತ್ತೇನೆ. ಪಕ್ಕದಲ್ಲೇ ಒಂದು ಮುಖ್ಯ ಕೆಲಸವಿದೆ. ಅದನ್ನು ಮುಗಿಸಿ ಬರುತ್ತೇನೆ. ಆ ಬಳಿಕ ಅದನ್ನು ಕುರಿತು ಚರ್ಚೆ ಮಾಡೋಣ. ಈಗ ನಾನು ಹೋಗಬೇಕು'' ಎಂದೆ. ನಮ್ಮ ಕೆಲಸವೇನು, ಅದೆಲ್ಲಿ ಎಂದೆಲ್ಲ ಕೇಳಿ ತಿಳಿದ ಅವನು, ಕೂಡಲೇ ನನ್ನೊಂದಿಗೆ ಬಂದ.

ದಾರಿಯಲ್ಲಿ ನಾನೆಂದೆ, ''ಆದರೆ ನಿಮಗೆ ಶುಲ್ಕ ಮಾತ್ರ ಕೊಡಲಾಗದು.'' ಅದಕ್ಕೆ ಆತ, ''ನನ್ನನ್ನು ಯಾರೂ ಕರೆದಿಲ್ಲವಲ್ಲ, ನಾನಾಗಿಯೇ ಬರುತ್ತಿದ್ದೇನೆ'' ಎಂದ. ಹಿಂದೆ ಹೇಳಿದ್ದ ಆ ಇಬ್ಬರು ಡಾಕ್ಟರ್‌ಗಳು ಇನ್ನೂ ಬಂದಿರಲಿಲ್ಲ. ಈತ ರೋಗಿಯನ್ನು ಚೆನ್ನಾಗಿ ಪರೀಕ್ಷೆ ಮಾಡಿ, ಇನ್ನಿಬ್ಬರು ಡಾಕ್ಟರರು ಬಂದರೆ ತನ್ನನ್ನು ಕರೆಯಲು ಹೇಳಿ ಹೊರಟುಹೋದ.

ಸರಿಯಾದ ಸಮಯಕ್ಕೆ ಇಬ್ಬರು ಡಾಕ್ಟರರೂ ಬಂದರು. ನನ್ನ ಆ ಹೊಸ ಸ್ನೇಹಿತನನ್ನು ನಾನೀಗ ಕರೆದುಕೊಂಡು ಬಂದೆ. ಆತ ಉಳಿದ ಇಬ್ಬರಿಗಿಂತಲೂ ತುಂಬ ಕಿರಿಯನಾಗಿದ್ದ. ಬಂದವನೇ ವಿದ್ಯಾರ್ಥಿಯಂತೆ ಒಂದು ಬದಿಯಲ್ಲಿ ನಿಂತುಬಿಟ್ಟ. ಹಿರಿಯ ಡಾಕ್ಟರರಿಬ್ಬರೂ ಪರೀಕ್ಷೆ ಮಾಡಿ ಚರ್ಚಿಸಲಾರಂಭಿಸಿದರು: ''ಟೈಫಾಯ್ಡ್. ಅಂದರೆ, ಚಿಕಿತ್ಸೆಗೆ ಮೊದಲು ರಕ್ತಪರೀಕ್ಷೆ ಮಾಡಿಸಬೇಕು. ರಕ್ತಪರೀಕ್ಷೆಯ ಫಲಿತಾಂಶ ಬಂದ ಮೇಲಷ್ಟೇ ಚಿಕಿತ್ಸೆ ಆರಂಭಿಸಬೇಕು'' ಎಂದರು. ಇಲ್ಲಿಯವರೆಗೆ ಸ್ನೇಹಿತ ಸುಮ್ಮನಿದ್ದ. ಈಗ ಹತ್ತಿರ ಬಂದು ಗೌರವ ವ್ಯಕ್ತಪಡಿಸುತ್ತ ಹೇಳಿದ, ''ರಕ್ತಪರೀಕ್ಷೆ ಮಾಡಿಸುವುದು ಉತ್ತಮ. ಅದರೊಂದಿಗೆ ಉಗುಳನ್ನು ಪರೀಕ್ಷೆ ಮಾಡಿಸುವುದೂ ಒಳಿತು. ನಾನು ನೋಡಿದ್ದೇನೆಂದರೆ, ನನಗನ್ನಿಸುವ ಹಾಗೆ ಇದು ನ್ಯುಮೋನಿಯಾ; ಅಷ್ಟೇ ಅಲ್ಲ, ಡಬಲ್ ನ್ಯುಮೋನಿಯಾ.'' ಹಿರಿಯ ಡಾಕ್ಟರರು ಮತ್ತೊಮ್ಮೆ ಪರೀಕ್ಷೆ ಮಾಡಿ, ರೋಗಿಯ ಉಗುಳನ್ನು ಪರೀಕ್ಷೆಗಾಗಿ ಕೊಂಡೊಯ್ದರು. ಮಾಸ್ಟರ್ ಮಹಾಶಯ ಹೆಚ್ಚು ಕಡಿಮೆ ಅಲ್ಲೇ ಇದ್ದರು. ಅವರಿಗೆ ಹೊಸ ಡಾಕ್ಟರರ ಪರಿಚಯವಿರಲಿಲ್ಲ.

ಸ್ನೇಹಿತ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋದ. ರೋಗಿಯ ವಿಷಯವನ್ನು ಮೊದಲು ಹೇಳಿದ: ''ನನ್ನ ಸಿದ್ಧಾಂತ ಸರಿಕಂಡರೆ, ಹಾಗೂ ಚಿಕಿತ್ಸೆ ಮಾಡಿಸುವ ಜವಾಬ್ದಾರಿಯನ್ನು ನನಗೆ ವಹಿಸಲು ನೀವು ಸಿದ್ಧರಿದ್ದರೆ ನಾನು ಚಿಕಿತ್ಸೆ ಮಾಡುತ್ತೇನೆ; ನೀವೂ ಏನೂ ಶುಲ್ಕ ಕೊಡಬೇಕಾಗಿಲ್ಲ. ಆದರೆ ಒಂದು ವಿಷಯ ಮೊದಲೇ ಹೇಳಿಬಿಡುತ್ತೇನೆ: ನಾನು ಏನು ಹೇಳುತ್ತೇನೋ ಹಾಗೇ ಮಾಡಬೇಕು. ಹಳ್ಳಿಯ ದೊಡ್ಡ ವ್ಯಕ್ತಿಗಳ ಮೇಲೆ ಸೇವೆಯ ಭಾರವನ್ನು ಒಪ್ಪಿಸಿಬಿಟ್ಟರೆ ನಡೆಯದು. ನೀವೇ ಸೇವೆ ಮಾಡಬೇಕು. ಹಾಗಿದ್ದರೆ ಮಾತ್ರ ನಾನು ಸಿದ್ಧ'' ಎಂದ.

ಅಷ್ಟು ದೊಡ್ಡ ಡಾಕ್ಟರರ ಮುಂದೆ ನನ್ನ ಸ್ನೇಹಿತ ಸ್ಪಷ್ಟವಾಗಿ ತನ್ನ ವಿಚಾರವನ್ನು ಧೈರ್ಯವಾಗಿ ತಿಳಿಸಿದ್ದನ್ನು ಕಂಡು, ನನಗೆ ಅವನ ಮೇಲೆ ನಂಬಿಕೆಯುಂಟಾಯಿತು. ಮನಸ್ಸಿನಲ್ಲಿಯೇ ನಾನು ಅವನ ತಿಳುವಳಿಕೆಯನ್ನು (ನಿಜವಾಗಿಯೂ ಅವನು ಪರಿಣಿತನಾಗಿದ್ದರೆ) ಹೊಗಳಿಕೊಂಡೆ.

ಸ್ನೇಹಿತ ಚಹಾ ತಂದುಕೊಟ್ಟು, ಬಾಗಿಲು ಹಾಕಿದ. ಇಬ್ಬರೂ ಚಹಾ ಕುಡಿಯುತ್ತಾ ಮಾತುಕತೆ ಆರಂಭಿಸಿದೆವು. ಮೊದಲಿಗೆ ಅವನು ಪೀಠಿಕೆ ಹಾಕಿದ: ''ನಿನಗೇಕೆ ಈ ವಿಷಯವನ್ನೆಲ್ಲ ಹೇಳುತ್ತೇನೋ ನನಗೆ ಗೊತ್ತಿಲ್ಲ. ಆದರೆ ನಿನಗೆ ಹೇಳುತ್ತೇನೆ. ಇಲ್ಲಿಯವರೆಗೂ ನಾನು ಇದನ್ನು ಬೇರೆ ಯಾರಿಗೂ ಹೇಳಿಲ್ಲ. ನಿನಗೆ ಹೇಳಬೇಕೆಂದು ನಿರ್ಧರಿಸಿದ್ದೇನೆ, ನೀನು ಇದನ್ನು ಕೇಳಲೇಬೇಕು'' ಎಂದ. ಅನಂತರ ಹೇಳತೊಡಗಿದ: ''ನಾನು ಇಂಜಕ್ಷನ್ ತೆಗೆದುಕೊಳ್ಳುತ್ತಿದ್ದುದನ್ನು ನೋಡಿದ್ದೆಯಲ್ಲ, ಅದು ಏನು ಗೊತ್ತೆ? ಮೋರ್ಫಿಯಾ! ನಾನು ಮದ್ಯ ಸೇವಿಸತೊಡಗಿದೆ, ಅನಂತರ ಅಫೀಮು ಸೇವಿಸಲಾರಂಭಿಸಿದೆ, ಈಗ ಮೋರ್ಫಿಯಾ! ಒಂದು ನಿಮಿಷ ಕೂಡ ಅದಿಲ್ಲದೆ ಇರಲಾಗದು, ಯಾವಾಗಲೂ ಉನ್ಮತ್ತನಾಗಿಯೇ ಇರಬೇಕೆನ್ನಿಸುತ್ತದೆ'' ಎಂದ. ಸ್ನೇಹಿತ ಎದ್ದುನಿಂತ; ಡ್ರಾಯರ್ ಎಳೆದು ಮದ್ಯದ ಬಾಟಲಿ, ಅಫೀಮಿನ ಮಾತ್ರೆಗಳನ್ನು ತೋರಿಸಿದ.

ನನಗೆ ಸುಮ್ಮನಿರಲಾಗಲಿಲ್ಲ. ಕೇಳಿದೆ, ''ತಮ್ಮಾ, ಯಾಕೆ ನೀನು ಹೀಗೆ ಮಾಡುತ್ತೀಯಾ?''

ಅವನು ಉತ್ತರಿಸಿದ, ''ಯಾಕೆಂದೆ? ಯಾಕೆಂದು ತಿಳಿದಿದ್ದರೆ ಮುಗಿದೇ ಹೋಯಿತಲ್ಲ.'' ''ಇದೇ ನೋಡು ಆತ್ಮಘಾತುಕತನ — ನಿನಗೆ ತಿಳಿಯುತ್ತದೆ ತಾನೆ, ತಮ್ಮಾ?'' ''ಹೌದು, ಅದು ತಿಳಿಯುತ್ತದೆ; ಓದಿ, ಕೇಳಿ ತಿಳಿದುಕೊಂಡಿದ್ದೇನೆ ಕೂಡ. ನನಗೆ ಬದುಕಿ ಉಳಿಯುವ ಇಚ್ಛೆಯಿಲ್ಲ. ಬದುಕುವುದು ಒಳ್ಳೆಯದೂ ಅಲ್ಲ. ಕೊನೆಗೂ ಹಾಗೇ ಮಾಡುತ್ತೇನೆ ನೋಡು.''

ಅವನ ಮರ್ಮಭೇದಿಯಾದ ಕಥೆಯನ್ನು ಕೇಳಿ ನನಗೆ ಎಷ್ಟೊಂದು ಭಾವಾತಿರೇಕವುಂಟಾಯಿತೆಂದರೆ, ಸುಮ್ಮನೆ ಕುಳಿತಿರಲಾಗದೆ ನಾನು ಎದ್ದು ಹೋಗಿ ಅವನನ್ನಪ್ಪಿಕೊಂಡು ಒತ್ತಾಯ ಮಾಡುತ್ತಾ ಹೇಳಿದೆ, ''ಹೇಳು ತಮ್ಮಾ, ನನಗೆ ಮಾತ್ರ ತಿಳಿಯುವಂತೆ ಹೇಳು — ನಿಜವಾಗಿಯೂ ನಿನ್ನ ಮನಸ್ಸಿನ ವೇದನೆಯೇನು, ಯಾತಕ್ಕಾಗಿ ಇದನ್ನೆಲ್ಲ ಮಾಡಲು ಹೊರಟೆ? ನನಗೆ ನನ್ನದು ಅಂತ ಏನೂ ಇಲ್ಲ, ಆದರೂ ಒಂದು ವಿಷಯ ನನಗೆ ಗೊತ್ತು. ಯಾರಲ್ಲಿ ಶರಣಾಗತರಾದರೆ ಮನಸ್ಸಿನ ಎಲ್ಲ ವೇದನೆಗಳೂ ಶಮನಗೊಳ್ಳುವುವೋ, ಎಲ್ಲ ಬೇಗೆಯೂ ಆರಿಹೋಗುವುದೋ, ಆನಂದದಿಂದ ಹೃದಯ ತುಂಬಿ ತುಳುಕಾಡುವುದೋ ಅದನ್ನು ನಾನು ಬಲ್ಲೆ.''

ಅವನು ನನ್ನನ್ನು ಕುಳ್ಳಿರಿಸಿ, ತನ್ನ ಹೃದಯವನ್ನೆಲ್ಲ ತೆರೆದು ಹೇಳಿದ. ನನಗರ್ಥವಾಯಿತು, ಅವನ ಪತ್ನಿಯ ಕೃತಘ್ನತೆಯೇ ಎಲ್ಲ ಅನರ್ಥಗಳಿಗೂ ಮೂಲವೆಂದು.

ಸ್ನೇಹಿತನಿಂದ ಬೀಳ್ಕೊಂಡು ನಾನು ಮೆಡಿಕಲ್ ಕಾಲೇಜಿಗೆ ಹೋದೆ. ಅಲ್ಲಿಂದ ರಕ್ತ ಹಾಗೂ ಉಗುಳಿನ ರಿಪೋರ್ಟ್ ತೆಗೆದುಕೊಂಡು ಬಂದೆ. ಅದನ್ನು ನೋಡಿ ಸ್ನೇಹಿತ ಹೇಳಿದ, ''ನನ್ನ diognosis (ರೋಗನಿರ್ಣಯ) ಸರಿಯಾಗಿತ್ತು. ಈಗ ಎಲ್ಲವೂ ನಿಮ್ಮಿಚ್ಛೆ.'' ನಾನು ಅಂದಿನ ಮಟ್ಟಿಗೆ ವಿದಾಯ ಹೇಳಿ ಬಂದೆ.

ನಾನು ಶ್ರೀಮಾತೆಯವರ ಬಳಿಗೆ ಹೋಗಿ, ರೋಗಿ ಹಾಗೂ ನನ್ನ ಸ್ನೇಹಿತನ ವಿಷಯವನ್ನೆಲ್ಲ ವಿವರಿಸಿ ಹೇಳಿದೆ. ಅವರು ನನ್ನ

ಸ್ನೇಹಿತನ ಕೈಯಿಂದಲೇ ಪ್ರಮಥನಿಗೆ ಚಿಕಿತ್ಸೆ ಮಾಡಿಸಲು ಆದೇಶಿಸಿದರು. ಮರುದಿನದಿಂದ ಅವನ ಬಳಿ ಚಿಕಿತ್ಸೆ ಆರಂಭವಾಯಿತು. ಅವನು ಚಿಕಿತ್ಸೆ ಮಾಡಿಸಲು ಕಾತರನಾಗಿದ್ದ ಎಂದೇನೂ ಅಲ್ಲ; ತನ್ನ ಖರ್ಚಿನಿಂದಲೇ ಅವನು ಒಂದು ಔಷಧಾಲಯದಿಂದ ಔಷಧಿಯನ್ನು ತಂದುಕೊಡುತ್ತಿದ್ದ. ನಾನು ಪ್ರಾಯಶಃ ಇಡೀ ದಿನ ರೋಗಿಯ ಸೇವೆಗಾಗಿ ಅಲ್ಲಿ ಇರಬೇಕಾಗಿತ್ತು. ಮಧ್ಯಾಹ್ನ ಎರಡು ಗಂಟೆ ಕಾಲ ಮಾತ್ರ ಸ್ನೇಹಿತ ನನ್ನನ್ನು ತನ್ನ ಮನೆಯ ಬೈಠಕ್ ಖಾನೆಗೆ ಕರೆದುಕೊಂಡು ಹೋಗುತ್ತಿದ್ದ. ನಮ್ಮ ಒಡನಾಟದಿಂದಾಗಿ ನಮ್ಮ ನಡುವೆ ಸ್ನೇಹ ಗಾಢವಾಗತೊಡಗಿತು. ಪರಿಣಾಮವಾಗಿ, ಅವನು ಹಿಂದೆ ಸೇವಿಸಿದ್ದ ಕಠಿಣ ಔಷಧಿಗಳನ್ನೆಲ್ಲ ಹೊರಹಾಕಲು, ತನ್ನ ಹೃದಯವನ್ನು ಸ್ವಚ್ಛಗೊಳಿಸಿ ಶುಭ್ರ ಬಟ್ಟೆಯಂತೆ ಮಾಡಲು ಯತ್ನಿಸಿದ. ಶ್ರೀಮಾತೆ ಪ್ರತಿದಿನವೂ ಅವನ ಸುದ್ದಿ ಕೇಳಿ ತಿಳಿಯುತ್ತಿದ್ದರು; ಆದರೆ ಸ್ನೇಹಿತ ಶ್ರೀಮಾತೆಯವರ ಬಗ್ಗೆ ಸ್ವಲ್ಪವೂ ಕೇಳಿ ತಿಳಿಯಲಿಲ್ಲ. ನನಗೂ ಅದನ್ನೆಲ್ಲ ತಿಳಿಸಲಾಗಲಿಲ್ಲ.

ನಡುನಡುವೆ ಶ್ರೀಮಾತೆ ಪ್ರಮಥನನ್ನು ನೋಡಲು ಹೋಗುತ್ತಿದ್ದರು. ಕ್ರಮೇಣ ಪ್ರಮಥನಾಥನಿಗೆ ವಾಸಿಯಾಗತೊಡಗಿತು. ಚೆನ್ನಾಗಿ ಬೆಂದ ಅನ್ನವನ್ನು ಊಟ ಮಾಡಲು ಆರಂಭಿಸಿದ. ಅಷ್ಟರಲ್ಲಿ ಒಂದು ದಿನ ಮಾಸ್ಟರ್ ಮಹಾಶಯ ತಮ್ಮ ಝಾಮಾ ಪುಕುರದ ಮನೆಗೆ ಶ್ರೀಮಾತೆಯವರನ್ನು ಕರೆದುಕೊಂಡು ಹೋದರು. ಅದರ ಸಲುವಾಗಿ ಅಂದು ಮಾಸ್ಟರ್ ಮಹಾಶಯನ ಮನೆಯಲ್ಲಿ ಒಂದು ಸಣ್ಣ ಉತ್ಸವವೇ ಜರುಗಿತು. ಶ್ರೀಮಾತೆಯವರೊಂದಿಗೆ ಅವರ ಭಕ್ತೆಯರ ಬಳಗ, ಹಾಗೂ ನಾವೆಲ್ಲರೂ ಇದ್ದೆವು.

ಶ್ರೀಮಾತೆ ಅಲ್ಲಿ ಪೂಜೆ ಮಾಡಲು ಕುಳಿತಿದ್ದರು. ನೈವೇದ್ಯವಾಗಲು ಇನ್ನೂ ಸಮಯವಿದೆ ಎಂದು ತಿಳಿದು, ನಾನು ಸ್ನೇಹಿತನ ಮನೆಗೆ ಹೋದೆ. ಅವನಿಗೆ ಕೂಡಲೇ ನನ್ನೊಂದಿಗೆ ಬರಹೇಳಿದೆ. ಅವನು ಆ ಕ್ಷಣವೇ ನನ್ನೊಂದಿಗೆ ಹೊರಟ. ಪ್ರಮಥನಿಗೇನೋ ಆಗಿರಬೇಕೆಂದು ಅವನು ಆಲೋಚನೆ ಮಾಡಿದ್ದ. ಆದ್ದರಿಂದ ಅಂಗಿ ಹಾಕಿಕೊಳ್ಳದೆ, ಉತ್ತರೀಯವನ್ನು ಮೈಮೇಲೆ ಹಾಕಿಕೊಂಡು ಹೊರಬಂದಿದ್ದ. ಆದರೆ ನಾವು ಬೇರೆ ದಾರಿಯಲ್ಲಿ ಹೊರಟಿದ್ದುದನ್ನು ನೋಡಿ, ''ತಮ್ಮಾ, ನಾವು ಎಲ್ಲಿಗೆ ಹೋಗುತ್ತಿದ್ದೇವೆ?'' ಎಂದು ನನ್ನನ್ನು ಕೇಳಿದ. ನಾನಂದೆ, ''ನೀನು ದೀಕ್ಷೆ ಪಡೆದುಕೊಳ್ಳುವಿಯಂತೆ, ನಡೆ. ಹಾಗಿದ್ದರೆ ಮಾತ್ರ ನಿನಗೆ ಎಲ್ಲವೂ ಒಳ್ಳೆಯದಾಗುವುದು.'' ಅದಕ್ಕೆ ಅವನೆಂದ, ''ನಾನು ಊಟ ಮಾಡಿಬಿಟ್ಟೆನಲ್ಲ!'' ನಾನೆಂದೆ, ''ಶ್ರೀಮಾತೆ ಏನು ಹೇಳುತ್ತಾರೋ ಹಾಗೇ ಆಗುತ್ತದೆ.'' ''ಹಾಗಾದರೆ, ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋಗುತ್ತಿದ್ದೀಯಾ?'' ''ಹೌದು. ಅವರ ಪಾದಕಮಲಗಳೇ ಅತ್ಯಂತ ದುರ್ಲಭವಾದ ವಸ್ತು — ಅವರ ವಿಷಯವಾಗಿ ಮೊದಲ ದಿನವೇ ಹೇಳಿದ್ದೆನಲ್ಲ.''

ಮಾತಿಲ್ಲದೆ ಸ್ನೇಹಿತ ಹೆಜ್ಜೆ ಹಾಕಿದ. ಮಾಸ್ಟರ್ ಮಹಾಶಯರ ಮನೆಗೆ ಹೋಗಿ, ಸ್ನೇಹಿತನನ್ನು ಕೆಳ ಅಂತಸ್ತಿನಲ್ಲಿ ಕುಳ್ಳಿರಲು ಹೇಳಿ, ಮೇಲಂತಸ್ತಿಗೆ ಹೋದೆ. ಅಲ್ಲಿ ಶ್ರೀಮಾತೆಯವರು ಪೂಜೆ ಮಾಡಿ ಮುಗಿಸಿದ್ದರು; ಆದರೆ ಇನ್ನೂ ಅವರು ಆಸನದಲ್ಲಿ ಕುಳಿತೇ ಇದ್ದರು. ಸ್ನೇಹಿತನು ಬಂದು ಕುಳಿತಿರುವ ವಿಷಯವನ್ನು ಅವರಿಗೆ ತಿಳಿಸಿದೆ. ಅವನನ್ನು ಮೇಲಂತಸ್ತಿಗೆ ಕರೆತರಲು ಶ್ರೀಮಾತೆ ಆದೇಶಿಸಿದರು. ಸ್ವಲ್ಪ ಸಮಯದಲ್ಲೇ ನನ್ನ ಸ್ನೇಹಿತ ಶ್ರೀಮಾತೆಯವರ ಶಿಷ್ಯಂದಿರಲ್ಲಿ ಒಬ್ಬನಾದ. ಆಗ ಅವನ ಮುಖದಲ್ಲಿ ಒಂದು ಸ್ವರ್ಗೀಯ ಕಾಂತಿ ಬೆಳಗತೊಡಗಿತು. ಅವನ ಕಣ್ಣುಗಳ ಸುತ್ತ ಹಿಂದಿದ್ದ ಕಪ್ಪು ಛಾಯೆ ಈಗ ಇಲ್ಲದಾಯಿತು. ಪರಿವರ್ತನೆಯಿಂದ ಅವನ ಕಣ್ಣುಗಳಲ್ಲಿ ಒಂದು ಅಲೌಕಿಕ ಬೆಳಗು ಸ್ಪಷ್ಟವಾಗಿ ಕಾಣಿಸಿಕೊಂಡಿತು. ಈಗ ಅವನನ್ನು ನೋಡಿದವರ ಮನಸ್ಸಿನಲ್ಲಿ ಅದೇ ಶ್ರುತಿವಾಣಿ ಏಳಬಹುದು:

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥[೧]

ಮಾಸ್ಟರ್ ಮಹಾಶಯನ ಒತ್ತಾಯದ ಮೇರೆಗೆ ಸ್ನೇಹಿತ ನಮ್ಮೊಂದಿಗೆ ಊಟಕ್ಕೆ ಕುಳಿತ. ಗೋಲಾಪ್ ಮಾ ಎಲ್ಲರಿಗಿಂತ ಮೊದಲು ಸ್ನೇಹಿತನಿಗೆ ಶ್ರೀಮಾತೆಯವರ ಪ್ರಸಾದವನ್ನು ಬಡಿಸಿದರು. ಸ್ನೇಹಿತನು ಅದನ್ನು ತುಂಬು ಭಕ್ತಿಯಿಂದ ಸ್ವೀಕರಿಸಿದ್ದನ್ನು ನಾನು ಗಮನಿಸಿದೆ. ಊಟವಾದ ಮೇಲೆ ತನ್ನ ಅವಸರದ ಕೆಲಸಗಳನ್ನೆಲ್ಲ ಬದಿಗೊತ್ತಿ, ಅವನು ಶ್ರೀಮಾತೆಯವರು ಬಾಗ್‌ಬಜಾರಿಗೆ ಮರಳುವವರೆಗೂ ಅಲ್ಲೇ ಕುಳಿತ. ಶ್ರೀಮಾತೆ ಗಾಡಿಯಲ್ಲಿ ಕುಳಿತುಕೊಳ್ಳಲು ಹೋಗುವಾಗ ಅವನು ಅವರ ಪಾದಧೂಳಿಯನ್ನು ತೆಗೆದುಕೊಂಡ. ಶ್ರೀಮಾತೆ ಕೂಡ ಅವನಿಗೆ ಬಾಗ್‌ಬಜಾರಿಗೆ ಬರಹೇಳಿದರು.

ಅನಂತರ ನನ್ನ ಗಮನಕ್ಕೆ ಬಂದ ವಿಷಯವೇನೆಂದರೆ, ಸ್ನೇಹಿತನ ಬಳಿ ಶ್ರೀಮಾತೆಯವರಿಗೆ ಒಂದಿಷ್ಟೂ ಸಂಕೋಚವುಂಟಾಗಲಿಲ್ಲ ಎಂದು. ಅವರು ನಮ್ಮ ಬಳಿ ಹೇಗೆ ಮುಕ್ತವಾಗಿ ಇರುತ್ತಿದ್ದರೋ, ಹಾಗೆಯೇ ನನ್ನ ಸ್ನೇಹಿತನ ಬಳಿ ಕೂಡ ಇರುತ್ತಿದ್ದರು. ಸ್ನೇಹಿತ ದೀಕ್ಷೆ ಪಡೆಯುವ ತನಕವೂ ಅವನೊಂದಿಗೆ ಏನೇನು ಮಾತುಕತೆ ನಡೆಯಿತೋ, ಅದೆಲ್ಲವೂ ಶ್ರೀಮಾತೆಯವರ ಆಣತಿಗನುಸಾರವೇ ನಡೆಯಿತೆಂದು ಹೇಳಿದರೆ ಹೆಚ್ಚಾಗಬಹುದೇನೋ.

ಓ ಸ್ನೇಹಿತ! ನಿನ್ನ ಬಗ್ಗೆ ಬರೆಯುತ್ತ ಇಂದು ಅನೇಕ ಸಂಗತಿಗಳು ನೆನಪಾಗುತ್ತಿವೆ. ಇಂದು ನೀನು ಆನಂದಧಾಮದಲ್ಲಿರುವೆ!

ಕ್ರಿ.ಶ. ೧೯೦೬-೧೯೦೭ನೇ ಇಸವಿಯಲ್ಲಿ ಪೂರ್ವ ಬಂಗಾಳದಲ್ಲಿ (ಇಂದಿನ ಬಾಂಗ್ಲಾದೇಶದಲ್ಲಿ) ನಾವು ಬರ ಪರಿಹಾರಕಾರ್ಯದಲ್ಲಿ ತೊಡಗಿಕೊಂಡಿದ್ದುದನ್ನು ತಿಳಿದು, ನೀನು ನಿನ್ನ ವೃತ್ತಿ ಹಾಗೂ ಸಂಪಾದನೆಗಳನ್ನು ತ್ಯಜಿಸಿ, ನಿನ್ನ ಬಡೋಬಜಾರ್ ಪ್ರದೇಶದಲ್ಲಿ ಮನೆಮನೆಗೆ ಹೋಗಿ ಸಾವಿರಾರು ರೂಪಾಯಿ ಹಾಗೂ ವಸ್ತ್ರ ಸಂಗ್ರಹ ಮಾಡಿದೆ ನೀನು, ಅದೆಲ್ಲ ನೆನಪಿಗೆ ಬರುತ್ತಿದೆ.

---

೧. ಮುಂಡಕೋಪನಿಷತ್ತು, ೨.೨.೮. *(-ಸಂ)*

ರಾಮಮಯ ವಿಶ್ವಾಸನಿಗೆ ಶಸ್ತ್ರಚಿಕಿತ್ಸೆ ಮೂಲಕ ಅವನ ಪ್ರಾಣ ಉಳಿಯುವಂತೆ ಮಾಡಿದ್ದು ಇಂದು ನೆನಪಿಗೆ ಬರುತ್ತಿದೆ.

ಜಯರಾಮಬಾಟಿಯಲ್ಲಿ ಬಡೋಪುಕುರದಲ್ಲಿ ಒಂದೆಡೆ ಎಷ್ಟೋ ದಿನಗಳನ್ನು ಕಳೆದಿದ್ದು ಇಂದು ನೆನಪಿಗೆ ಬರುತ್ತಿದೆ.

ಇಂದು ನೆನಪಿಗೆ ಬರುತ್ತಿದೆ — ಶ್ರೀಮಾತೆಯವರ ಬಳಿ ಇಬ್ಬರೂ ಕುಳಿತು ಊಟ ಮಾಡುತ್ತಿದ್ದಾಗ, 'ನೀನು ಬ್ರಾಹ್ಮಣ, ನಾನು ಶೂದ್ರ' ಎಂದು ಜಾತಿಭೇದವನ್ನು ತುಚ್ಛವಾಗಿಸಿ ನನ್ನ ಎಲೆಯಿಂದ ನೀನು ಅನ್ನವನ್ನು ತೆಗೆದುಕೊಂಡೆ — ಅದನ್ನು ನೋಡಿ ಶ್ರೀಮಾತೆ, ''ನೀವಿಬ್ಬರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣತಮ್ಮಂದಿರಂತೆ ಇದ್ದೀರಿ'' ಎಂದರು. ಅದಕ್ಕೆ ಉತ್ತರವಾಗಿ ನೀನು ಹೇಳಿದೆ, ''ಅದೇನೋ ಸರಿ ಅಮ್ಮಾ! ನಾವಿಬ್ಬರೂ ನಿಮ್ಮ ಮಕ್ಕಳು. ಅವನು ದೊಡ್ಡವನು, ನಾನು ಚಿಕ್ಕವನು'' — ಇತ್ಯಾದಿ. ಎಷ್ಟೊಂದು ವಿಷಯಗಳು ನೆನಪಾಗುತ್ತಿವೆ! ...

ಸೋದರಿ ನಿವೇದಿತಾಳ ಶಾಲೆಯ ಗಾಡಿ ಸಿಕ್ಕಿದಾಗಲೆಲ್ಲ ಅದರಲ್ಲಿ ಶ್ರೀಮಾತೆಯವರನ್ನು ಕರೆದುಕೊಂಡು ಸುತ್ತಾಡಿಸಿದೆವು ಎಂದು ಈ ಹಿಂದೆ ಹೇಳಲಾಗಿದೆ. ಒಂದು ಸಲ ಕಾಳಿಕೃಷ್ಣ ಮಹಾರಾಜರಿಗೆ[೨] ಶ್ರೀಮಾತೆಯವರ ಫೋಟೋ ತೆಗೆಯಬೇಕೆಂಬ ಬಯಕೆಯುಂಟಾಯಿತು. ಅವರದೇ ಖರ್ಚಿನಲ್ಲಿ, ಅವರದೇ ವ್ಯವಸ್ಥೆ ಪ್ರಕಾರ ಆ ಗಾಡಿಯಲ್ಲಿ ಶ್ರೀಮಾತೆಯವರನ್ನು ಚೌರಂಗೀ ಎಂಬ ಸ್ಥಳದಲ್ಲಿದ್ದ ವ್ಯಾನ್‌ಡೈಕ್ ಕಂಪೆನಿಯ ಸ್ಟುಡಿಯೋಗೆ ಕರೆದುಕೊಂಡು ಹೋಗಿ, ಅವರ ಫೋಟೋ ತೆಗೆಯಲಾಯಿತು.

ಹಿಂದೆ ಹೇಳಿದ ಲಲಿತಮೋಹನ ಚಟ್ಟೋಪಾಧ್ಯಾಯ ಕಾಂಕುರಗಾಛಿ ಯೋಗೋದ್ಯಾನದ ಭಕ್ತನಾಗಿದ್ದ. ಕ್ರಮೇಣ ನನ್ನೊಡನೆ ಒಡನಾಟ ಆರಂಭವಾಗಿ, ನಡುನಡುವೆ ಅವನು 'ಉದ್ಬೋಧನ'ಕ್ಕೆ ಬರತೊಡಗಿದ.

ಅವನು ಅಲ್ಲಿಗೆ ಬರಲು ಇನ್ನೂ ಒಂದು ಕಾರಣವಿತ್ತು. ಬಸುಪಾಡಾ ಲೇನ್‌ನಲ್ಲಿ ಅವನ ಅತ್ತೆ ವಾಸವಾಗಿದ್ದಳು. ಲಲಿತನು ಆಫೀಸಿಗೆ ಹೋಗುವಾಗ ತನ್ನ ಪತ್ನಿಯನ್ನು ಆಗಾಗ ಅಲ್ಲಿ ಬಿಟ್ಟು ಹೋಗುತ್ತಿದ್ದ; ರಾತ್ರಿ ಮರಳಿ ಬರುವಾಗ ಅಲ್ಲಿಂದ ಕರೆದುಕೊಂಡು ಬರುತ್ತಿದ್ದ. ಈ ಕಾರಣದಿಂದ ಅವನು ಬಸುಪಾಡಾಗೆ ಬಂದಾಗ 'ಉದ್ಬೋಧನ'ಕ್ಕೆ ಬರುತ್ತಿದ್ದ. ಇದಲ್ಲದೆ, ಅವನ ಅತ್ತೆ ಯೋಗಿನ್ ಮಾ ಜೊತೆಗೆ ಗಂಗಾಸ್ನಾನ ಮಾಡುತ್ತ, ಅವರಲ್ಲಿ ಸ್ನೇಹವುಂಟಾಗಿತ್ತು. ಹೀಗೆ ಶ್ರೀಮಾತೆಯವರ ಚಿಕ್ಕಪ್ಪ ಸಾಯುವಾಗ ಅಲ್ಲಿ ಲಲಿತನನ್ನು ನೋಡಿದ್ದೆ. ಅಂದು ಸ್ಮಶಾನ ಘಾಟ್‌ನಲ್ಲಿ ನಮ್ಮೊಂದಿಗೆ ಅವನು ಕೆಲವು ಗಂಟೆಗಳ ಕಾಲ ಮಾತುಕತೆಯಾಡಿದ್ದ. ಅದರ ಪರಿಣಾಮವಾಗಿ ಅವನು 'ಉದ್ಬೋಧನ'ಕ್ಕೆ ಹೆಚ್ಚು ಹೆಚ್ಚು ಬರಲಾರಂಭಿಸಿದ; ಅಷ್ಟೇ ಅಲ್ಲದೆ ನಮ್ಮ ಸ್ನೇಹಿತರ ನಡುವೆ ಒಬ್ಬನಾದ. ಕ್ರಮೇಣ ಆತ್ಮೀಯತೆ ಎಷ್ಟು ಬೆಳೆಯಿತೆಂದರೆ, ಅವನು ದೀಕ್ಷೆ ಪಡೆಯುವ ಸಲುವಾಗಿ ಶ್ರೀಮಾತೆಯವರನ್ನು ಭೂತಾರ್‌ಪಾಡಾ ಲೇನ್‌ನಲ್ಲಿದ್ದ ತನ್ನ ಮನೆಗೆ ಕರೆದುಕೊಂಡು ಹೋದ. ಅಲ್ಲಿ ಒಂದು ಸಣ್ಣ ಸತ್ಸಂಗವನ್ನು ಏರ್ಪಡಿಸಿದ. ಮಾಸ್ಟರ್ ಮಹಾಶಯ, ಡಾಕ್ಟರ್ ಕಂಜಿಲಾಲ್ ಹೀಗೆ ನಮ್ಮಲ್ಲಿ ಕೆಲವರೂ ಅಲ್ಲಿಗೆ ಹೋಗಿದ್ದೆವು. ಶ್ರೀಮಾತೆಯವರೊಂದಿಗೆ ಗೋಲಾಪ್ ಮಾ, ಯೋಗಿನ್ ಮಾ ಮುಂತಾದ ಭಕ್ತೆಯರೂ ಇದ್ದರು.

ನಾವು ಅಲ್ಲಿಗೆ ಹೋದಾಗ ಮಾಸ್ಟರ್ ಮಹಾಶಯ ಈಗಾಗಲೇ ಬಂದು ಕುಳಿತಿದ್ದರು. ಸ್ನೇಹಿತ ಡಾಕ್ಟರ್ ಕಂಜಿಲಾಲ್ ಅನಂತರ ಬಂದರು. ಆ ಕಾರ್ಯಕ್ರಮದಲ್ಲಿ ಶ್ರೀರಾಮಕೃಷ್ಣರ ಪೂಜೆಯಾದ ನಂತರ, ನೈವೇದ್ಯ ಇತ್ಯಾದಿಗಳೆಲ್ಲ ನಡೆದವು. ಅನಂತರ ಲಲಿತನು ತನ್ನ ಪತ್ನಿ ಸಮೇತ ಶ್ರೀಮಾತೆಯವರಿಂದ ದೀಕ್ಷೆ ಪಡೆದ. ಅಂದಿನಿಂದ ಅವನು ಶ್ರೀಮಾತೆಯವರ ಹಾಗೂ ಬೇಲೂರು ಮಠದ ಸೇವೆಗಾಗಿ ತನ್ನನ್ನು ಸಮರ್ಪಿಸಿಕೊಂಡ. ನಾನು ಶ್ರೀಮಾತೆಯವರನ್ನು ಗಮನಿಸುತ್ತಿದ್ದೆ. ಅವರು ಲಲಿತ ಮತ್ತು ಕಂಜಿಲಾಲ್ ಇವರನ್ನು ಕಂಡಾಗಲೆಲ್ಲ ತುಂಬ ಸಂತೋಷಪಡುತ್ತಿದ್ದರು. ಅವರಿಬ್ಬರನ್ನೂ ಶ್ರೀಮಾತೆ ತುಂಬ ಪ್ರೀತಿಸುತ್ತಿದ್ದರು.

ಒಂದು ಸಲ ಲಲಿತನು ಇದ್ದಕ್ಕಿದ್ದಂತೆ ಜಯರಾಮಬಾಟಿಗೆ ಬಂದುಬಿಟ್ಟ. ಮೂರು ದಿನ ಅವನು ಅಲ್ಲೇ ಇದ್ದುಬಿಟ್ಟ. ಅವನನ್ನು ಎಲ್ಲಿ ಕುಳ್ಳಿರಿಸಬೇಕು, ಅವನಿಗೆ ಏನನ್ನು ತಿನ್ನಿಸಬೇಕು ಎಂದೆಲ್ಲ ಶ್ರೀಮಾತೆ ಯಾವಾಗಲೂ ಉತ್ಸುಕತೆಯಿಂದ ಇರುತ್ತಿದ್ದರು. ಅವನು ಮರಳಿ ಹೋಗುವಾಗ ಶ್ರೀಮಾತೆ ಸ್ವಲ್ಪದೂರ ಅವನೊಂದಿಗೇ ಹೋಗಿ ಕಳುಹಿಸಿಕೊಟ್ಟು ಬರುತ್ತಿದ್ದರು.

ಒಂದು ಸಲ ಲಲಿತನಿಗೆ ವಿಪರೀತ ಕಾಯಿಲೆ ಬಂತು. ಡಾಕ್ಟರ್ ಕಂಜಿಲಾಲ್, ಡಾಕ್ಟರ್ ಸರ್ವಾಧಿಕಾರಿ ಮೊದಲಾದ ಪ್ರಸಿದ್ಧ ವೈದ್ಯರೆಲ್ಲ ಬಂದು ಚಿಕಿತ್ಸೆ ಮಾಡತೊಡಗಿದರು. ಶ್ರೀಮಾತೆ ಪ್ರತಿದಿನವೂ ಅವನನ್ನು ನೋಡಿಬರಲು ತಮ್ಮ ಸೇವಕನನ್ನು[೩] ಕಳುಹಿಸುತ್ತಿದ್ದರು. ರೋಗಿಯ ಪರಿಸ್ಥಿತಿ ಗಂಭೀರವಾದಾಗ ಶ್ರೀಮಾತೆ ಸೇವಕನ ಕೈಗೆ ನಿರ್ಮಾಲ್ಯವನ್ನು ಕೊಟ್ಟು ಹೇಳಿದರು, ''ನಿರ್ಮಾಲ್ಯವನ್ನು ಅವನ ತಲೆಯ ಮೇಲೆ ಇಡು. ಅನಂತರ ಹೇಳು, ಅವನಿಗೆ ವಾಸಿಯಾಗುವುದು ಅಂತ. ಆಯುರ್ವೇದ ವೈದ್ಯರು ಅವನಿಗೆ ಚಿಕಿತ್ಸೆ ಮಾಡಲಿ. ನಾನು ಪ್ರತಿದಿನವೂ ಠಾಕೂರರಿಗೆ ತುಳಸೀಪತ್ರ ನೀಡುತ್ತಿದ್ದೇನೆ.'' ನಿಜಕ್ಕೂ ಈ ಬಾರಿ ಲಲಿತನು ಆಯುರ್ವೇದ ವೈದ್ಯರ ಚಿಕಿತ್ಸೆಯಿಂದ ಗುಣಮುಖನಾದ.

ಕಲ್ಕತ್ತಗೆ ಹೊಸದಾಗಿ ಗ್ರಾಮ್‌ಫೋನ್ ಆಮದಾಗಿ ಬಂದಾಗ ಲಲಿತನು ಅದನ್ನು ತೆಗೆದುಕೊಂಡು ಬಂದು, ಕೆಲವು ಬಾರಿ ಶ್ರೀಮಾತೆಗೆ ಕೇಳಿಸಿದ. ಕೀರ್ತನೆಗಳನ್ನು ಹಾಡುತ್ತಿದ್ದ ಪನ್ನಾರಾಣಿಯ ಹಾಡುಗಳು ಶ್ರೀಮಾತೆಯವರಿಗೆ ತುಂಬ ಹಿಡಿಸಿದವು. ಶ್ರೀಮಾತೆಗೆ ಕೀರ್ತನೆಗಳು ಇಷ್ಟವಾದವೆಂದು ನಾನು ನಮ್ಮ ಸ್ನೇಹಿತ ಶ್ರೀಕಿರಣಚಂದ್ರ ದತ್ತನ ಮನೆಯಿಂದ ಗ್ರಾಮೋಫೋನ್ ತಂದು, ಕೆಲವು ದಿನ ಶ್ರೀಮಾತೆಗೆ ಮತ್ತೆ ಮತ್ತೆ ಕೀರ್ತನೆಗಳನ್ನು ಕೇಳಿಸಿದೆ.

(ಮುಂದುವರಿಯುವುದು)

---

೨. ಸ್ವಾಮಿ ವಿರಜಾನಂದರಿಗೆ. *(–ಸಂ)*

೩. ಆತ ಸ್ವಯಂ ಲೇಖಕನೇ. *(–ಅನು.)*



ನಿವೇದಿತಾ ಕಲಿಸುವಂತೆ ‘ರಾಷ್ಟ್ರೀಯ ಶಿಕ್ಷಣ’

ಆಂಗ್ಲ ಮೂಲ: **ಎಸ್.ಕೆ. ಚಕ್ರವರ್ತಿ**

ಸಂಗ್ರಹಾನುವಾದ: **ಡಾ. ಹೆಚ್. ಪಾಂಡುರಂಗ ವಿಠಲ**

ಭಾರತದ ನವೋತ್ಥಾನದ ಸಂದರ್ಭದಲ್ಲಿ ಆಧುನಿಕ ಶಿಕ್ಷಣದ ಬಲವಾದ ಗಾಳಿ ಬೀಸುತ್ತಿದ್ದಾಗ, ‘ಭಾರತೀಯ’ವಾದ ಶಿಕ್ಷಣ ಕ್ರಮವನ್ನು ಅಳವಡಿಸುವ ಅಗತ್ಯವನ್ನು ಒತ್ತಿ ಹೇಳಿದ ಮಹಾನ್ ಚಿಂತಕಿ ಸೋದರಿ ನಿವೇದಿತಾ. ಅವಳ ವಿಚಾರಗಳನ್ನು ಆಧುನಿಕ ಸಂದರ್ಭದಲ್ಲಿ ವಿಶ್ಲೇಷಿಸುವ ಲೇಖಕರು ತಮ್ಮ ‘Education in India’ ಗ್ರಂಥದಲ್ಲಿ ಒಂದು ಅಧ್ಯಾಯವನ್ನೇ ನಿವೇದಿತಾ ಶೈಕ್ಷಣಿಕ ವಿಚಾರಗಳಿಗಾಗಿ ಮೀಸಲಿಟ್ಟಿದ್ದಾರೆ. ಅದರ ಕನ್ನಡ ಅವತರಣಿಕೆ ಇಲ್ಲಿದೆ.

ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಕಟು ವಿಮರ್ಶಕರಾಗಿದ್ದ ಸ್ವಾಮಿ ವಿವೇಕಾನಂದರು ‘ವಿದ್ಯಾಭ್ಯಾಸವೆಂದರೆ ಮಾನವನಲ್ಲಿ ಈಗಾಗಲೇ ಸುಪ್ತವಾಗಿರುವ ಪರಿಪೂರ್ಣತೆಯನ್ನು ಹೊರತರುವುದು’ ಎಂದು ಹೇಳಿ, ಮಣ್ಣಿನಲ್ಲಿ ಗಿಡ ಬೆಳೆಯುವಂತೆ ಮಗು ತನಗೆ ತಾನೇ ಅರಿವನ್ನು ಮೂಡಿಸಿಕೊಳ್ಳುತ್ತದೆ ಎನ್ನುತ್ತಾರೆ. ಈ ಮಾತು ಅವರ ‘ಧರ್ಮವೆಂದರೆ ಮಾನವನಲ್ಲಿ ಈಗಾಗಲೇ ಸುಪ್ತವಾಗಿರುವ ದಿವ್ಯತೆಯನ್ನು ಹೊರತರುವುದು’ ಎನ್ನುವುದನ್ನು ಹೋಲುವುದು. ಕಾರಣ ಅವರ ಪ್ರಕಾರ ಧರ್ಮವೆಂದರೆ ಆತ್ಮಸಾಕ್ಷಾತ್ಕಾರವಾಗಿದ್ದು, ಶಿಕ್ಷಣ ಅದರ ಒಂದು ಭಾಗ, ಅಷ್ಟೇ. ‘ಪುರುಷಸಿಂಹರನ್ನಾಗಿಸುವ ವಿದ್ಯಾಭ್ಯಾಸ’ ಎಂದು ಅವರು ಶೀಲನಿರ್ಮಾಣದ ಅಗತ್ಯವನ್ನು ಒತ್ತಿ ಹೇಳುವರು. ‘‘ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸದ ಸಾರವೇ ಏಕಾಗ್ರತೆ, ಬರಿಯ ವಿಷಯ ಸಂಗ್ರಹವಲ್ಲ. ಏಕಾಗ್ರತೆಯ ಕರೆಗೆ ಪ್ರಕೃತಿ ಎಲ್ಲ ದ್ವಾರಗಳನ್ನೂ ತೆರೆದು ಜ್ಞಾನಪ್ರವಾಹವನ್ನು ಹೊರಗೆ ಬಿಟ್ಟುಬಿಡುವುದು’’ ಎಂಬ ಇನ್ನೊಂದು ಹೇಳಿಕೆ ಪುರಾತನ ಹಿಂದೂ ಯೋಗಿಗಳ ಈ ಆವಿಷ್ಕಾರವನ್ನು ಪುನಃ ನಮ್ಮ ಶಿಕ್ಷಣಕ್ರಮದಲ್ಲಿ ಬಳಕೆಗೆ ತರಬೇಕು ಎಂಬ ಅವರ ಬಯಕೆಯನ್ನು ಸೂಚಿಸುವುದು. ‘‘ಕೆಲವು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ಚೆನ್ನಾಗಿ ಉಪನ್ಯಾಸ ಮಾಡಲು ಬಂದುಬಿಟ್ಟರೆ ನಿಮ್ಮ ಪಾಲಿಗೆ ಒಬ್ಬ ಸುಶಿಕ್ಷಿತನಾದಂತಾಯಿತು! ಯಾವ ವಿದ್ಯೆಯ ನೆರವಿನಿಂದ ಇತರ ಸಾಧಾರಣ ಜನರನ್ನು ಜೀವನ ಸಂಗ್ರಾಮವನ್ನೆದುರಿಸಲು ಸಮರ್ಥರನ್ನಾಗಿ ಮಾಡುವುದಕ್ಕಾಗುವುದಿಲ್ಲವೋ, ಯಾವುದು ಮನುಷ್ಯನ ಒಳಗಿನಿಂದ ಚಾರಿತ್ರ್ಯಬಲ, ಪರಸೇವಾತತ್ಪರತೆ, ಸಿಂಹಸದೃಶ ಸಾಹಸ ಇವುಗಳನ್ನು ಹೊರತರಲು ನೆರವಾಗುವುದಿಲ್ಲವೋ ಅದು ವಿದ್ಯೆಯೇನು?’’ ಎನ್ನುವ ಸ್ವಾಮೀಜಿಗೆ ಶಿಕ್ಷಣವು ನಾವು ಬದುಕುವ ಮಾರ್ಗವನ್ನು ತೋರಿ, ಜೀವನದ ಸಮಸ್ಯೆಗಳನ್ನು ಎದುರಿಸಿ ಸ್ವಾವಲಂಬಿಯನ್ನಾಗಿಸಬೇಕು ಎಂಬ ಆಸೆ. ಇತರರ ಆಳ್ವಿಕೆಯಲ್ಲಿ, ಅನುಕರಣೆಯಲ್ಲಿ ಈ ಆದರ್ಶಗಳನ್ನು ಅನುಷ್ಠಾನಕ್ಕೆ ತರುವುದು ಕಷ್ಟವೆಂದೂ ಅವರಿಗೆ ಅನ್ನಿಸಿತ್ತು. ‘‘ನಮ್ಮ ಆದರ್ಶವೇನೆಂದರೆ, ಪಾರಮಾರ್ಥಿಕ ಮತ್ತು ಲೌಕಿಕ ಶಿಕ್ಷಣಗಳೆರಡೂ ನಮ್ಮ ಅಧೀನದಲ್ಲಿರಬೇಕು. ಅವು

ರಾಷ್ಟ್ರೀಯವಾಗಿರಬೇಕು, ಸಾಧ್ಯವಾದ ಮಟ್ಟಿಗೆ ರಾಷ್ಟ್ರೀಯ ಸ್ವರೂಪವನ್ನು ಪಡೆದಿರಬೇಕು. ಇದೊಂದು ವಿರಾಟ್ ಯೋಜನೆ ಯೇನೋ ಸರಿ. ಅದು ಎಂದಿಗಾದರೂ ಸಾಧ್ಯವಾದೀತೇನೋ ಎಂಬುದು ನನಗೆ ಗೊತ್ತಿಲ್ಲ. ಆದರೆ ನಾವು ಕೆಲಸವನ್ನು ಪ್ರಾರಂಭಿಸ ಬೇಕು.''

ಹೀಗೆ ಕೆಲಸವನ್ನು ಪ್ರಾರಂಭಿಸಿದ ಸ್ವಾಮೀಜಿಯ ಶಿಷ್ಯರಲ್ಲಿ ಸೋದರಿ ನಿವೇದಿತಾ ಅಗ್ರಮಾನ್ಯಳು. ಜನಜಾಗೃತಿಗೆ ಚಿಕ್ಕಮಕ್ಕಳ ಹಾಗೂ ಸ್ತ್ರೀಯರ ವಿದ್ಯಾಭ್ಯಾಸವೇ ಬುನಾದಿ ಎಂದು ಕಂಡು ಕೊಂಡ ಆಕೆ ಬಂದ ಕಷ್ಟಗಳನ್ನೆಲ್ಲ ಎದುರಿಸಿ ಕೊಲ್ಕತಾದಲ್ಲಿ ಶಾಲೆ ಯೊಂದನ್ನು ತೆರೆದಳು. ಆಕೆ ಹೆಣ್ಣುಮಕ್ಕಳ ಶಾಲೆಯನ್ನು ಆರಂ ಭಿಸಿದರೂ, ರಾಷ್ಟ್ರೀಯ ಶಿಕ್ಷಣ ಹೇಗಿರಬೇಕೆಂಬ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನು ಹೊಂದಿದ್ದಳು. ಆ ಬಗ್ಗೆ ಆಕೆ ಬರೆದ 'Hints on National Education' ಎಂಬ ಗ್ರಂಥದ ಪ್ರಬಂಧ, ಭಾಷಣಗಳಿಂದ ನಾವು ಅವಳ ಅನಿಸಿಕೆಗಳನ್ನು ತಿಳಿಯಬಹುದು. ರಾಷ್ಟ್ರೀಯ ಮನೋಭಾವ (National mind) ಎಂಬ ನುಡಿ ಗಟ್ಟು ನಿವೇದಿತಾಳದು.

ರಾಷ್ಟ್ರೀಯ ಶಿಕ್ಷಣದ ಬಗ್ಗೆ ನಿವೇದಿತಾ ಹೇಳುವ ಮಾತುಗಳಿವು: ''ಈ ಆಧುನಿಕ ಯುಗದಲ್ಲಿ ಇಡೀ ಸಮಾಜಕ್ಕೆ ಸಾಮಾನ್ಯವಾಗಿ ರುವ ವಿಶಿಷ್ಟ ಯೋಚನೆಗಳು, ಕಲ್ಪನೆಗಳ ಭಾಂಡಾರವೇ ಇದ್ದು, ಮುಂದೆ ತನ್ನ ಪ್ರೌಢ ಜೀವನವನ್ನು ದಕ್ಷತೆಯಿಂದ ನಡೆಸ ಬಯ ಸುವ ಪ್ರತಿ ವ್ಯಕ್ತಿಗೂ ಅವುಗಳನ್ನು ತಿಳಿಸಬೇಕಾದದ್ದು ಅತಿಮುಖ್ಯ.''

ಪ್ರತಿ ದೇಶಕ್ಕೂ ತನ್ನದೇ ಆದ ಸಾಮಾಜಿಕ ಗುಣವಿಶೇಷಗಳು ಇದ್ದು, ಭಾರತದ ನಾಗರಿಕತೆಯಿಂದ ಹುಟ್ಟಿದ ಯೋಚನೆಗಳ, ಕಲ್ಪನೆಗಳ ಭಾಂಡಾರವಾದ ಭಾರತೀಯ ಮನಸ್ಸಿನ ವಿಶಿಷ್ಟ ಎರಕವೇ ಈ ದೇಶದ ಶಿಕ್ಷಣದ ಬುನಾದಿ ಆಗಬೇಕೆಂದು ನಿವೇ ದಿತಾ ಹಾಗೂ ಅರವಿಂದರಂತಹ ಚಿಂತಕರು ಹೇಳುವರು. ಆದರೆ ಸ್ವಾತಂತ್ರ್ಯಾನಂತರದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಳೀಯ ವಾದದ್ದನ್ನು ಕೀಳು ಮಾಡುವುದೇ ಮುಖ್ಯವಾಗಿ, ನಮ್ಮ ಬುದ್ಧಿ ಜೀವಿಗಳು ವಿದೇಶೀ ಚಿಂತನೆಗಳನ್ನು ವಿಧೇಯರಾಗಿ ಒಪ್ಪಿ ಕೊಂಡರು. ನಮ್ಮ ಹಳತು ಬಂಧನ, ಜಾಗತಿಕವಾದದ್ದು ಸ್ವಾತಂತ್ರ್ಯ. ನಮ್ಮದನ್ನು ದ್ವೇಷಿಸುವುದೇ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆವ ಮಾರ್ಗ. ಸ್ವಂತ ಸಂಸ್ಕೃತಿಯನ್ನು ದ್ವೇಷಿಸುವ, ಆತ್ಮಗೌರವವಿಲ್ಲದ ದೇಶದವರನ್ನು ಇತರ ದೇಶಗಳವರು ಗೌರವಿಸರು ಎಂಬುದನ್ನು ಮರೆಯುವ ಮಾರ್ಗ ಇದು. ಅಂಗ್ಲ ಮಾಧ್ಯಮಗಳ ಎಳೆಯರನ್ನು ನೋಡಿದರೆ ಇಂತಹ 'ಸಾಂಸ್ಕೃತಿಕ ನಿರ್ಜಲೀಕರಣ'ಕ್ಕೆ ಹೇಗೆ ಅವರ ಮನಸ್ಸು ಒಳಗಾಗಿದೆ ಎಂದು ತಿಳಿಯುತ್ತದೆ. ಹಣಗಳಿಕೆ, ಜೀವನೋಪಾಯಗಳೇ ಗುರಿಯಾಗಿರುವ ಶಿಕ್ಷಣವೇ ಅವರ ದ್ರೋಹಕ್ಕೆ ಕಾರಣ. ವಿದೇಶೀಯಳಾದ ಸೋದರಿ ನಿವೇದಿತಾ ಅಗಾಧವಾದ ರಚನೆಗಳನ್ನುಳ್ಳ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ತನ್ನ ಪ್ರಾಣವನ್ನೇ ಮುಡಿಪಾಗಿಟ್ಟುದು ಈ ಬಗ್ಗೆ ಏನನ್ನೂ ತಿಳಿಯಲು ಪ್ರಯತ್ನವನ್ನೇ ಪಡದ ಈ ಎಳೆಯರಿಗೆ ಹೇಗೆ ತಾನೇ ಅರ್ಥವಾದೀತು? ನಿವೇದಿತಾ ಹೇಳುವ 'ಇಡೀ ಸಮಾಜಕ್ಕೆ ಸಾಮಾನ್ಯವಾಗಿರುವ ವಿಶಿಷ್ಟ ಯೋಚನೆ, ಕಲ್ಪನೆಗಳ ಭಾಂಡಾರ', ಅರವಿಂದರು ತಿಳಿಸುವ 'ಪಿತ್ರಾರ್ಜಿತ ಧಾರಣ ಸಾಮರ್ಥ್ಯ', ಅವರ ಶಿಷ್ಯೆ ತಾಯಿಯವರು 'ಭಾರತವು ವಿಶ್ವದ ಜೀವಂತ ಆತ್ಮ, ಭಾರತವೇ ವಿಶ್ವದ ಗುರು' ಎಂದುದು ಭಾರ ತೀಯ ಶಿಕ್ಷಣದ ಬುನಾದಿ ಏನಿರಬೇಕೆಂಬುದನ್ನು ಸೂಚಿಸುತ್ತದೆ. ಭಾರತೀಯನಾಗಿ ಹುಟ್ಟಿ, ಶ್ರದ್ಧೆಯಿಂದ ಈ ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯವನ್ನು ಪಡೆದು, ವಿನೀತನಾಗಿ ಋಷಿಋಣ ವನ್ನು ತೀರಿಸಲು ಸಾಧನೆ ಮಾಡುವುದೇ ಅಂತಹ ಶಿಕ್ಷಣದ ಪರಮೋದ್ದೇಶ. ನಿವೇದಿತಾ ಇದನ್ನು ಹೀಗೆ ಹೇಳುತ್ತಾಳೆ: ''ತಮ್ಮ ತಮ್ಮ ಸಮಸ್ಯೆಗಳನ್ನು ಎದುರಿಸಲು ರಾಷ್ಟ್ರೀಯ ಮನೋಭಾವ ವನ್ನು ಹೇಗೆ ತರಬೇಕೆನ್ನುವುದನ್ನು ಜರ್ಮನಿ ಹಾಗೂ ಅಮೆರಿಕಾ ಬಲ್ಲುದು. ಅಂದರೆ, ಅವರು ಸಾಮಾನ್ಯ, ಜನಪ್ರಿಯ ಮನೋ ಭಾವವನ್ನು ಸಂಘಟಿಸಿ, ಈ ಸಂಘಟಿತ ಮನಸ್ಸಿಗೆ... ತಂತಮ್ಮ ದೇಶದ ಅಭ್ಯುದಯ ಮತ್ತು ಸುಸ್ಥಿತಿಯನ್ನು ಸಾಧಿಸುವ ಜಟಿಲ ಸಮಸ್ಯೆಯನ್ನು ನೀಡುವರು.''

ಈಚಿನ ಭಾರತದಲ್ಲಿ ಇದಕ್ಕೆ ವಿರುದ್ಧವಾದುದನ್ನೇ ಕಾಣ ಬಹುದು. ವಿದೇಶೀ ಸಿದ್ಧಾಂತಗಳು, ವೋಟ್ ಆಧರಿತ ವಿಘಟನೆ, ಕೃತಕ ಜೀವನದ ಮೋಹಕತೆ, ಕೀಳು ಆರ್ಥಿಕ ನಿರ್ವಹಣೆ, ಕೆಳ ಹಂತದ ಬಡವರು ಜೀವನವನ್ನು ನೋಡುವ ಬಗೆಗೆ ಗಮನವನ್ನೇ ನೀಡದಿರುವುದು – ಈ ಶಕ್ತಿಗಳೆಲ್ಲ ರಾಷ್ಟ್ರೀಯ ಮನೋಭಾವವು ಹರಳುಗಟ್ಟದಂತೆ ಮಾಡುತ್ತಿದೆ. ಇದಕ್ಕೆ ಸ್ವಲ್ಪ ಪ್ರಯತ್ನ ನಡೆಸಿ ದರೂ, 'ಜಾಗತಿಕ ಮನೋಭಾವ, ಧರ್ಮನಿರಪೇಕ್ಷ ಮನಸ್ಸು, ಪ್ರಗತಿಶೀಲ ಮನಸ್ಸು'ಗಳಿಗೆ ವಿರುದ್ಧ ಎಂದು ಖಂಡಿಸಲಾಗುತ್ತದೆ. ಈ ರೀತಿಯ ಜಾಗತಿಕ ಮನೋಭಾವದ ಪ್ರತಿಪಾದಕರು ತಮ್ಮ ಮನಸ್ಸನ್ನು ಪ್ರಭಾವಗೊಳಿಸಿರುವ ವಿದೇಶೀ ಶಕ್ತಿಗಳು ತಂತಮ್ಮ ರಾಷ್ಟ್ರೀಯ ಮನೋಭಾವದ ಬಲದಿಂದಲೇ ಹಾಗೆ ಮಾಡುತ್ತಿವೆ ಎಂಬುದನ್ನು ತಿಳಿಯಲಾರರು.

ಆದರೆ ಇಂತಹ ಸಾಮಾನ್ಯ ರಾಷ್ಟ್ರೀಯ ಮನೋಭಾವದ ಆಧಾರವಿಲ್ಲದೆ ಸಮಾಜವನ್ನು ಒಟ್ಟುಗೂಡಿಸಿ ಅಭಿವೃದ್ಧಿ ಸಾಧಿ ಸಲು ಆಗದು. ಭಾರತವನ್ನು ದುರ್ಬಲಗೊಳಿಸಲು ಬ್ರಿಟಿಷ ರಂತೆಯೇ ತಮ್ಮ ಸ್ವಂತ ಲಾಭಕ್ಕಾಗಿ ನಮ್ಮದೇ ಆದ ರಾಜಕೀಯ ಮತ್ತು ವೈಚಾರಿಕ ಶಕ್ತಿಗಳು ಪ್ರಜ್ಞಾಪೂರ್ವಕವಾಗಿ ವಿಘಟನೆ ಗಳನ್ನು ಹುಟ್ಟುಹಾಕುತ್ತಿವೆ; ಇದರ ಫಲವಾಗಿ ಸೃಷ್ಟಿಯಾದ ಸಮಸ್ಯೆಗಳಿಂದ ಅವು ಅಭಿವೃದ್ಧಿ ಹೊಂದುತ್ತಿವೆ. ಸಾಂಪ್ರದಾಯಿಕ ಭಾರತೀಯ ಸಮಾಜವು ಹೊರ ತೋರಿಕೆಯಲ್ಲಿ ಸಾಮಾಜಿಕ ವೈವಿಧ್ಯತೆ ಹೊಂದಿದ್ದರೂ, ಸನಾತನ ಸಂಸ್ಕೃತಿಯ ಅಂತರ್ಗತ ವಾದ ರಚನೆ ನಾಶವಾಗಿಲ್ಲ. ಕಾರಣ ನಮ್ಮ ಋಷಿಗಳು ತಮ್ಮದೇ ಮಾದರಿಯ ರಾಷ್ಟ್ರೀಯ ಮನೋಭಾವವನ್ನು ಸೃಷ್ಟಿಸಿರುವರು.

ನಮ್ಮಲ್ಲಿ ಅಂತರ್ಗತವಾದ ಈ ರಾಷ್ಟ್ರೀಯ ಮನೋಭಾವವನ್ನು ಸೂಚಿಸುವ ಮಂತ್ರವನ್ನು ಗುರುವು ಶಿಷ್ಯರಿಗೆ ಪ್ರತಿಜ್ಞಾಬೋಧನೆಗಾಗಿ ಬಳಸುವನು: '**ಸಮಾನೋ ಮಂತ್ರ ಸಮಿತಿಃ ಸಮಾನೀ ಸಮಾನಂ ಮನಃ ಸಹ ಚಿತ್ತಮೇಷಾಂ। ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥**' *(ಋಗ್ವೇದ, ೧೦.೧೯೧)* 'ನಿಮ್ಮ ಧ್ಯೇಯವು ಸಮಾನವಾಗಿರಲಿ; ನಿಮ್ಮ ಸಭೆಯು ಸಮಾನವಾಗಿರಲಿ; ನಿಮ್ಮೆಲ್ಲರ ವಿಚಾರಗಳು ಮತ್ತು ಮನಸ್ಸುಗಳು ಸಮಾನವಾಗಿದ್ದು, ಒಟ್ಟಾಗಿರಲಿ; ನಿಮ್ಮ ಮುಂದೆ ನಾನು ಸಮಾನವಾಗಿರುವ ಉದ್ದೇಶವನ್ನು ಇಡುತ್ತಿರುವೆನು; ನಿಮ್ಮ ಗುರಿಯಿಂದ ಮತ್ತು ನಿಮ್ಮ ಹೃದಯಗಳನ್ನು ಒಟ್ಟು ಮಾಡಿ ಪೂಜಿಸಿ; ನೀವೆಲ್ಲ ಜೊತೆಯಾಗಿ ಸಂತೋಷದಿಂದ ಜೀವಿಸುವಂತೆ ನಿಮ್ಮ ಮನಸ್ಸುಗಳು ಒಂದಾಗಿರಲಿ.') ಇಂತಹ ಪ್ರತಿಜ್ಞೆಯಲ್ಲಿ ಯಾವ ಧರ್ಮಯುದ್ಧ, ಇತರರ ಮೇಲೆ ಆಕ್ರಮಣ ಅಥವಾ ಜಿಹಾದ್‌ಗೆ ಕರೆ ನೀಡಿಲ್ಲ – ಭಾರತದ ಇತಿಹಾಸವೇ ಅದಕ್ಕೆ ಸಾಕ್ಷಿ. ಇಲ್ಲಿನ ಸಾಮಾನ್ಯ ಉದ್ದೇಶ ಎಲ್ಲರ, ಎಲ್ಲದರ ಆನಂದ– '**ಸರ್ವೇ ಭವಂತು ಸುಖಿನಃ ।**' ಇದಕ್ಕೆ ವ್ಯಕ್ತಿಗತ ಅಥವಾ ರಾಷ್ಟ್ರೀಯ ಅಹಂಕಾರ ಅಥವಾ ತನ್ನನ್ನು ಮುಂದು ಮಾಡಿಕೊಳ್ಳುವ ಆಗ್ರಹ ಇಲ್ಲ. ನಿವೇದಿತಾ ಇಂತಹ ರಾಷ್ಟ್ರೀಯ ಮನೋಭಾವದಲ್ಲಿ ಇರುವ ವಿಶ್ವಾತ್ಮಕತೆಯನ್ನು ಗುರುತಿಸಿದಳು. ಆದರೆ ಆಕೆ ಈ ರಾಷ್ಟ್ರೀಯ ಮನೋಭಾವದ ಸಮಾನ ಮನಸ್ಸು ಶಕ್ತ, ಸಮರ್ಥವಾಗಲು ನಾಗರಿಕ ಆದರ್ಶಗಳು ಮತ್ತು ಜವಾಬ್ದಾರಿಯನ್ನೂ ಮೈಗೂಡಿಸಿಕೊಳ್ಳಬೇಕೆಂದು ಆಶಿಸಿದ್ದಳು. ಆದರೆ ಇಂತಹ ಪುನುರುಜ್ಜೀವನದಲ್ಲಿ ಅದರ ವಿಶ್ವಾತ್ಮಕತೆ, ಅನನ್ಯತೆಗಳು ಕಳೆದುಹೋಗಬಾರದಷ್ಟೇ.

ಸರಿ, ಈ ಬದಲಾವಣೆಗಳನ್ನು ತರುವವರಾರು? ಎಳೆಯರ ಹಾಗೂ ಪ್ರೌಢರ ಮನಸ್ಸನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಗೊಳಿಸಲು ಶಕ್ತವಾದ ಸಮೂಹ ಮಾಧ್ಯಮಗಳು, ಸರಕಾರ ಮತ್ತು ಖಾಸಗಿ ಸಂಸ್ಥೆಗಳು ಹೊರಟು ನಿಂತ ಅಭಿವೃದ್ಧಿಯ ಬಂಡಿಯಲ್ಲಿ ಕಾಲೂರಲು ಜಾಗ ಹುಡುಕುವಂತೆ ನಮ್ಮನ್ನು ಒತ್ತಾಯಪಡಿಸುತ್ತಿವೆ. ಇಂತಹ ಸನ್ನಿವೇಶವನ್ನು ನಿವೇದಿತಾ ಮೊದಲೇ ಊಹಿಸಿದ್ದಳು. ಸಾಮಾನ್ಯ ರಾಷ್ಟ್ರೀಯ ಮನೋಭಾವವನ್ನು ತಮ್ಮಲ್ಲಿ, ಮಕ್ಕಳಲ್ಲಿ ಬೆಳೆಸುವ ಜವಾಬ್ದಾರಿಯನ್ನು ತಂದೆತಾಯಂದಿರು ವಹಿಸಬೇಕು. 'ಮನೆ ಗೆದ್ದು ಮಾರು ಗೆಲ್ಲು' ಎಂದಂತೆ. ಶಿಕ್ಷಣದ ಪರಿಣಾಮಕಾರಿ ತತ್ತ್ವವನ್ನು ವಿವರಿಸುವಾಗ ಆಕೆ ಮುಖ್ಯವಾದ ಎರಡು ಅಂಶಗಳನ್ನು ಹೇಳುತ್ತಾಳೆ:

೧) ''ಬಹುಸಂಖ್ಯೆಯ ಜನರನ್ನು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ವಿಮೋಚನೆಗೊಳಿಸಲು ಪರಿಚಿತ ಆದರ್ಶಗಳು ಮತ್ತು ರೂಪಗಳನ್ನು ಅವರೆದುರು ಇಡಬೇಕು. ರಾಷ್ಟ್ರೀಯ ಶಿಕ್ಷಣವು ಪರಿಚಿತ ಮೂಲಭೂತ ವಿಚಾರಗಳನ್ನು ಒಳಗೊಂಡಿರಬೇಕು. ಪ್ರಸ್ತುತಪಡಿಸುವ ಆದರ್ಶಗಳನ್ನು ಪ್ರಾಚೀನವಾದದ್ದರ ಉಡುಪಿನೊಳಗೆ ಸೇರಿಸಬೇಕು. ನಮ್ಮ ಕಲ್ಪನೆಗಳು ನಮ್ಮದೇ ಆದ ವೀರ ಸಾಹಿತ್ಯದ ಮೇಲೆ ರಚಿತವಾಗಬೇಕು. ನಮ್ಮ ಇತಿಹಾಸದ ಹಾಸು ಹೊಕ್ಕಿನಿಂದ ನಮ್ಮ ಭರವಸೆಯನ್ನು ನೆಯ್ದಿರಬೇಕು.'' ವಿಶ್ವದ ವಿದ್ಯಾವಂತರೆಲ್ಲ ಸೇರಿ ಚರ್ಚಿಸುವ ವೇದಿಕೆಯೊಂದು ರಚಿತವಾಗಬೇಕು. ಆದರೆ ಅಂತಹ ಬೌದ್ಧಿಕ ಸ್ವಾತಂತ್ರ್ಯ ತಾಯಿ ಮತ್ತು ತಾಯ್ನಾಡಿನ ಪ್ರೇಮವನ್ನು ಆಧರಿಸಿದ್ದರೆ ಮಾತ್ರ ಸಾಧ್ಯ ಎಂಬುದು ಅವಳ ಅನಿಸಿಕೆ. ಶಿಕ್ಷಣದ ಇಂತಹ ಆದರ್ಶಗಳು ಬ್ರಿಟಿಷರ ವಸಾಹತುವಿಗೆ ಸರಿ, ಈ ಆಧುನಿಕ ಕಾಲಕ್ಕೆ ಹೊಂದದು ಎಂದು ವಾದಿಸಬಹುದು. ಆದರೆ ಈಗಿನ ಶಿಕ್ಷಣದ ಅವಸ್ಥೆ ಹೇಗಿದೆ? ಸ್ವಲ್ಪವೂ ಪರಿಚಿತವಲ್ಲದ್ದನ್ನು ಎಳೆಯ ಮನಸ್ಸುಗಳಿಗೆ ಕಲಿಸಲಾಗುತ್ತಿದೆ. ನಮ್ಮ ಹಿಂದಿನದೆಲ್ಲ ವ್ಯರ್ಥ; ನಮ್ಮ ಚರಿತ್ರೆ ಎಂಬುದು ಇಲ್ಲ; ನಮ್ಮ ಮಹಾಕಾವ್ಯಗಳು ಬರೀ ಹಿಂಸೆ, ಮೋಸ, ಉತ್ಪ್ರೇಕ್ಷೆಗಳ ಮೂಟೆಗಳು; ವೇದಕಾಲೀನ ಹಿಂದುತ್ವ ಎಂದರೆ ಜಗಳಗಂಟಿ ದೇಶಭಕ್ತಿ. ಇಂತಹ ಖಾಲಿ ಪ್ರತಿಷ್ಠೆಗಳನ್ನು ಬಯಲಿಗೆಳೆಯುವುದು ಪ್ರಗತಿಶೀಲತೆ. ತಾಯ್ನಾಡಿನ ಪ್ರೇಮವನ್ನು ತ್ಯಜಿಸಿ ಜಾಗತಿಕ ಪ್ರೇಮವನ್ನು ರೂಢಿಸಿಕೊಳ್ಳುವುದು ವಿಮೋಚನೆ. ರಾಷ್ಟ್ರೀಯ ಮನಸ್ಸನ್ನು ಗುರುತಿಸಿ, ಅದಕ್ಕೆ ವಿರೋಧ ಎದುರಾದಾಗ ಶಿಕ್ಷಕರೂ ವಿದ್ಯಾರ್ಥಿಗಳೂ ಪ್ರತಿರೋಧ ತೋರಿದಾಗ ಮಾತ್ರ ಭಾರತ ತನ್ನ ಗತವೈಭವವನ್ನು ಮರಳಿ ಪಡೆಯುವುದು.

ಸಮಂಜಸವಾದ ಉದಾಹರಣೆಯೊಂದನ್ನು ನಿವೇದಿತಾ ನೀಡುತ್ತಾಳೆ: ಪಾಶ್ಚಾತ್ಯರಲ್ಲಿ ಆದರ್ಶ ನಾರಿ ಲಗ್ನವಾಗಲು ಒಪ್ಪಿಕೊಂಡ ಕನ್ಯೆ; ನಮ್ಮಲ್ಲಿ ಪತಿವ್ರತೆಯಾದ ಹೆಂಡತಿ. ಭಾರತದ ಮಕ್ಕಳಿಗೆ ಪಾಶ್ಚಾತ್ಯ ಕಲ್ಪನೆ ಅರ್ಥವಾಗದು. ನಿಜ ಶಿಕ್ಷಣದಲ್ಲಿ ಪಾಶ್ಚಾತ್ಯ ಸಂಸ್ಕೃತಿಗೆ ಎಡೆ ಇಲ್ಲ. ಇದೇ ತಪ್ಪು ಶಿಕ್ಷಣ ಪಡೆದ ಭಾರತದ ಬುದ್ಧಿಜೀವಿಗಳನ್ನು ದಾರಿಗೆಡಿಸುತ್ತಿರುವುದು. ನಿವೇದಿತಾ ಎನ್ನುವಂತೆ ಭಾರತದ ಮಗುವಿಗೆ ಯುಧಿಷ್ಠಿರನ ಸತ್ಯನಿಷ್ಠೆಯನ್ನು ಕಲಿಸುವುದು ಸೂಕ್ತವೇ ಹೊರತು ವಾಷಿಂಗ್‌ಟನ್ನನದ್ದಲ್ಲ. ಆದರೆ ನಮ್ಮ ವಿಮೋಚಿತ ಶಿಕ್ಷಣತಜ್ಞರು ಯುಧಿಷ್ಠಿರ ಸುಳ್ಳುಗಾರನೆನ್ನುತ್ತಾರಲ್ಲ! ವಿದೇಶೀ ಮಗು ಇಲಿಯಡ್ ಒಡಿಸ್ಸಿಗಳಿಂದ ಆರಂಭಿಸಿ ವಾಟರ್ಲೂ ವಿಜಯ ಮುಂತಾಗಿ ಕಲಿತರೆ, ಭಾರತದ ಮಗುವಿಗೆ ಹಿಂಸೆಯ ಕತೆಗಳನ್ನುಳ್ಳ ಭಗವದ್ಗೀತೆ, ರಾಮಾಯಣ ಮಹಾಭಾರತಗಳಿಂದ ದೂರವಿರಬೇಕು ಎಂದು ಕಲಿಸುತ್ತಾರೆ.

೨) 'ನಾವು ಮಾನವನಿಗೆ ಭಾವನೆಗಳು ಮತ್ತು ಆಯ್ಕೆಗಳಲ್ಲಿ ತರಬೇತಿ ನೀಡದಿದ್ದರೆ, ಅವನು ಬಳಸಬಹುದಾದ ಕೆಲವು ಬೌದ್ಧಿಕ ಕಸರತ್ತುಗಳನ್ನು ಕಲಿತು ಹೊರಬೀಳುತ್ತಾನೆ. ಇವುಗಳಿಂದ ಆತ ಅನ್ನ ಸಂಪಾದಿಸಿಕೊಳ್ಳಬಲ್ಲ. ತನ್ನ ಜೀವವನ್ನೇ ಬಲಿಕೊಡಲು ಅಥವಾ ಹೃದಯವನ್ನು ತಟ್ಟಲು ಅವನಿಗೆ ಅಸಾಧ್ಯ.'

ಈ ಚಿತ್ರ ನಮ್ಮ ವೃತ್ತಿನಿರತರಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಇಂದಿನ ಪರಿಸ್ಥಿತಿಯನ್ನು ಹೇಗೆ ಆಗಲೇ ನಿವೇದಿತಾ ಮನಗಂಡಿದ್ದಳು! ಈ ಅವನತಿಯ ಬಗ್ಗೆ ಹೀಗೆನ್ನುತ್ತಾಳೆ: ''ಭಾವನೆಗಳ

ತರಬೇತಿಗಿಂತ ಹೆಚ್ಚಿನದು ಇಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿನ ಯಾವುದೇ ಒಂದು ಅಂಶಕ್ಕಿಂತ... ಉದಾತ್ತವಾಗಿ ಭಾವಿಸುವುದು ಮತ್ತು ಪ್ರಾಮಾಣಿಕವಾಗಿ, ಉನ್ನತವಾಗಿ ಆಯ್ಕೆಮಾಡುವುದು ಸಾವಿರ ಪಾಲು ಮುಖ್ಯ.'' ಆಯ್ಕೆ ಹೃದಯಕ್ಕೆ ಸಂಬಂಧಿಸಿದುದು. 'ಭಾವನೆ ಮುಖ್ಯವಾಗಿ ಸ್ಥಳೀಯತೆಗೆ ಸಂಬಂಧಿಸಿದುದು. ಪ್ರತಿಯೊಬ್ಬನ ಹೃದಯದಲ್ಲಿ ಅವನ ಸ್ವದೇಶವಿದೆ.' ಹೀಗೆ ನಿವೇದಿತಾಳ ಶಿಕ್ಷಣದ ತತ್ತ್ವ ಸ್ಥಳೀಯ ಪ್ರತಿಮೆಗಳು, ಪಾತ್ರಗಳು ಮತ್ತು ಪ್ರಕ್ರಿಯೆಗಳ ಮೂಲಕ ಸಾಧಿತವಾದ ಪರಿಶುದ್ಧ, ಉದಾತ್ತ ಭಾವನೆಗಳ ಮಿಶ್ರಣ. ಅರವಿಂದರೂ ಸಹ ''ಮಾನವನ ಅರ್ಥಿಕತೆ, ಬುದ್ಧಿಯ ಸ್ವಭಾವ ನೈತಿಕತೆಯ ಮೇಲೆ ನಿಂತಿದೆ. ನೈತಿಕವಾಗಿ, ಭಾವನಾತ್ಮಕವಾಗಿ ಸಂಪೂರ್ಣತೆ ಪಡೆಯದೆ ಅದರಿಂದ ವಿಚ್ಛೇದಿತವಾಗಿ ಬೌದ್ಧಿಕ ತರಬೇತಿಯಾಗಿ ನಿಲ್ಲುವ ಶಿಕ್ಷಣ ಮಾನವ ಅಭ್ಯುದಯಕ್ಕೆ ಹಾನಿಕರ... ಹೃದಯವೆಂದರೆ ಬುದ್ಧಿಯಲ್ಲ, ಬುದ್ಧಿಗೆ ಮಾತ್ರ ಬೋಧಿಸುವುದು ಹೃದಯವನ್ನು ಸುಧಾರಿಸಬೇಕೆಂದೇನೂ ಇಲ್ಲ'' ಎನ್ನುತ್ತಾರೆ. ನಿವೇದಿತಾಳ 'ಉದಾತ್ತವಾಗಿ ಭಾವಿಸುವ' ಸಂಸ್ಕೃತಿಯನ್ನು ಮೆಚ್ಚುವ ರವೀಂದ್ರನಾಥ ಠಾಕೂರರು ಇತರ ಪ್ರಾಣಿಗಳಿಗಿಂತಲೂ ಆಳವಾಗಿ ಮಾನವನು ತನ್ನ ವ್ಯಕ್ತಿತ್ವವನ್ನು ಪರಿಭಾವಿಸುತ್ತಾನೆ ಎನ್ನುತ್ತಾರೆ. ''ಜ್ಞಾನದಿಂದ ನಾವು ಶಕ್ತಿಯನ್ನು ಹೊಂದಬಹುದು ಆದರೆ ನಮಗೆ ಪೂರ್ಣತೆ ಬರುವುದು ಸಹಾನುಭೂತಿಯಿಂದ. ನಮಗೆ ಬರಿ ಮಾಹಿತಿಯನ್ನು ನೀಡುವುದು ಉನ್ನತವಾದ ವಿದ್ಯೆಯಲ್ಲ; ಅದು ನಮ್ಮ ಜೀವನ ಇತರ ಎಲ್ಲ ಅಸ್ತಿತ್ವದ ಜೊತೆ ಸಾಮರಸ್ಯ ಹೊಂದುವಂತೆ ಮಾಡುವುದು'' ಎಂಬುದು ಅವರ ಅಭಿಪ್ರಾಯ. ಈ ಸಹಾನುಭೂತಿ, ಸಾಮರಸ್ಯಗಳು ಘರ್ಷಣೆ, ಶೋಷಣೆಗಳನ್ನು ಕಡಿಮೆ ಮಾಡುವ ಮಾನವ ಹೃದಯದ ಉದಾತ್ತ ಭಾವನೆಗಳು. ವ್ಯಕ್ತಿತ್ವದ ಬೆಳವಣಿಗೆ ಎಂದರೆ ಮಾನವ ಜೀವನವನ್ನು ಎಳೆದೊಯ್ಯುವುದು ಆಸೆಯಾಗದೆ, ಉದ್ದೇಶವಾಗುವ ನೈತಿಕ ಜೀವನದತ್ತ ಹೋಗುವುದು; ಹೀನ ಭಾವನೆಗಳಿಗಿಂತ ಅಪೇಕ್ಷಣೀಯ ಭಾವನೆಗಳನ್ನು ಬೆಳೆಸಿಕೊಳ್ಳುವುದು. ಮಾಹಿತಿಯ ಸಂಗ್ರಹವೇ ಜ್ಞಾನವೆನ್ನಿಸಿಕೊಳ್ಳುತ್ತಿರುವ ಈ ಕಾಲದಲ್ಲಿ ನಮ್ಮ ಭಾವನಾತ್ಮಕ ದಿಕ್ಸೂಚಿಯನ್ನು ನಾವು ಕಳೆದುಕೊಂಡು, ಸಾಧನೆಯ ಉದ್ದೇಶವಿರುವ ನೈತಿಕ ಜೀವನಕ್ಕೆ ಮುಖ ತಿರುಗಿಸಿದ್ದೇವೆ. ನಿವೇದಿತಾ ಇಚ್ಛೆಯನ್ನು ಭಾವನೆಯ ಸಂವಾದಿ ಪದವನ್ನಾಗಿ ಬಳಸುತ್ತಾಳೆ: ''ಇಚ್ಛೆಯನ್ನು ಉದಾತ್ತಗೊಳಿಸಿದರಷ್ಟೇ ಸಾಲದು; ಅದನ್ನು ನೈಜ ವಿದ್ಯಾಭ್ಯಾಸದ ಆದರ್ಶವನ್ನು ಸಾಧಿಸಲು ಪರಿಣಾಮಕಾರಿಯನ್ನಾಗಿಸಬೇಕು... ಘನತೆಯಿಲ್ಲದ ದಕ್ಷತೆ ನಿರುಪಯುಕ್ತವಷ್ಟೇ ಅಲ್ಲ, ವಿನಾಶಕರ. ದಕ್ಷತೆ ಇಲ್ಲದ ಘನತೆ ಎಷ್ಟೋ ಮೇಲು.''

ಈ ಉದಾತ್ತ ಇಚ್ಛೆ ನಮ್ಮ ವ್ಯಕ್ತಿತ್ವದಲ್ಲಿ ಸೇರಿಹೋಗಲು ಕೃತಜ್ಞತೆ ಎಂಬ ಉಚ್ಚ ಭಾವನೆ ಸಹಕಾರಿ. ನಮ್ಮ ಬಲಿದಾನಕ್ಕೂ ಎಡೆಕೊಡುವಷ್ಟು, ಬಹುಜನರನ್ನು ಉದ್ದೀಪಿಸುವಷ್ಟು ದೇಶಭಕ್ತಿ ನಮ್ಮನ್ನು ತುಂಬಿಕೊಳ್ಳಲು ಪ್ರಯತ್ನಪೂರ್ವಕ ಇಚ್ಛೆ ಆವಶ್ಯಕ. ಮೇಲುಮೇಲಿನ ಉದಾತ್ತ ಭಾವನೆಗಳು ಕೆಲಸಕ್ಕೆ ಬಾರದವು; ಪ್ರಜ್ಞಾಪೂರ್ವಕ ಇಚ್ಛೆ ಮಾತ್ರ ಅವನ್ನು ಕ್ರಿಯಾಶೀಲವಾಗುವಂತೆ ಮಾಡಬಲ್ಲುದು. ಇದನ್ನೇ ಅರವಿಂದರು ತಪಸ್ಸು, ಶಕ್ತಿ ಎನ್ನುವರು. ನಿವೇದಿತಾ ಇಚ್ಛೆಯನ್ನು ಭಾವನೆಗಳ ಕಾವಲುಬುರುಜು ಎಂದು ಭಾವಿಸುತ್ತಾಳೆ. ಹೃದಯದ ಗುಣ ಇದು, ತಲೆಯದಲ್ಲ. ಅವಳ ಪ್ರಕಾರ ನೈಜ ಶಿಕ್ಷಣದಲ್ಲಿ ದಕ್ಷತೆಯ ಮೂಲವಾದ ತಲೆಗೆ ಎರಡನೆಯ ಸ್ಥಾನವಿದೆಯಷ್ಟೇ. ಇಚ್ಛೆಯು ಷಡ್‌ರಿಪುಗಳನ್ನು ಎದುರಿಸಲು, ಕೀಳು ಭಾವನೆಗಳನ್ನು ನಿಯಂತ್ರಿಸಲು ಮತ್ತು ಕಡಿಮೆ ಮಾಡಲು ಅತ್ಯವಶ್ಯ.

ನಿವೇದಿತಾ ಹೇಳುವಂತೆ, ''ಶಿಕ್ಷಣದಲ್ಲಿ ವಿಧಾನಕ್ಕಿಂತ ಅದರ ಹಿಂದಿರುವ ಮನಸ್ಸನ್ನು ಮೊದಲು ರೂಪಿಸಬೇಕೆಂದು ಹಿಂದುವು ತಿಳಿದಿದ್ದು ಭಾರತೀಯ ಸಂಸ್ಕೃತಿಯ ಅದೃಷ್ಟ... ನೇರವಾಗಿ ಮನಸ್ಸನ್ನು ಏಕಾಗ್ರತೆ ಹೊಂದುವಂತೆ ತರಬೇತಿಗೊಳಿಸುವ ಬ್ರಾಹ್ಮಣ ವಿಧಾನ ಇರುವ ತನಕ ಭಾರತೀಯರು ಬದಲಾಗುವ ಯುಗಗಳ ತೊಂದರೆಗಳನ್ನು ಎದುರಿಸುವಲ್ಲಿ ಸಮರ್ಥರು... ಮನಸ್ಸನ್ನೆ ಸಂಸ್ಕರಿಸಿ, ಅಭಿವೃದ್ಧಿಪಡಿಸುವುದನ್ನು ನಮ್ಮ ಹಿರಿಯರು ಎಂದೂ ಉದಾಸೀನ ಮಾಡಲಿಲ್ಲ. ಮನಸ್ಸನ್ನು ನಿಯಂತ್ರಿಸುವ ಮತ್ತು ಅದೇ ಸ್ವನಿರ್ದೇಶ ಹೊಂದುವ ಈ ರಾಷ್ಟ್ರೀಯ ಪ್ರಯತ್ನದ ಚರಿತ್ರೆಯಲ್ಲಿ ಉದ್ಭವವಾದ ಮಹಾತ್ಮರು ಕೇವಲ ಕೆಲವು ಪ್ರಾಸಂಗಿಕ ಘಟನೆಗಳಷ್ಟೇ.'' ಇಂತಹ ಸ್ಪಷ್ಟ ಭಾವನಾತ್ಮಕ ಸ್ಪಷ್ಟೀಕರಣ ನಮಗೆ ಭಾರತೀಯ ಸಂಪ್ರದಾಯದಲ್ಲಿ ಹುಡುಗ ಹುಡುಗಿಯರ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ಚಿಕ್ಕ ದೊಡ್ಡ ಆಚರಣೆಗಳ, ಪ್ರಕ್ರಿಯೆಗಳ ಸರಪಳಿಯ ಮೌಲ್ಯವನ್ನು ಕಾಣುವಂತೆ ಮಾಡುತ್ತದೆ. ಈ ಸಂಪ್ರದಾಯಗಳ ಬಗೆಗಿನ ಅಶ್ರದ್ಧೆಯು ಉದಾರ ಶಿಕ್ಷಣದ ಮುಸುಕನ್ನು ಹೊದ್ದ ದುಷ್ಪ್ರೇರಣೆಯಿಂದ ಹುಟ್ಟಿದ್ದು, ನಮ್ಮ ದೇಶದ ಮನೆಗಳಲ್ಲಿ ಹಾಗೂ ಹೊರಗೆ ಕಾಣುತ್ತಿರುವ ಅಶಿಸ್ತು ಮತ್ತು ಅಶ್ಲೀಲತೆಗಳಿಗೆ ಕಾರಣವಾಗಿದೆ. ಇದಕ್ಕೆ ಮದ್ದಾಗಿ ನಿವೇದಿತಾ ಹೇಳುವ ರಾಷ್ಟ್ರೀಯ ಪ್ರಯತ್ನವು ಮತ್ತೊಮ್ಮೆ ಹಿಂದಿರುಗಬೇಕಿದೆ.

ಪ್ರಾಣಾಯಾಮ, ಧ್ಯಾನ, ಜಪ ಮೊದಲಾದುವು ಮಾನಸಿಕ ಶಿಸ್ತಾಗಿದ್ದು, ಇಚ್ಛೆಯನ್ನು ಗಟ್ಟಿಗೊಳಿಸುತ್ತವೆ. ಅಹಂಕಾರ ತಗ್ಗಿಸಿ, ವಿನಯವನ್ನು ಹೆಚ್ಚಿಸುವ ಭಾವನೆಯ ಶೋಧನೆಯನ್ನು ಇವುಗಳೊಂದಿಗೆ ಸೇರಿಸಬಹುದು. ನಿವೇದಿತಾ ಗುರುತಿಸುವಂತೆ ಬ್ರಾಹ್ಮಣೀಯ ಶಿಕ್ಷಣ ಸಿದ್ಧಾಂತದ ಹಿರಿಮೆ ಇಲ್ಲಿದೆ. ''ಬೇರೆ ರೀತಿಯಲ್ಲಿ ಹೇಳುವುದಾದಲ್ಲಿ, ಶಿಕ್ಷಣವು ಇಚ್ಛೆಯ ಮೇಲೆ ಪರಿಣಾಮ ಬೀರಿ, ಹೃದಯ ಮತ್ತು ಬುದ್ಧಿಯನ್ನು ವಿಧೇಯ ಸೇವಕರನ್ನಾಗಿಸಿ ಪ್ರತಿಷ್ಠಾಪಿಸುತ್ತದೆ.'' ನಿಯತವೂ ಕಠಿನವೂ ಆದ ತರಬೇತಿಯಿಂದ ಮನಸ್ಸಿನಲ್ಲಿ ಇಚ್ಛೆ ಹಾಗೂ ಭಾವನಾ ಶಕ್ತಿಗಳನ್ನು ಬೆಳೆಸುವುದೇ ಶಿಕ್ಷಣ ಎಂಬ ಭಾವನೆ ಸೋದರಿ ನಿವೇದಿತಾಳದು. ತರಬೇತಿ

ಗೊಳಿಸಿದ ಗಮನದ ಹಾಗೂ ಏಕಾಗ್ರತೆಯ ಶಕ್ತಿ; ಕೊಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಯೋಚಿಸುವ ಅರ್ಹತೆ ಹಾಗೂ ಅತ್ತಿತ್ತ ಹೋಗದಂತೆ ಸರಿಯಾಗಿ ಹಾಗೂ ಪರಿಣಾಮಕಾರಿಯಾಗಿ ಇಚ್ಛೆಯನ್ನು ಬಳಸುವ ಶಕ್ತಿಯೇ ಶಿಕ್ಷಣ ಎನ್ನುತ್ತಾಳೆ ನಿವೇದಿತಾ. ಹೀಗೆ ಶಿಕ್ಷಣದ ಬಗೆಗಿನ ಪೂರ್ಣ ಸತ್ಯವಿದು: ಏಕಾಗ್ರತೆ, ಪಟ್ಟುಹಿಡಿಯುವಿಕೆ, ಸರಿಯಾದ ಇಚ್ಛೆ. ಈ ಎಲ್ಲವೂ ಸಾರ್ವತ್ರಿಕವಾಗಿದ್ದರೂ, ಇಚ್ಛೆ ಪ್ರಮಾಣಕವೂ ಆಗಿದೆ. ಭಾರತೀಯ ಸಂಸ್ಕೃತಿಯಲ್ಲಿನ ಅನುಭವದ ಖಚಿತತೆ ಮತ್ತು ವಿವೇಕಕ್ಕೆ ಈ ಮೂಲಾಂಶಗಳು ಸಂಗತವಾಗಿರಬೇಕು. ಅವಳ ಪ್ರಕಾರ ಶಿಕ್ಷಣದಲ್ಲಿ ಪೋಷಕರ ಪಾತ್ರ ಹಿರಿದು. ''ತಮ್ಮ ಮಕ್ಕಳು ಶಾಲೆಗೆ ಹೊರಟೊಡನೆ ತಂದೆತಾಯಂದಿರು ತಮ್ಮ ಕೆಲಸ ಮುಗಿಯಿತೆಂದು ಭಾವಿಸಬಾರದು. ಮನೆಯಲ್ಲಿ ನಿತ್ಯವೂ ಧರ್ಮದ ಬಗೆಗಿನ ಚಿಂತೆ ನೆಲೆಸುವಂತೆ ಮಾಡಬೇಕು. ಕುಟುಂಬ ಸಾಮರಸ್ಯ, ದಾನ, ಮಿತವ್ಯಯ, ಗೌರವ, ದೇಶದ ನಾಯಕರನ್ನು ಗೌರವಿಸುವ ಪರಂಪರೆ, ಪೌರಾಣಿಕ ಸಾಹಿತ್ಯದ ಕಣಜ ಮೊದಲಾದ ಭಾರತೀಯ ಆದರ್ಶಗಳನ್ನು ಪ್ರತಿನಿತ್ಯ ಮಾತಿನಲ್ಲಿ ತರುವುದಲ್ಲದೆ, ಅವುಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ತಿಳಿಸಬೇಕು. ಭಾರತವನ್ನು ಭಾರತವಾಗಿಸುವ ಎಲ್ಲವೂ ಭಾರತೀಯ ಮನೆಯಲ್ಲಿ ಹರಿಯುತ್ತ ಅದನ್ನು ಭಾರತೀಯವಾಗಿಸಬೇಕು... ಮಕ್ಕಳಿಗೆ ಸಿಗುವ ಉತ್ತಮ ಶಿಕ್ಷಣ ಎಂದರೆ ತಮ್ಮ ಪೋಷಕರೊಂದಿಗಿನ ಮಾತುಕತೆಯೇ.''

ಈ ಮೇಲಿನ ಹೇಳಿಕೆ ಇಂದಿನ ನಮ್ಮ ಮನೆಗಳ ವಾಸ್ತವ ಚಿತ್ರಣವನ್ನು ನೆನಪಿಸಿ, ಆತಂಕವನ್ನೆಬ್ಬಿಸಬಹುದು. ಮೇಲ್ವರ್ಗದವರಂತೂ ನಾವೇನು ಮಾಡಬೇಕೆಂದು ನಿವೇದಿತಾ ಹೇಳುವಳೋ ಅದರ ವಿರುದ್ಧ ದೂರ ಬಂದುಬಿಟ್ಟಿರುವರು. ಧರ್ಮವೆಂದರೆ ಅವರು ಸಾಂಸ್ಥಿಕವಾಗಿದ್ದು, ಮೂಢಸಂಪ್ರದಾಯಗಳಿಂದ ಇಡಿಕಿರಿದ ಇಂಗ್ಲಿಷ್ ಪದದ ಅರ್ಥವನ್ನು ಪರಿಭಾವಿಸುವರು. ಉಪಭೋಗೀ ಸಂಸ್ಕೃತಿ ಎಷ್ಟು ಬಲವಾಗಿದೆ ಎಂದರೆ, ಜೀವನ ಮಟ್ಟದ ಏರಿಕೆ ಎಂದರೆ ಹೆಚ್ಚು ವಸ್ತುಗಳನ್ನು ಕೊಳ್ಳುವುದು ಎಂದಾಗಿದೆ. ಅವರ ನಾಯಕರಾಗಿ ಭಾರತದ ವೀರರಿಲ್ಲ; ನೆಪೋಲಿಯನ್, ಚರ್ಚಿಲ್, ಕೆನಡಿಗಳು ಅವರ ಹಾಗೂ ಅವರ ಮಕ್ಕಳ ಪ್ರಜ್ಞೆಯನ್ನು ಆವರಿಸಿದ್ದಾರೆ. 'ಆಲಿಸ್ ಇನ್ ದಿ ವಂಡರ್‌ಲ್ಯಾಂಡ್' ಪರಿಚಿತವಾದಷ್ಟು ಪುರಾಣ, ಪಂಚತಂತ್ರಗಳಲ್ಲ. ಘಟಕವಾಗಿ ಕುಟುಂಬವೇ ನಶಿಸುತ್ತಿರಲು ಅವಿಭಕ್ತ ಕುಟುಂಬ ಕನಸು. ತಂದೆ ತಾಯಿಗಳಿಬ್ಬರೂ ಬೆಳಗ್ಗೆ ಲಕ್ಕೆ ಮನೆ ಬಿಟ್ಟರೆ ಹಿಂದಿರುಗುವುದು ಸಂಜೆ ಲಕ್ಕೇ. ಆಮೇಲೂ ಟಿ.ವಿ. ಕೊಳೆ ಮನಸ್ಸನ್ನು ತುಂಬಿಕೊಳ್ಳುವುದು. ತಂದೆ ತಾಯಿ ಮಾತನಾಡುವುದು ಹಣದ ಬಗ್ಗೆ, ಜಗಳ, ಆಫೀಸು ರಾಜಕೀಯ, ನೆರೆಹೊರೆಯ ಗೊಡ್ಡು ಹರಟೆ. ಹೀಗೆ ವ್ಯಕ್ತಿತ್ವ ಕುಬ್ಜವಾಗುತ್ತ ನಡೆದರೆ ಭಾರತದ ಭವಿಷ್ಯವೇನು? ನಾಯಿಕೊಡೆಗಳಂತೆ ಬೆಳೆಯುತ್ತಿರುವ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲುಗಳು ಈ ಶೂನ್ಯವನ್ನು ಹೇಗೆ ತುಂಬಿಯಾವು? ವೃತ್ತಿಪರ ತಂದೆ ಪೂರ್ವದಲ್ಲಿ, ವೃತ್ತಿಪರ ತಾಯಿ ಉತ್ತರದಲ್ಲಿ ಇದ್ದು, ಮಗು ದಕ್ಷಿಣ ಭಾರತದ ದುಬಾರಿ ವಸತಿಶಾಲೆಯಲ್ಲಿ ಬೆಳೆಯುವುದು ಸಾಮಾನ್ಯ. ಹೀಗೆ ಅಣುಸಂಸಾರಗಳೂ ಕಾಣೆಯಾಗುತ್ತಿವೆ. ಮುಂದೇನು?

ಎಳೆಯ ಮನಸ್ಸುಗಳು ಭಾರತದ ಇತಿಹಾಸವನ್ನು ಕಲಿಯುವ ವಿಧಾನದ ಬಗ್ಗೆ ನಿವೇದಿತಾ ಶತಮಾನದ ಹಿಂದೆ ಹೇಳಿದ್ದು ಇಂದಿಗೂ ಪ್ರಸ್ತುತ. ''ಮೂಲಭೂತವಾದ ಹಾದಿಯಿಂದ ಅದರ ಹೃದಯವನ್ನೇ ತಲುಪುವುದು ಈ ವಿಧಾನ: ನಮ್ಮ ದೇಶ ಬೆಳೆದು ಬಂದ ರೀತಿಯನ್ನು ಹಂತಹಂತವಾಗಿ ಪ್ರೀತಿಯಿಂದ ಅಧ್ಯಯನ ಮಾಡುವುದರಿಂದ ಮಾತ್ರ ಭಾರತದ ವಿಕಾಸ ಹಾಗೂ ಶಕ್ತಿ ಏನೆಂಬುದನ್ನು ತಿಳಿಯಬಹುದು.'' ''ಭಾರತೀಯ ಸಾಹಿತ್ಯದಲ್ಲಿ ಚರಿತ್ರೆ ಇಲ್ಲವೆಂದು ಇತರರು ಹೇಳುವರು. ಭಾರತವೇ ಸ್ವತಃ ಈ ಮಾದರಿಯ ಮೇರುಕೃತಿಯಾಗಿದೆ ಎಂಬುದನ್ನು ಮರೆಯಬಾರದು. ದೇಶವೇ ತನ್ನ ದಾಖಲೆ; ಭಾರತವೇ ಚರಿತ್ರೆಯಾಗಿದ್ದು ನಾವು ಹೇಗೆ ಅಧ್ಯಯನ ಮಾಡಬೇಕೆಂಬುದನ್ನು ಅರಿತುಕೊಳ್ಳಬೇಕು.'' ''ಭಾರತವೇ ಅದರ ಚರಿತ್ರೆ ಎಂದಾಗ, ಅದರ ಯಾತ್ರೆಯೇ ಅದನ್ನು ಅರಿತುಕೊಳ್ಳುವ ರೀತಿ ಎಂದಾಯಿತು. ಪ್ರಪಂಚವನ್ನು ಸುತ್ತಿದರೆ ನಮಗೆ ಏನನ್ನೂ ನೋಡಲಾಗದು ಅಥವಾ ನೋಡಿದ್ದು ಅಸತ್ಯವಾಗಿರಬಹುದು. ಏಕೆಂದರೆ ನಾವು ನೋಡಲು ಸಿದ್ಧರಾದುದನ್ನು ಮಾತ್ರ ನೋಡಬಹುದು.'' ''ಭಾರತದ ವಿಶೇಷತೆಯೆಂದರೆ ಇಲ್ಲಿನ ಎಲ್ಲ ಶ್ರೇಷ್ಠ ತತ್ತ್ವ-ಸಿದ್ಧಾಂತಗಳಿಗೂ ಅದನ್ನು ನಿರ್ವಹಿಸುವ ಸ್ಥಾನ ಹಾಗೂ ಸಂಪ್ರದಾಯ ಇರುವುದು. ಭಾರತೀಯ ಚಿಂತನ ಜಾಲದಲ್ಲಿ ಭಾರತವೇ ಏಕಕಾಲದಲ್ಲಿ ಆಧಾರವೂ, ಅದರ ವಿವರಣೆಯೂ ಆಗಿದೆ.'' ''ಯುಗಗಳು ಹಾಗೂ ಪರ್ವಗಳ ಹುಡುಕಾಟದಲ್ಲಿ ತಾಯಿ ಮತ್ತು ತಾಯಿನಾಡು ಅವುಗಳ ಹಿನ್ನೆಲೆಯಲ್ಲಿರುವುದನ್ನು ನಾವು ಮರೆಯಲಾಗದು.''

> ಭಾರತದ ಅಂತಃಸತ್ವವು ಹೊರಚಿಮ್ಮುವಂತೆ ಮಾಡುವುದೇ ನನ್ನ ಗುರಿ; ಅದು ಹೇಗಾದರೂ ಆಗಲಿ, ನನ್ನ ಕುದಿಯುವ ಉತ್ಸಾಹ ಪಾಶ್ಚಾತ್ಯ ನಿಷ್ಪ್ರಯೋಜಕ ವಿಷಯಗಳ ಕಡೆ ಹರಿದು ವ್ಯರ್ಥವಾಗದಿರಲಿ. ಅದರ ಬದಲು ನಾನು ಆತ್ಮಹತ್ಯೆ ಮಾಡಿಕೊಳ್ಳುವುದೇ ಒಳ್ಳೆಯದು ಅನ್ನಿಸುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಭಾರತವೇ ನನ್ನ ಯಾತ್ರೆಯ ಪ್ರಾರಂಭ ಸ್ಥಳ, ಅದೇ ನನ್ನ ಗುರಿ! ಭಾರತ ಬೇಕಾದರೆ ಪಶ್ಚಿಮ ದೇಶಗಳನ್ನು ನೋಡಿಕೊಳ್ಳಲಿ.
>
> ಭಾರತದಲ್ಲಿರುವ ಏಕತೆ ಭಾರತದ್ದೆ, ಅದಕ್ಕೆ ಅದರದೇ ಭವಿಷ್ಯವಿದೆ, ಅದರದೇ ಕಾರ್ಯವಿದೆ, ಅದರದೇ ಆದ ಶಕ್ತಿಯೂ ಇದೆ. ಅದು ಹೊರಗಿನವರ ಕೊಡುಗೆಯಲ್ಲ.
>
> **–ಸೋದರಿ ನಿವೇದಿತಾ**

ಯಶೋದಾ ಮಾಯಿ

'ವೈಷ್ಣವ ಮೇರಿ'

ಸಂಗ್ರಹ: **ಸ್ವರ್ಣಗೌರಿ**



ಸ್ವಾಮಿ ವಿವೇಕಾನಂದರ ಒಡನಾಟದಿಂದ ಪವಿತ್ರವಾದ ಒಂದು ಪ್ರಮುಖ ಸ್ಥಳ ಗಾಜಿಪುರ. ಸ್ವಾಮೀಜಿ ಸಂತ ಪವಹಾರಿ ಬಾಬಾರವರನ್ನು ಭೇಟಿ ಮಾಡಿದ್ದು ಹಾಗೂ ಶ್ರೀರಾಮಕೃಷ್ಣರ ದರ್ಶನವನ್ನು ಪಡೆದುದ್ದು ಈ ಸ್ಥಳದಲ್ಲೇ. ಗಾಜಿಪುರದ ಅಫೀಮು ತಯಾರಿಸುವ ಕಾರ್ಖಾನೆಯಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಅಲಂಕರಿಸಿದ್ದರು ರಾಯ್ ಬಹದ್ದೂರ್ ಗಗನ್‌ಚಂದ್ರ ರಾಯ್. ಸುಸಂಸ್ಕೃತ, ಉದಾರ ಹೃದಯದ ಗಗನ್‌ಬಾಬುಗಳು ತನ್ನ ಸ್ನೇಹಿತ ಸತೀಶ್ ಮುಖ್ಯೋಪಾಧ್ಯಾಯನ ಮನೆಯಲ್ಲಿ ತಂಗಿದ್ದ ಸ್ವಾಮಿ ವಿವೇಕಾನಂದರ ಪ್ರೀತಿಯನ್ನು ಗಳಿಸಿದ್ದರು. ಸ್ವಾಮೀಜಿಯವರ ಕೃಪಾದೃಷ್ಟಿ ಗಗನ್ ರಾಯರ ಒಂಬತ್ತು ವರ್ಷದ ಮಗಳ ಮೇಲೆ ಹರಿಯಿತು. ಅತ್ಯಂತ ರೂಪವತಿಯಾದ, ಚುರುಕು ಕಣ್ಣುಗಳುಳ್ಳ ಮೋನಿಕಾಳ ಬಗ್ಗೆ ಬಹಳ ಹೆಮ್ಮೆಯಿದ್ದ ತಂದೆ ಗಗನ್‌ಬಾಬು ಸ್ವಾಮೀಜಿಗೆ ಮಗಳನ್ನು ಪರಿಚಯಿಸುತ್ತಾ ಅವಳನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸಿದರು. ''ನಾನು ಅವಳನ್ನು ಬಹಳ ಹಿಂದೆಯೇ ಆಶೀರ್ವದಿಸಿದ್ದೇನೆ. ಈಗ ಅವಳನ್ನು ಜಗನ್ಮಾತೆಯೆಂದು ಪೂಜಿಸಲು ಇಚ್ಛೆಯಾಗುತ್ತಿದೆ'' ಎಂಬ ಉತ್ತರವನ್ನು ಸ್ವಾಮೀಜಿಯವರ ಶ್ರೀಮುಖದಿಂದ ಕೇಳಿದ ಗಗನ್‌ಬಾಬುಗಳ ಆನಂದಕ್ಕೆ ಪಾರವೇ ಇಲ್ಲದಾಯಿತು. ಮಾರನೇ ದಿನ ಅತ್ಯಂತ ಸಡಗರದಿಂದ ಪೂಜೆಗಾಗಿ ತಯಾರಿ ಆರಂಭವಾಯಿತು. ಶುಭಮುಹೂರ್ತದಲ್ಲಿ ಸ್ವಾಮೀಜಿ ಆ ಬಾಲಕಿಯನ್ನು ಕುಳ್ಳಿರಿಸಿ, ಜಗನ್ಮಾತೆಯೆಂದು ಪೂಜಿಸಿದರು. ಪೂಜೆಯ ನಂತರ ಸಮಾಧಿಸ್ಥರಾದರು. ಬಾಹ್ಯಜ್ಞಾನ ಉದಿಸುತ್ತಲೇ ಸ್ವಾಮೀಜಿ ಅಸ್ಪಷ್ಟ ಧ್ವನಿಯಲ್ಲಿ ಮೆಲ್ಲಗೆ ಹೀಗೆ ಹೇಳುತ್ತಿರುವುದು ಗಗನ್ ಬಾಬುಗಳ ಕಿವಿಗೆ ಬಿದ್ದಿತು: ''ಈ ಬಾಲಕಿ ಸಾಧಾರಣ ವ್ಯಕ್ತಿಯಲ್ಲ. ಹಿಂದಿನ ಜನ್ಮದ ಅನೇಕ ಸತ್‌ಸಂಸ್ಕಾರಗಳಿಂದ ಜನಿಸಿದ್ದಾಳೆ...''

ಜ್ಞಾನೇಂದ್ರನಾಥ್ ಚಕ್ರವರ್ತಿಯ ಕೈಹಿಡಿದ ಮೋನಿಕಾ ರಾಯ್ ಕೇವಲ ೧೨ ವರ್ಷಕ್ಕೆ ಗೃಹಸ್ಥ ಜೀವನಕ್ಕೆ ಕಾಲಿಟ್ಟಳು. ಆಧ್ಯಾತ್ಮಿಕ ಪ್ರವೃತ್ತಿಯುಳ್ಳ ಜ್ಞಾನೇಂದ್ರನಿಗೆ ಥಿಯಾಸಫಿಯಲ್ಲಿ ಬಹು ಆಸಕ್ತಿ. ಅವನು ಸುಪ್ರಸಿದ್ಧ ಶಿಕ್ಷಣ ಶಾಸ್ತ್ರಜ್ಞನೂ ಲಕ್ನೋ ವಿಶ್ವವಿದ್ಯಾನಿಲಯದ ಪ್ರಥಮ ಉಪಾಧ್ಯಕ್ಷನೂ ಆಗಿದ್ದನು. ಇಷ್ಟಲ್ಲದೆ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸುವ ಗೌರವವೂ ಸಂದಿತ್ತು. ಸ್ವಾಮೀಜಿಯವರ ಅಮೋಘವಾದ ಭಾಷಣಗಳ ವಿವರಣೆ ಹೊತ್ತ ಪತಿಯ ಪತ್ರಗಳಿಂದ ಸ್ವಾಮಿ ವಿವೇಕಾನಂದರ ಬಗ್ಗೆ ಮತ್ತೊಮ್ಮೆ ತಿಳಿಯುವಂತಾಯಿತು ಮೋನಿಕಾಳಿಗೆ.

ಕಾಲಾನುಕ್ರಮದಲ್ಲಿ ಈ ದಂಪತಿಗಳಿಗೆ ನಾಲ್ವರು ಮಕ್ಕಳಾದರು. ಒಮ್ಮೆ ಪ್ಯಾರಿಸ್ಸಿನ ಒಂದು ಪ್ರದರ್ಶನಕ್ಕೆ (೧೯೦೧ ಅಥವಾ ೧೯೦೨) ಇಟೆಲಿ ಮಾರ್ಗವಾಗಿ ಯೂರೋಪ್ ದೇಶಕ್ಕೆ ಹೋದ ಮೋನಿಕಾ, ರೋಮಿನ ಸುಪ್ರಸಿದ್ಧ ಸಂತ ಪೀಟರ್ ಚರ್ಚಿಗೆ ಭೇಟಿಯಿತ್ತಳು. ಮೊದಲೇ ರೂಪವತಿಯ ಗುಂಪಿಗೆ ಸೇರಿಸಬಹುದಾದ ಮೋನಿಕಾಳ ಸೌಂದರ್ಯ, ಆ ದಿನ ಬೆಳ್ಳಿಯ ನಕ್ಷತ್ರಗಳ ಅಂಚುಳ್ಳ ನೀಲಿ ಸೀರೆಯಲ್ಲಿ ಮತ್ತಷ್ಟು ವರ್ಧಿಸಿತ್ತು. ಈ ಕಪ್ಪಾದ, ದೊಡ್ಡ ಬಟ್ಟಲುಗಣ್ಣಿನ ಚೆಲುವೆಯನ್ನು ನೋಡಿದ ಕೆಲವು ಮಂದಿ ಇಟೆಲಿಯ ರೈತರು ಈಕೆಯನ್ನು ಕನ್ಯೆ ಮೇರಿಯ ಅವತಾರವೆಂದು ತಿಳಿದರು. ಎಲ್ಲರೂ ಆಕೆಯನ್ನು ಸುತ್ತುವರಿದರು. ಆಕೆ ಉಟ್ಟಿದ್ದ ಸೀರೆಯ ಸೆರಗಿನಿಂದ ಕೆಲವು ತುಂಡುಗಳನ್ನು ಕತ್ತರಿಸಿಕೊಂಡರು. ಅವಳಿಗೆ ಜನರ ನೂಕುನುಗ್ಗಲಿನಿಂದ ಹೊರಬರು

ವುದೇ ಒಂದು ಸಾಹಸವಾಯಿತು. ಮತ್ತೆಂದೂ ಆ ಸೀರೆಯನ್ನು ಉಡಬಾರದೆಂದು ಎಚ್ಚರಿಸುತ್ತಾ ಆ ಜನಜಂಗುಳಿಯಿಂದ ಹೊರ ಕರೆತಂದು ಗಾಡಿಯಲ್ಲಿ ಕೂರಿಸಿದರು ಜೊತೆಗಾರರು. ಚಿನ್ನಾಭರಣಗಳಿಂದ ಸಾಲಂಕೃತಳಾಗಿ ಪ್ರದರ್ಶನಕ್ಕೆ ಬಂದ ಮೋನಿಕಾಳನ್ನು ಅಲ್ಲಿನ ಜನರು ಮಡಗಾಸ್ಕರ್‌ನ ರಾಣಿಯೆಂದೇ ತಿಳಿದರು.

ಶ್ರೀಮಂತಿಕೆ ಮತ್ತು ಮೋಹಕ ರೂಪಿನ ಬಲೆಗೆ ಸಿಲುಕಿದ ಮೋನಿಕಾ ಕ್ರಮೇಣ ಕುಡಿತ, ಧೂಮಪಾನಗಳ ಚಟಕ್ಕೆ ಸಿಲುಕಿದಳು. ಆತ್ಮೀಯ ಆತಿಥೇಯಳೆಂದೇ ಪ್ರಸಿದ್ಧಳಾಗಿದ್ದ ಅವಳ ಬಾಳು ಈಗ ಅಸ್ತವ್ಯಸ್ತವಾಯಿತು. ಆದರೆ ಸ್ವಾಮಿ ವಿವೇಕಾನಂದರ ಆಶೀರ್ವಾದವು ವ್ಯರ್ಥವಾಗಲಿಲ್ಲ. ಒಂದು ಸುದಿನದಂದು ಅವಳಲ್ಲಿದ್ದ ದೈವತ್ವವು ಇದ್ದಕಿದ್ದಂತೆ ವ್ಯಕ್ತವಾಗತೊಡಗಿತು. ಅವಳಿಗೆ ಅನೇಕ ದಿವ್ಯಾನುಭವಗಳು ಆಗತೊಡಗಿದವು. ಆಧ್ಯಾತ್ಮಿಕ ಜೀವನದಲ್ಲಿ ಒಲವು ಮೂಡಿದ ಮೋನಿಕಾ ಗೌಡೀಯ ವೈಷ್ಣವ ಪದ್ಧತಿಗೆ ಅನುಸಾರವಾಗಿ ಸಂನ್ಯಾಸ ತೆಗೆದುಕೊಳ್ಳಲು ನಿಶ್ಚಯಿಸಿದಳು. '**ಯಶೋದಾ ಮಯಿ**' ಎಂಬುದು ಅವಳ ಸಂನ್ಯಾಸ ನಾಮಧೇಯವಾಯಿತು. ಬ್ರಿಟಿಷ್ ಆಧ್ಯಾತ್ಮಿಕ ಸಾಧಕನಾಗಿದ್ದ ರೊನಾಲ್ಡ್ ಹೆನ್ರಿ ನಿಕ್ಸನ್‌ನನ್ನು ಲಕ್ನೋ ವಿಶ್ವವಿದ್ಯಾನಿಲಯಕ್ಕೆ ಆಮಂತ್ರಿಸಿದ್ದೇ ಜ್ಞಾನೇಂದ್ರ. ಕಾಲಕ್ರಮೇಣ ನಿಕ್ಸನ್ ಯಶೋದಾ ಮಯಿಯನ್ನು ತನ್ನ ಆಧ್ಯಾತ್ಮಿಕ ಗುರುವೆಂದು ಸ್ವೀಕರಿಸಿದನು. ಮುಂದೆ ಈ ಗುರುವಿನಿಂದ ಸಂನ್ಯಾಸದೀಕ್ಷೆ ಪಡೆದು 'ಕೃಷ್ಣಪ್ರೇಮ' ಎಂಬ ಅನ್ವರ್ಥನಾಮವನ್ನು ಪಡೆದನು. ಆಲ್ಮೋರಾದ ಬಳಿ ಮಿರ್ತೋಲಾ ಎಂಬಲ್ಲಿ ಆಶ್ರಮ ಪ್ರಾರಂಭಿಸಿದಳು ಯಶೋದಾ ಮಯಿ. ಸಂಪ್ರದಾಯ ಬದ್ಧ ವೈಷ್ಣವ ಸಾಧನಾಪಥದಲ್ಲಿ ಆಧ್ಯಾತ್ಮಿಕವಾಗಿ ಮುಂದುವರಿದು, ಐರೋಪ್ಯರಲ್ಲಿ ಮೊದಲಿಗನೆಂಬ ಹೆಗ್ಗಳಿಕೆಗೆ ಪಾತ್ರನಾದನು ಕೃಷ್ಣಪ್ರೇಮ. ಅವನು ಮುಂದೆ ಅನೇಕ ಶಿಷ್ಯರನ್ನು ಸ್ವೀಕರಿಸಿ ಉನ್ನತ ಸ್ಥಿತಿಯನ್ನು ತಲುಪಿದನು.

ಸ್ವಾಮಿ ವಿವೇಕಾನಂದರ ಈ ಮಾತುಗಳು ಯಶೋದಾ ಮಯಿಗೆ ಎಷ್ಟೊಂದು ಚೆನ್ನಾಗಿ ಅನ್ವಯಿಸುತ್ತದೆ:

''ಸ್ತ್ರೀಯರಲ್ಲಿ ಓರ್ವಳು ಬ್ರಹ್ಮಜ್ಞಾನಿಯಾದರೂ ಆಕೆಯ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಂದಿ ಸ್ತ್ರೀಯರು ಸ್ಫೂರ್ತಿ ಹೊಂದಿ ಸತ್ಯವನ್ನರಿತು ಇಡೀ ದೇಶಕ್ಕೆ ಕಲ್ಯಾಣವಾಗಿ ಸಮಾಜವೂ ಭದ್ರವಾಗುವುದು ...'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೮, ಪು.೨೧೭)*

''ಅವರು ರೂಪಿನಲ್ಲಿ ಲಕ್ಷ್ಮಿಯನ್ನು ಹೋಲುವರು, ಸದ್ಗುಣಗಳಲ್ಲಿ ಸರಸ್ವತಿಯನ್ನು ಹೋಲುತ್ತಾರೆ. ಅವರೇ ಜಗನ್ಮಯಿಯ ಅವತಾರ. ಅವರ ಆರಾಧನೆಯ ಮೂಲಕ ಯಾವ ಕೆಲಸದಲ್ಲಾದರೂ ಸಿದ್ಧಿಯನ್ನು ಪಡೆಯಬಹುದು... ನಮ್ಮ ದೇಶದಲ್ಲಿ ಅಂತಹ ಜಗನ್ಮಯಿಯ ಅವತಾರ ಸ್ವರೂಪ ರಾದಂಥ ಒಂದು ಸಾವಿರ ಸ್ತ್ರೀರತ್ನಗಳನ್ನು ನಾನು ಸಾಯುವುದಕ್ಕೆ ಮುಂಚೆ ಒಂದುಗೂಡಿಸಿದರೆ ಶಾಂತಿಯಿಂದ ಪ್ರಾಣ ಬಿಡುವೆನು. ಆಗ ಮಾತ್ರ ನಮ್ಮ ದೇಶದವರು ತಾವು ಆರ್ಯಸಂತಾನರೆಂದು ಹೊಗಳಿಕೊಳ್ಳಬಹುದು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪು. ೧೮೧)*

ಸೇವೆಯಿಂದ ಸಾರ್ಥಕತೆ

ಸಿಖ್ ಗುರು ಗೋವಿಂದ ಸಿಂಹ ಆನಂದಪುರ ಸಾಹಿಬದಲ್ಲಿ ಪ್ರವಚನವನ್ನು ಮಾಡುತ್ತಿದ್ದರು. ಅವರಿಗೆ ದಾಹವಾಯಿತು. ಅವರು ''ನನಗೆ ಪವಿತ್ರ ಕೈಗಳಿಂದ ಕುಡಿಯಲು ನೀರನ್ನು ಕೊಡಬೇಕು'' ಎಂದರು. ಒಬ್ಬ ಭಕ್ತ ನೀರಿನ ಪಾತ್ರೆಯನ್ನು ತೆಗೆದುಕೊಂಡು ಮುಂದೆ ಬಂದನು. ''ಸ್ವಾಮಿ, ನನ್ನ ಕೈಗಳು ಪವಿತ್ರವಾಗಿವೆ. ನಾನು ನನ್ನ ಕೈಗಳಿಂದ ಒಂದೇ ಒಂದು ಸಣ್ಣ ಕೆಲಸವನ್ನೂ ಮಾಡಿಲ್ಲ. ನಮ್ಮ ಮನೆಯ ಎಲ್ಲ ಕೆಲಸಗಳನ್ನೂ ನೌಕರರೇ ಮಾಡುತ್ತಾರೆ,'' ಎಂದನು. ಗುರು ಗೋವಿಂದ ಸಿಂಹರು, ''ಯಾವ ಕೈಗಳು ಒಂದು ಕೆಲಸವನ್ನೂ ಮಾಡಲಿಲ್ಲವೋ, ಯಾವತ್ತೂ ಇನ್ನೊಬ್ಬರ ಸೇವೆಯನ್ನು ಮಾಡಲಿಲ್ಲವೋ ಅವು ಹೇಗೆ ತಾನೆ ಪವಿತ್ರವಾಗಲು ಸಾಧ್ಯ?'' ಎಂದರು. ಗುರು ಆ ನೀರನ್ನು ಸ್ವೀಕರಿಸಲಿಲ್ಲ. ಇನ್ನೊಬ್ಬ ಶಿಷ್ಯನು ನೀರನ್ನು ತೆಗೆದುಕೊಂಡು ಬಂದನು. ಅದರಿಂದ ಗುರು ತನ್ನ ದಾಹವನ್ನು ತೀರಿಸಿಕೊಂಡರು.

* * * *

ರಾಮಾನುಜಂ ವಾಸಿಸುತ್ತಿದ್ದುದು ಚೆನ್ನೈಯಲ್ಲಿ. ಅವನು ತನ್ನ ಮಗನಿಗೆ ಒಂದಿಷ್ಟು ಹಣವನ್ನು ಕೊಟ್ಟು , ಅಂಗಡಿಯಿಂದ ಹಣ್ಣನ್ನು ತರುವಂತೆ ಹೇಳಿದನು. ಸ್ವಲ್ಪ ಹೊತ್ತಾದ ಮೇಲೆ ಮಗ ಬರಿಗೈಯಲ್ಲಿ ಮರಳಿದನು. ತಂದೆ ಕೇಳಿದ, ''ಏಕೆ ಹಣ್ಣು ತಂದಿಲ್ಲ?'' ಮಗ ಹೇಳಿದ, ''ಅಪ್ಪ ನಾನು ಹಣ್ಣನ್ನು ತರಲಿಲ್ಲ. ಆದರೆ ನಿಮಗಾಗಿ ಅಮರಫಲವನ್ನು ತಂದಿದ್ದೇನೆ. ''ಅಮರಫಲ! ಹಾಗಂದರೇನು?'' ತಂದೆ ಕೇಳಿದನು.

ಮಗ ಹೇಳಿದ, ''ಅಪ್ಪ, ನಾನು ಹಣ್ಣು ತರಲು ಅಂಗಡಿಯ ಹತ್ತಿರ ಹೋಗಿದ್ದೆನು. ಅಲ್ಲಿ ಒಬ್ಬ ವೃದ್ಧ ಹಸಿವೆಯಿಂದ ಒದ್ದಾಡುತ್ತಿದ್ದುದು ಕಾಣಿಸಿತು. ಅವನಿಗೆ ನೀವು ಕೊಟ್ಟ ಹಣದಿಂದ ಊಟವನ್ನು ಒದಗಿಸಿದೆನು. ಹಸಿದ ವ್ಯಕ್ತಿಗೆ ಅನ್ನವನ್ನು ಒದಗಿಸಿ ಅವನ ಆಶೀರ್ವಾದವನ್ನು ಪಡೆಯುವುದು ಅಮರಫಲವಲ್ಲದೆ ಇನ್ನೇನು?''

ರಾಮಾನುಜಂ ತನ್ನ ಮಗನ ಮಾತಗಳನ್ನು ಕೇಳಿ ಸಂಪ್ರೀತನಾದನು. ಈ ಬಾಲಕನೇ ಮುಂದೆ ಶ್ರೇಷ್ಠ ಸಂತ ರಂಗದಾಸನಾದನು.

(ಸಂಗ್ರಹ: ಮಾತಾ ತ್ಯಾಗಮಯೀ)

ಶ್ರೀಮಾತೆಯವರ ಪತ್ರಗಳು –೪

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

ಸೋದರಿ ನಿವೇದಿತಾ ಸ್ವಾಮಿ ವಿವೇಕಾನಂದರ ಆದೇಶದಂತೆ ಭಾರತದಲ್ಲಿ ಭಾರತ ಸ್ತ್ರೀಯರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದಳು. ಅದನ್ನು ನಡೆಸಲು ಬೇಕಾದ ಧನ ಸಂಗ್ರಹಕ್ಕಾಗಿ ಅವಳಿಗೆ ಪಾಶ್ಚಾತ್ಯ ದೇಶಗಳಿಗೆ ಹೋಗಬೇಕಾಯಿತು. ಶ್ರೀಮಾತೆಯವರಲ್ಲಿ ಅವಳಿಗೆ ಅತ್ಯಂತ ಶ್ರದ್ಧೆ, ಭಕ್ತಿ, ಪ್ರೀತಿಯಿದ್ದುದರಿಂದ ಅಲ್ಲಿಂದ ಅವರಿಗೆ ಪತ್ರವನ್ನು ಬರೆದು ತನ್ನ ಎಲ್ಲಾ ವಿಷಯಗಳನ್ನು ತಿಳಿಸುತ್ತಿದ್ದಳು. ಶ್ರೀಮಾತೆಯವರೂ ಅವಳ ಬಗ್ಗೆ ತಿಳಿಯಲು ಕಾತರರಾಗುತ್ತಿದ್ದರು. ಮುಂದಿನದು ಅವಳ ಪತ್ರಕ್ಕೆ ಉತ್ತರವಾಗಿ ಶ್ರೀಮಾತೆಯವರ ಒಂದು ಪತ್ರ:



ಪತ್ರ ೧೨

ಶ್ರೀ ಗುರುಚರಣದಲ್ಲಿ ಭರವಸೆ

ಜಯರಾಂಬಾಟಿ ೪-೪-೧೯೦೦

ಶುಭಾಶೀರ್ವಾದಗಳೊಂದಿಗೆ ಈ ಪತ್ರ.

ಪ್ರೀತಿಯ ಮಗಳು ನಿವೇದಿತಾ, ನನ್ನ ಆತ್ಮೀಯ ಪ್ರೀತಿಯನ್ನು ಸ್ವೀಕರಿಸು. ನೀನು ನನ್ನ ನಿತ್ಯ ಶಾಂತಿಗಾಗಿ ಭಗವಂತನಲ್ಲಿ ಪ್ರಾರ್ಥಿಸಿರುವೆ ಎಂದು ತಿಳಿದು ಸಂತೋಷವಾಯಿತು. ನೀನು ಆ ಸದಾನಂದಮಯಿ ಮಾತೆಯ ಪ್ರತಿಮೂರ್ತಿ. ನನ್ನ ಬಳಿ ಇರುವ ನಿನ್ನ ಭಾವಚಿತ್ರವನ್ನು ನಾನು ಆಗಾಗ ನೋಡುತ್ತಾ ಇರುತ್ತೇನೆ. ಆಗೆಲ್ಲಾ ನೀನು ನಮ್ಮ ನಡುವೆಯೇ ಇರುವಂತೆ ಅನ್ನಿಸುತ್ತದೆ. ನೀನು ಯಾವ ವರ್ಷ, ಯಾವ ದಿನದಂದು ಬರುವೆ ಎಂದು ಆ ದಿನಕ್ಕಾಗಿ ಹಂಬಲಿಸಿ ಕಾಯುತ್ತಿರುವೆ. ಶುದ್ಧ ಪವಿತ್ರ ಜೀವನದಿಂದ ಕೂಡಿದ ನಿನ್ನ ಹೃದಯದಿಂದ ನನಗಾಗಿ ಮಾಡಿದ ಪ್ರಾರ್ಥನೆ ಸಫಲವಾಗಲಿ. ನಾನು ಕ್ಷೇಮದಿಂದ ಆನಂದವಾಗಿಯೇ ಇದ್ದೇನೆ. ಭಗವಂತನು ನಿನ್ನ ಕೆಲಸಕ್ಕೆ ಸಹಾಯಮಾಡಿ, ನಿನಗೆ ಶಕ್ತಿಯನ್ನೂ, ಆನಂದವನ್ನೂ ನೀಡಲಿ ಎಂದು ಸದಾ ನನ್ನ ಪ್ರಾರ್ಥನೆ. ನೀನು ಆದಷ್ಟು ಬೇಗ ಮರಳಿ ಬರುವಂತಾಗಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಭಾರತದಲ್ಲಿ ಸ್ತ್ರೀಯರಿಗಾಗಿ ಆಶ್ರಮ ಮಾಡಬೇಕೆಂಬ ನಿನ್ನ ಇಚ್ಛೆಯನ್ನು ಭಗವಂತನು ಪೂರೈಸಲಿ. ಮುಂದೆ ಆ ಆಶ್ರಮವು ಎಲ್ಲರಿಗೂ ಸರಿಯಾದ ಧರ್ಮದ ಶಿಕ್ಷಣವನ್ನು ನೀಡಿ, ಅದರ ಉದ್ದೇಶ ಸಫಲವಾಗಲಿ.

ಈ ಬ್ರಹ್ಮಾಂಡದ ಪ್ರಾಣ ಸ್ವರೂಪನಾದ ಭಗವಂತನು ತನ್ನ ಸ್ತೋತ್ರವನ್ನು ತಾನೇ ಸ್ತುತಿಸುತ್ತಿದ್ದಾನೆ. ನೀನು ಈ ನಶ್ವರ ಜಗತ್ತಿನ ಮೂಲಕವೇ ಆ ನಿತ್ಯ ಸಂಗೀತವನ್ನು ಶ್ರವಣ ಮಾಡುತ್ತಿರುವೆ. ವೃಕ್ಷಗಳೂ, ಲತೆಗಳೂ ಪಶುಪಕ್ಷಿಗಳೂ, ಪರ್ವತಗಳೂ, ಎಲ್ಲರೂ ಆ ಭಗವಂತನನ್ನು ಸ್ತುತಿಸುತ್ತಿವೆ. ದಕ್ಷಿಣೇಶ್ವರದ ವಟವೃಕ್ಷಗಳೂ ಖಂಡಿತ ಕಾಳಿಮಾತೆಯನ್ನೇ ಸ್ತುತಿಸುತ್ತಿವೆ. ಯಾರಿಗೆ ಕೇಳುವ ಕಿವಿಯಿದೆಯೋ ಅವರಷ್ಟೇ ಅದನ್ನು ಕೇಳಬಲ್ಲರು.

Mrs. Watermanಳ ದೃಢ ವಿಶ್ವಾಸದ ಬಗ್ಗೆ ಕೇಳಿ ತುಂಬಾ ಸಂತೋಷವಾಯಿತು. ಯಾರಿಗೆ ತಮ್ಮ ಪ್ರೀತಿಯ ವ್ಯಕ್ತಿ ಮರಣ ಹೊಂದಿದರೂ ಅವರನ್ನು ಕಳೆದುಕೊಂಡಿಲ್ಲ ಎಂದೆನ್ನಿಸುವುದೋ ಅವರು ನಿಜವಾಗಿಯೂ ದಿವ್ಯತೆಯನ್ನು ಹೊಂದಿದ್ದಾರೆ. ಏಕೆಂದರೆ ದೇಹ ಮರಣ ಹೊಂದಿದರೂ ಆತ್ಮವು ನಾಶವಾಗುವುದಿಲ್ಲ. ನನ್ನ ಬಗ್ಗೆ ಕೇಳಿ ಅವಳು ಬಲವನ್ನು ಪಡೆದಿದ್ದಾಳೆಂದು ಕೇಳಲು ಇಚ್ಛಿಸುತ್ತೇನೆ. ಅವಳು ನಿನ್ನ ಕೆಲಸಕ್ಕೆ ಸಹಾಯಕಳಾಗಿರಲಿ. Mrs. May Wright Sewell ಳಿಗೆ ನನ್ನ ಪ್ರೀತಿ, ಆಶೀರ್ವಾದಗಳನ್ನು ತಿಳಿಸು.

ನಿನಗೆ ನನ್ನ ಪ್ರೀತಿ ಮತ್ತು ಆಶೀರ್ವಾದಗಳು. ಮತ್ತು ನಿನ್ನ ಆಧ್ಯಾತ್ಮಿಕ ಜೀವನದಲ್ಲಿ ಉನ್ನತಿಯನ್ನು ಹೊಂದು ಎಂಬುದೇ ನನ್ನ ಪ್ರಾರ್ಥನೆ. ನಿಜವಾಗಿಯೂ ನೀನು ಉತ್ತಮ ಕಾರ್ಯವನ್ನೇ ಮಾಡುತ್ತಿರುವೆ. ಆದರೆ ಬಂಗಾಳಿ ಭಾಷೆಯನ್ನು ಮರೆಯಬೇಡ. ಏಕೆಂದರೆ, ನೀನು ಮರಳಿ ಬಂದಾಗ ನಿನ್ನ ಮಾತುಗಳನ್ನು ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಧ್ರುವ, ಸಾವಿತ್ರಿ, ಸೀತೆ, ರಾಮ ಮೊದಲಾದವರ ಬಗ್ಗೆ ನೀನು ಅಲ್ಲಿ ಭಾಷಣ ಮಾಡುತ್ತಿರುವೆ ಎಂಬುದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ಅವರ ಪವಿತ್ರ ಜೀವನದ ಕಥೆ ಸಾಂಸಾರಿಕ ಮಾತುಕತೆ

ಗಳಿಗಿಂತ ಅತ್ಯಂತ ಶ್ರೇಷ್ಠ— ಇದು ಖಂಡಿತ. ಭಗವಂತನ ನಾಮ ಮತ್ತು ಲೀಲೆ ಎಷ್ಟು ಮನೋಹರವಾದದ್ದು!

ನಿನ್ನ ತಾಯಿ

ಶ್ರೀ ರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ರಾಮ ಕೃಷ್ಣಾನಂದರಿಗೆ ಶ್ರೀಮಾತೆಯವರು ಬರೆದ ಪತ್ರಗಳು.

ಸ್ವಾಮಿ ವಿವೇಕಾನಂದರ ಆದೇಶದಂತೆ ಸ್ವಾಮಿ ರಾಮಕೃಷ್ಣಾನಂದರು ಮದ್ರಾಸಿನಲ್ಲಿ ಶ್ರೀರಾಮಕೃಷ್ಣ ಮಠವನ್ನು ಸ್ಥಾಪಿಸಿ ಶ್ರೀರಾಮಕೃಷ್ಣರ ಭಾವಪ್ರಚಾರ ಕಾರ್ಯವನ್ನು ಕೈಗೊಂಡರು. ಶ್ರೀಮಾತೆಯವರಲ್ಲಿ ಅತ್ಯಂತ ಶ್ರದ್ಧೆ, ಭಕ್ತಿಗಳನ್ನು ಹೊಂದಿದ್ದ ಅವರು ಅವರಿಗೆ ಆಗಾಗ ಅಲ್ಲಿಯ ಕೆಲಸ, ಕಾರ್ಯಗಳ ಬಗ್ಗೆ ತಿಳಿಸಿ ಪತ್ರ ಬರೆದು ಅವರಿಂದ ಸಲಹೆ, ನಿರ್ದೇಶನಗಳನ್ನು ಪಡೆಯುತ್ತಿದ್ದರು. ಶ್ರೀಮಾತೆಯವರೂ ಅವರಿಗೆ ಪತ್ರ ಬರೆದು ಅವರ ಕ್ಷೇಮ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದರು. ಅವುಗಳಲ್ಲಿ ಕೆಲವು ಈ ಪತ್ರಗಳು:

ಪತ್ರ -೧೩

ಓಂ ಶ್ರೀರಾಮಕೃಷ್ಣ ಜಯತಿ

ಪರಮ ಶುಭಾಶೀರ್ವಾದಗಳನ್ನು ತಿಳಿಸುತ್ತಾ ,

ವಿಶೇಷವೇನೆಂದರೆ,

ನಿನ್ನ ಪತ್ರ ಇಂದು ಸಿಕ್ಕಿತು. ಮನೆಯ ಯಜಮಾನ ತೀರಿಕೊಂಡನೆಂದು ತಿಳಿದು ದುಃಖವಾಯಿತು. ಅದಕ್ಕಾಗಿ ದುಃಖಿಸುವುದು ವ್ಯರ್ಥ. ಆಳವಾಗಿ ಚಿಂತಿಸಿ ನೋಡಿದರೆ ಎಲ್ಲರದೂ ಒಂದೇ ಹಾದಿ. ಅದಕ್ಕೋಸ್ಕರ ಚಿಂತಿಸುವುದು ವ್ಯರ್ಥ. ಭಗವಂತನ ಕೃಪೆಯಿಂದ ಅವನು ಸದ್ಗತಿಯನ್ನು ಹೊಂದಲಿ. ಅದಕ್ಕಾಗಿ ನಾನು ಭಗವಂತನನ್ನು ಪ್ರಾರ್ಥಿಸುತ್ತೇನೆ. ಬಟ್ಟೆಯನ್ನು ಕಳುಹಿಸಿರುವೆ ಎಂದು ಬರೆದಿರುವೆ. ಮತ್ತು ಶ್ರೀರಾಮಕೃಷ್ಣರ (ಜಯಂತಿಯ) ಉತ್ಸವದ ಬಗ್ಗೆ ಬರೆದಿರುವೆ. ತಮ್ಮ ಕಾರ್ಯವನ್ನು ಅವರೇ ಮಾಡಿಸಿಕೊಳ್ಳುವರು. ವಸಂತ ಎಂಬ ಹೆಸರಿನ ಹುಡುಗ ಮತ್ತು ಇನ್ನೊಬ್ಬ ಹುಡುಗನೂ ಬಂದಿರುವನೆಂದು ಕೇಳಿ ಸಂತೋಷವಾಯಿತು. ಭಗವಂತನ ಕೃಪೆಯಿಂದ ಅವರಿಗೆ ಧರ್ಮಲಾಭವಾಗಲಿ ಎಂಬುದೇ ನನ್ನ ಇಚ್ಛೆ. ನಾವೆಲ್ಲಾ ಚೆನ್ನಾಗಿರುವೆವು. ನಿಮ್ಮೆಲ್ಲರ ಕುಶಲದ ಬಗ್ಗೆ ಆಗಾಗ ಎರಡು ವಾಕ್ಯ ಬರೆಯುತ್ತಿರು.

ಇತಿ ಸ್ಮರಣೆಯೊಂದಿಗೆ,

ಪತ್ರ ಪಡೆದವರ ಹೆಸರು ಮತ್ತು ವಿಳಾಸ:

Swami Ramakrishnananda
Castle Kernan, 9 Maclean
Triplicane, Madras.

ಪತ್ರ ೧೪

ಶ್ರೀ ಶ್ರೀ ಗುರುದೇವರ ಕೃಪೆ

ಜಯರಾಂಬಾಟಿ
೧೭-೯-೧೯೦೭

ಸುರಕ್ಷಿತವಾಗಿರು.
ಪರಮ ಶುಭ ಆಶೀರ್ವಾದಗಳು.

ನಿನ್ನ ಒಂದು ಪತ್ರ ಸಿಕ್ಕಿ ಎಲ್ಲಾ ಸಮಾಚಾರಗಳನ್ನು ತಿಳಿದುಕೊಂಡೆ. ನಾವೆಲ್ಲಾ ತುಂಬಾ ಚೆನ್ನಾಗಿದ್ದೇವೆ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಎರಡು ವಾಕ್ಯ ಬರೆ. ಶ್ರೀ ರಾಮಕೃಷ್ಣರ ಇಚ್ಛೆ ಮತ್ತು ನನ್ನ ಪ್ರಾರ್ಥನೆಯಂತೆ ಆದಷ್ಟು ಬೇಗ ಮಠವು ತಯಾರಾಗಲಿ. ಸ್ವಾಮೀಜಿಗಾಗಿ ಇನ್ನು ಯಾವುದೇ ಚಿಂತೆ ಮಾಡಬೇಡ. ದೀನು ಬಾಬು, ವಸಂತ, ಬ್ರಹ್ಮಚಾರಿ, ನೀನು ಎಲ್ಲರಿಗೂ ನನ್ನ ಆಶೀರ್ವಾದಗಳು. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಎರಡು ಮಾತು ಬರೆ.

ಇತಿ,

ನಿಮ್ಮೆಲ್ಲರ ತಾಯಿಯ ಆಶೀರ್ವಾದದ ಪತ್ರ

ಪತ್ರ ಪಡೆದವರ ಹೆಸರು ಮತ್ತು ವಿಳಾಸ:

Swami Ramakrishnanandaji
Castle Kernan, 9 Maclean
Triplicane, Madras.

ಪತ್ರ ೧೫

ಶ್ರೀ ಶ್ರೀ ಗುರುದೇವರ ಕೃಪೆ ೯-೧೦-೧೯೦೭

ದೀರ್ಘಾಯುವಾಗು.

ಪರಮ ಶುಭಾಶೀರ್ವಾದ ನೀಡುತ್ತಾ ವಿಶೇಷವೇನೆಂದರೆ,


ಮಗು, ನೀನು ಅಂಚೆಯ ಮೂಲಕ ಕಳುಹಿಸಿರುವ ಬಟ್ಟೆ (ಸೀರೆ) ಮತ್ತು ಪತ್ರ ಸಿಕ್ಕಿತು. ಬಟ್ಟೆಯನ್ನು ನೋಡಿ ಅತ್ಯಂತ ಸಂತೋಷ ವಾಯಿತು. ಈಗ ನಾನು ಚೆನ್ನಾಗಿದ್ದೇನೆ.ಯಾವ ಕಾಯಿಲೆಯೂ ಇಲ್ಲ. ಸಾರದಾ (ಸ್ವಾಮಿ ತ್ರಿಗುಣಾತೀತಾನಂದ) ಭಗವಂತನ ಕೃಪೆಯಿಂದ ಮತ್ತು ಶ್ರೀರಾಮಕೃಷ್ಣರ ಆಶೀರ್ವಾದದಿಂದ ವಿಜಯಿಯಾಗಲಿ ಮತ್ತು ಯಾವ ವಿಘ್ನವೂ ಉಂಟಾಗದಿರಲಿ ಎಂದು ನಾನು ಆಶೀರ್ವಾದ ಮಾಡುತ್ತಿರುವೆ. ನಿನಗೂ ಮತ್ತು ದೀನಬಂಧು ಮೊದಲಾದವರಿಗೂ ನನ್ನ ಆಶೀರ್ವಾದ. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಬರೆಯುತ್ತಿರು. ಇತಿ,

ಆಶ್ವಯುಜ ೨೩ನೇ ದಿನ, ಆಶೀರ್ವಾದ ಪತ್ರ

ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ:

Swami Ramakrishnanandaji
The Math, P.O. Belur
Dt. Howrah, Bengal



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೮

ಖಗೇನ್, ಹರಿಪದ, ಸುಧೀರ್, ಸುಶೀಲ್ ಮುಂತಾದ ಆಧ್ಯಾತ್ಮಿಕ ಸ್ನೇಹಿತರು ಇಷ್ಟು ದಿನಗಳ ನಂತರ ಕಾಳೀಕೃಷ್ಣನನ್ನು ಮನೆಯಲ್ಲಿ ಕಂಡು, ಪ್ರತಿದಿನವೂ ಸಂಜೆಯ ವೇಳೆಗೆ ಬಂದು ಅವನ ಬಳಿ ಮಾತನಾಡಿ ಹೋಗುತ್ತಿದ್ದರು. ಕಾಳೀಕೃಷ್ಣನು ಮಠದಲ್ಲೇ ಇದ್ದು ಬಂದದ್ದರಿಂದ, ಅಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಕೇಳಿದ್ದ ಹೊಸ ಸಂಗತಿಗಳನ್ನು ತನ್ನ ಸ್ನೇಹಿತರಿಗೆ ಹೇಳುತ್ತಿದ್ದನು. ಎಲ್ಲರೂ ತನ್ಮಯರಾಗಿ ಅದನ್ನು ಕೇಳುತ್ತಿದ್ದರು. ಶ್ರೀರಾಮಕೃಷ್ಣರ ಭಕ್ತನಾದ 'ಹುಟ್ಕೋ ಗೋಪಾಲ'ನ [೧] ಮನೆ ಕೂಡ ಕಾಳೀಕೃಷ್ಣನ ಮನೆಯ ಹತ್ತಿರವೇ ಇತ್ತು. ಅವನೂ ಸಹ ಈ ಗುಂಪಿನೊಂದಿಗೆ ಸೇರಿ ಕಾಶೀಪುರದ ತೋಟದ ಮನೆ ಹಾಗೂ ವರಾಹನಗರದ ಪ್ರಾರಂಭದ ದಿನಗಳ ಅನೇಕ ವಿಷಯಗಳನ್ನು ಹೇಳುತ್ತಿದ್ದ. ಈ ರೀತಿ ೨-೩ ಗಂಟೆಗಳು ಕಳೆದದ್ದೇ ತಿಳಿಯುತ್ತಿರಲಿಲ್ಲ. ಜಪ-ಧ್ಯಾನದ ಸಮಯವು ಈ ರೀತಿ ಕಳೆದು ಹೋಗುತ್ತಿದ್ದುದರಿಂದ ಕಾಳೀಕೃಷ್ಣನು ತನ್ನ ನಿರ್ದಿಷ್ಟ ಸಂಖ್ಯೆಯ ಜಪವನ್ನು ಪೂರ್ಣಗೊಳಿಸಲು ರಾತ್ರಿ ಬಹಳ ಹೊತ್ತು ಹಿಡಿಯುತ್ತಿತ್ತು. ಇದರಿಂದಾಗಿ ತನಗೆ ಕಷ್ಟವಾಗುತ್ತಿದೆಯೆಂದು ಕಾಳೀಕೃಷ್ಣನು ತನ್ನ ಸ್ನೇಹಿತರಿಗೆ ಮನಬಿಚ್ಚಿ ಹೇಳಿದನು. ಆಗ ಎಲ್ಲರೂ ಸೇರಿ, ಯಾರಾದರೂ ಕಾಳೀಕೃಷ್ಣನನ್ನು ನೋಡಲು ಬಂದರೆ, ಐದು ನಿಮಿಷಕ್ಕಿಂತ ಜಾಸ್ತಿ ಮಾತುಕತೆ ನಡೆಸಬಾರದು ಎಂಬ ನಿರ್ಧಾರಕ್ಕೆ ಬಂದರು. ಆದರೆ ಅದನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿರಲಿಲ್ಲ. ಆದರೆ ಅಂದಿನಿಂದ ಮಾತುಕತೆಯ ವಿಷಯದಲ್ಲಿ ಇವನ ಸಮಯ ಅರ್ಧ ಗಂಟೆಯನ್ನು ಮೀರುತ್ತಿರಲಿಲ್ಲ. ಅವನು ಸಂಕಲ್ಪಿಸಿದ್ದಂತೆ ದಿನವೂ ಜಪ-ಧ್ಯಾನಗಳು ಸಾಂಗವಾಗಿ ನಡೆಯತೊಡಗಿದವು. ಆ ಸಮಯದಲ್ಲಿ ಕಾಳೀಕೃಷ್ಣನಿಗೆ ಜಪ-ಧ್ಯಾನದಲ್ಲಿ ಒಂದು ರೀತಿಯ ತನ್ಮಯತೆ ಬಂದಿತ್ತು. ಮುಂದೊಮ್ಮೆ ಮಾತಿನ ನಡುವೆ ಹೀಗೆ ಹೇಳಿದ್ದನು, ''ಆ ರೀತಿಯ ಸಾಧನೆಯನ್ನು ಜೀವನದಲ್ಲಿ ಸ್ವಲ್ಪ ಕಾಲ ಮಾತ್ರ ಮಾಡಿರುವೆ ಎಂದೆನಿಸುತ್ತದೆ.'' ಎಲ್ಲಿ ಜಪ-ಧ್ಯಾನದ ಸಮಯ ಕಡಿಮೆಯಾಗಿ ಬಿಡುವುದೋ ಎಂದು ಮಠಕ್ಕೆ ಹೋಗುವುದು ಹಾಗಿರಲಿ, ಶ್ರೀಮಾತೆಯವರ ದರ್ಶನಕ್ಕೂ ಸಹ ಅವನು ಹೆಚ್ಚಾಗಿ ಹೋಗುತ್ತಿರಲಿಲ್ಲ.

ಕೆಲವೊಮ್ಮೆ ಆಲಂಬಜಾರ್ ಮಠದಿಂದ ಸಂನ್ಯಾಸಿಗಳು ಕಾಳೀಕೃಷ್ಣನನ್ನು ನೋಡಲು ಬರುತ್ತಿದ್ದರು. ಒಮ್ಮೆ ಬಹಳ ದಿನಗಳಿಂದ ಕಾಳೀಕೃಷ್ಣನು ಮಠಕ್ಕೆ ಹೋಗದ್ದರಿಂದ ಅವನು ಕೋಪಿಸಿಕೊಂಡಿದ್ದಾನೆಂದು ಶರತ್ ಮಹಾರಾಜರು ಭಾವಿಸಿದರು. ಒಂದು ಸಂಜೆ ಕಾಳೀಕೃಷ್ಣನು ತನ್ನ ಕೊಠಡಿಯಲ್ಲಿ ಜಪ-ಧ್ಯಾನಗಳಲ್ಲಿ ನಿರತನಾಗಿದ್ದಾಗ, ಹೊರಗಿನಿಂದ ಸ್ತ್ರೀ ಕಂಠದಂತಹ ಮೃದು ಧ್ವನಿಯೊಂದು, 'ಕಾಳೀಕೃಷ್ಣ ಕಾಳೀಕೃಷ್ಣ' ಎಂದು ಕರೆಯುತ್ತಿರುವುದು ಕೇಳಿಸಿತು. ಹೊರಗೆ ಬಂದು ನೋಡಿದರೆ ಶರತ್ ಮಹಾರಾಜರು. (ಅವರ ಕಂಠ ಉಚ್ಚಸ್ವರದ್ದಾಗಿತ್ತು.) ಕಾಳೀಕೃಷ್ಣನನ್ನು ಕಂಡು ಶರತ್ ಮಹಾರಾಜರು ಅವನನ್ನು ಎದೆಗಪ್ಪಿಕೊಂಡರು. ಕಾಳೀಕೃಷ್ಣನೂ ಅಳಲಾರಂಭಿಸಿದ. ಹೀಗೆಯೇ ಬಾಬುರಾಮ್ ಮಹಾರಾಜ್, ಖೋಕಾ ಮಹಾರಾಜ್, ನಿರಂಜನ್ ಮಹಾರಾಜ್, ಶಾರದಾ ಮಹಾರಾಜ್ ಮುಂತಾದವರು ಕಾಳೀಕೃಷ್ಣನಿದ್ದ ನಾರಿಕೇಲ್ ಡಂಗಾದ ಮನೆಗೆ ಒಂದೆರಡು ಸಲ ಹೋಗಿ ಬಂದಿದ್ದರು. ಹೀಗೆ ಅವರು ಬಂದಾಗಲೆಲ್ಲ ಕಾಳೀಕೃಷ್ಣನ ತಾಯಿ ಅವರನ್ನು ತುಂಬ ಉಪಚರಿಸಿ, ಏನನ್ನಾದರೂ ತಿನ್ನಿಸುತ್ತಿದ್ದರು.

ಹೀಗೆ ನಿರಂತರ ಸಾಧನೆಯ ಆವೇಗದಲ್ಲಿ ಸುಮಾರು ೧೪-೧೫ ತಿಂಗಳು ಕಳೆದುಹೋದವು. ಅಷ್ಟರಲ್ಲಿ ಅದೆಂತಹ ವಿಘ್ನಗಳು ಬಂದವೆಂದರೆ, ಕಾಳೀಕೃಷ್ಣನ ಮನಸ್ಸು ಇದರಿಂದಾಗಿ ನಾನಾ ರೀತಿಯ ಅಶಾಂತಿಯಿಂದ ಬಳಲತೊಡಗಿತು. ಅದೇನೆಂದರೆ – ಇಷ್ಟು ದಿನವೂ ಅವನ ತಾಯಿ, ತಂದೆಯರು ಅವನ ಸಾಧನೆಯ ಪಥದಲ್ಲಿ ಸ್ವಾತಂತ್ರ್ಯವನ್ನಿತ್ತಿದ್ದರು; ಎಂದೂ ಮನೆಯ ಯಾವ ಕೆಲಸವನ್ನೂ ಹೇಳುತ್ತಿರಲಿಲ್ಲ. ಆದರೆ ಬಹಳ ದಿನಗಳಿಂದ ಮಗ ತಮ್ಮ ಬಳಿಯಲ್ಲೇ ಉಳಿದುಕೊಂಡಿದ್ದರಿಂದ, ತಾಯಿತಂದೆಗಳಿಗೆ

---

[೧] ಆತನ ಪೂರ್ತಿ ಹೆಸರು ಗೋಪಾಲಚಂದ್ರ ಘೋಷ್. ಶ್ರೀರಾಮಕೃಷ್ಣರು ಕಾಶೀಪುರದ ತೋಟದಲ್ಲಿ ಇದ್ದಾಗಿನಿಂದ ಇವನು ಅವರಲ್ಲಿಗೆ ಹೋಗಿ ಬರಲಾರಂಭಿಸಿದ್ದ. ಅವನಿಗೆ ಸ್ವಾಮೀಜಿ ಬಗ್ಗೆ ಬಹಳ ಪ್ರೀತ್ಯಾದರ ಇತ್ತು ಮತ್ತು ಅವರ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದ. ಸ್ವಾಮೀಜಿಯೇ ಇವನಿಗೆ 'ಹುಟ್ಕೋ' ಹೆಸರನ್ನು ಕೊಟ್ಟಿದ್ದರು. ಕಾರಣ, ಇವನು ಯಾವಾಗಲೆಂದರೆ ಆಗ 'ಹುಟ್' ಎಂದು ಪ್ರತ್ಯಕ್ಷನಾಗಿ, ಮತ್ತೆ ಯಾರಿಗೂ ಹೇಳದೇ ಕೇಳದೇ 'ಹುಟ್' ಎಂದು ಮಾಯವಾಗುತ್ತಿದ್ದ. ಶ್ರೀರಾಮಕೃಷ್ಣರ ಸಮಾಧಿಯ ನಂತರ ಸ್ವಾಮೀಜಿಯ ಮಾತಿನ ಮೇರೆಗೆ ಸುರೇಂದ್ರನಾಥ ಮಿತ್ರನು ಇವನಿಗೆ ಒಂದು ಆಫೀಸಿನಲ್ಲಿ ಕೆಲಸ ಕೊಡಿಸಿದ್ದ. ಇವನ ಮುಖ್ಯ ಕೆಲಸವೇನೆಂದರೆ ವರಾಹನಗರ ಮಠದ ಸಂನ್ಯಾಸಿಗಳ ಸುದ್ದಿ- ಸಮಾಚಾರವನ್ನು ಸುರೇಂದ್ರನಿಗೆ ಬಂದು ಹೇಳುವುದು. ಹುಟ್ಕೋ ಗೋಪಾಲನು ಮಠಕ್ಕೆ ಬಂದು ಉಗ್ರಾಣದ ಜಾಡಿ-ಮಡಕೆಗಳನ್ನು ತೆಗೆದು ಏನಿದೆ ಏನಿಲ್ಲವೆಂಬುದನ್ನು ನೋಡಿಕೊಂಡು, ಸುರೇಂದ್ರನು ಕೊಟ್ಟ ಹಣದಿಂದ ಬೇಕಾದ್ದನ್ನು ಮಾರುಕಟ್ಟೆಯಿಂದ ಕೊಂಡು ತರುತ್ತಿದ್ದನು. ಅವನಿಗೆ ಮಠಕ್ಕೆ ಸೇರಲು ಬಹಳ ಇಚ್ಛೆಯಿದ್ದಿತಾದರೂ ವಯಸ್ಸಾದ ತಾಯಿಯ ಸೇವೆ ಹಾಗೂ ಇನ್ನಿತರ ಸಾಂಸಾರಿಕ ಜಂಜಾಟಗಳಿಂದಾಗ ಆತನ ಇಚ್ಛೆ ಪೂರೈಸಲಿಲ್ಲ. ಸ್ವಾಮೀಜಿಯವರು ಅಮೇರಿಕಾದಿಂದ ತಮ್ಮ ಗುರುಭಾಯಿಗಳಿಗೆ ಕೆಲವು ಬರೆದ ಪತ್ರಗಳಲ್ಲಿ 'ಹುಟ್ಕೋ'ನ ಬಗ್ಗೆ ವಿಚಾರಿಸಿದ್ದು ಕಂಡುಬರುತ್ತದೆ.

ಇರುವ ಸುಪ್ತವಾದ ಬಾಧ್ಯತೆಯು ಅವನ ಮೇಲೆ ಸಹಜವಾಗಿ ಜಾಗ್ರತಗೊಂಡಿತು. ತಂದೆಯು ಚಿಕಿತ್ಸಾಲಯದ ಕೆಲಸ ಮುಗಿಸಿ ಬರಲು ರಾತ್ರಿ ಹನ್ನೆರಡಾಗುತ್ತಿತ್ತು. ಕಾಳೀಕೃಷ್ಣನು ಇನ್ನೂ ಮಲಗಿಲ್ಲದ್ದನ್ನು ಕಂಡು ತಾಯಿ ಅವನಿಗೆ ತಂದೆಯ ಊಟಕ್ಕೆ ಅಣಿ ಮಾಡಲು ಹೇಳುತ್ತಿದ್ದಳು – ಊಟಕ್ಕೆ ಆಸನ ಹಾಕುವುದು, ತಟ್ಟೆ ತಂದಿಡುವುದು, ನೀರಿನ ಲೋಟ ಇಡುವುದು, ತಂದೆಗೆ ಸ್ವಲ್ಪ ಗಾಳಿ ಹಾಕುವುದು ಇತ್ಯಾದಿ ಸಣ್ಣ-ಪುಟ್ಟ ಕೆಲಸ ಮಾಡಲು ಹೇಳುತ್ತಿದ್ದಳು. ತಂದೆಯೂ ಸಹ ಊಟದ ನಂತರ ಸ್ವಲ್ಪ ಅಂಗಮರ್ದನ ಮಾಡಲೋ, ದಿನಪತ್ರಿಕೆಯನ್ನು ಓದಿ ಹೇಳಲೋ[೨] ಹೇಳುತ್ತಿದ್ದನು. ಕಾಳೀಕೃಷ್ಣನು ಅವರ ಮಗನೇನೋ ನಿಜ; ಹೆತ್ತವರು ಅವನಿಂದ ಅಲ್ಪಸ್ವಲ್ಪ ಸೇವೆಯನ್ನು ಆಶಿಸಿದರೆ ಅದು ಅನುಚಿತವೇನಲ್ಲ. ಆದರೆ ಆಗ ಕಾಳೀಕೃಷ್ಣನು ಸಾಧನೆಯಲ್ಲಿ ಎಷ್ಟೊಂದು ಮುಳುಗಿ ಹೋಗಿದ್ದನೆಂದರೆ, ಈ ರೀತಿಯ ಕೆಲಸಗಳಲ್ಲಿ ಕೆಲವು ಗಂಟೆಗಳು ಕಳೆದು ಹೋದರೆ ಅವನು ಬಹಳ ಅಶಾಂತಿಯನ್ನು ಅನುಭವಿಸುತ್ತಿದ್ದ. ತಾಯಿಗೆ ಎಲ್ಲವನ್ನೂ ಬಿಡಿಸಿ ಹೇಳಿದ. ಆದರೆ ತ್ರೈಲೋಕ್ಯನೆಲ್ಲಿ ಕೋಪಗೊಳ್ಳುವನೋ ಎಂದು ಹೆದರಿ, ತಾಯಿ ಆತನಿಗೆ ಈ ವಿಷಯವಾಗಿ ಏನನ್ನೂ ಹೇಳಲಾಗಲಿಲ್ಲ.

ಇದಲ್ಲದೆ, ಮಾನಸಿಕ ಅಸ್ವಸ್ಥತೆಗೆ ಕಾರಣವಾಗುವಂತಹ ಮತ್ತೊಂದು ಸಂದರ್ಭವೂ ಬಂದೊದಗಿತು. ತಂದೆ ತ್ರೈಲೋಕ್ಯನು ತನ್ನ ನಾರಿಕೇಲ್‌ಡಂಗಾದ ಮನೆಗೆ ಒಂದು ಮೈಲಿ ದೂರದಲ್ಲಿ ತೋಟದ ಜಮೀನೊಂದನ್ನು ಕೊಂಡುಕೊಂಡಿದ್ದನು. ಮನೆಗೆ ಬೇಕಾದ ತಾಜಾ ಹಣ್ಣು-ತರಕಾರಿಗಳನ್ನು ಬೆಳೆಯುವುದೇ ಅದರ ಉದ್ದೇಶ. ಆ ಸ್ಥಳವು ತುಂಬ ನಿರ್ಜನವಾಗಿತ್ತು. ಅಲ್ಲಿ ಎರಡು ಪುಷ್ಕರಣಿಗಳೂ, ಒಂದು ಕೊಠಡಿ ಹಾಗೂ ಅದರ ಮುಂದೆ ವರಾಂಡಾ ಇರುವ ಇಟ್ಟಿಗೆಯ ಮನೆಯೂ ಇತ್ತು. ಒಂದು ದಿನ ತ್ರೈಲೋಕ್ಯನಾಥನು ಕಾಳೀಕೃಷ್ಣನನ್ನು ಕರೆದು, ''ನೀನು ಹೇಗಿದ್ದರೂ ಏಕಾಂತದಲ್ಲಿ ಸಾಧನೆ ಮಾಡಲು ಇಚ್ಛಿಸುವೆ. ಒಂದು ವೇಳೆ ನೀನು ಊಟದ ನಂತರ ದಿನವೂ ತೋಟಕ್ಕೆ ಹೋಗಿ ಅಲ್ಲಿಯೇ ಸಂಜೆಯವರೆಗೂ ಇರುವುದಾದರೆ ನಿನ್ನ ಸಾಧನೆಗೂ ಅನುಕೂಲವಾಗುತ್ತದೆ, ಮಾಲಿಯೂ ಆಲಸ್ಯ ಮಾಡುವುದು ತಪ್ಪುತ್ತದೆ. ಅಷ್ಟೇ ಅಲ್ಲದೆ, ನೀನೂ ಸಹ ಅವನಿಗೆ ಸ್ವಲ್ಪ direction (ಸಲಹೆ) ನೀಡಬಹುದು. ಇದರಿಂದ ನಿನಗೆ ವಿಶೇಷ ಹಾನಿಯೇನೂ ಆಗುವುದಿಲ್ಲವಲ್ಲ!'' ಎಂದು ಕೇಳಿದರು. ಕಾಳೀಕೃಷ್ಣನು ಸಹ ತಂದೆಯ ಪ್ರಸ್ತಾವಕ್ಕೆ ಒಪ್ಪಿದನು; ಹಾಗೆಯೇ ಮಾಡಲಾರಂಭಿಸಿದನು. ಕೆಲವೊಮ್ಮೆ ಊಟವನ್ನು ತೆಗೆದುಕೊಂಡು ಹೋಗಿ ರಾತ್ರಿಯನ್ನೂ ತೋಟದಲ್ಲೇ ಕಳೆಯುತ್ತಿದ್ದನು. ಇವರ ಬಳಗದ ಖಗೇನ್ ಮುಂತಾದವರೂ ಆಗಾಗ ಬಂದಿದ್ದು ರಾತ್ರಿ ಅಲ್ಲೇ ಕಳೆಯುತ್ತಿದ್ದರು. ಹಾಗೆ ಬಂದಾಗ ಕಿಚಡಿ ತಯಾರು ಮಾಡಿ ತಿನ್ನುತ್ತಿದ್ದರು. ಹಾಡು-ಸಂಕೀರ್ತನೆಗಳಲ್ಲಿ ಮಗ್ನರಾಗುತ್ತಿದ್ದರು; ಜಪ-ಧ್ಯಾನಗಳನ್ನೂ ಸಹ ಬಹಳವಾಗಿಯೇ ಮಾಡುತ್ತಿದ್ದರು. ತೋಟದ ಮನೆಯಲ್ಲಿ ಹಿಂದಿನ ಮಾಲೀಕನಿಗೆ ಸೇರಿದ ಕಾಳೀಮಾತೆಯ ಸುಂದರವಾದ ಚಿತ್ರಪಟವೊಂದಿತ್ತು. ಅದರಲ್ಲಿ ಚಿತ್ರಕಾರನು ತಾಯಿಯ ರುದ್ರ ಹಾಗೂ ಕೋಮಲ ಭಾವಗಳನ್ನು ಜೊತೆ ಜೊತೆಗೇ ಚಿತ್ರಿಸಿದ್ದನು. ತಾಯಿಯು ಹೇಗೆ ಕರುಣಾಮಯಿಯೋ ಪ್ರೇಮರೂಪಿಣಿಯೋ ಹಾಗೆಯೇ ರುದ್ರಭೀಷಣಳೂ ಸಹ. ಈ ಚಿತ್ರವು ಕಾಳೀಕೃಷ್ಣನ ಮನದಲ್ಲಿ ಚಿರಮುದ್ರೆಯನ್ನೊತ್ತಿತ್ತು.

ಮೊದಮೊದಲು ಕಾಳೀಕೃಷ್ಣನು ತೋಟದ ವಿಷಯದಲ್ಲಿ ಅಲ್ಪಸ್ವಲ್ಪ ನೋಡಿಕೊಳ್ಳುವುದನ್ನು ಬಿಟ್ಟು ವಿಶೇಷವಾಗಿ ತಲೆಯನ್ನೇನೂ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಬಾಲ್ಯದಿಂದಲೂ ಇದ್ದಂತಹ ತೋಟದ ಹವ್ಯಾಸ, ಅಭಿರುಚಿಗಳು ಈಗ ಅನುಕೂಲ ಸಂದರ್ಭ ಪಡೆದು ಮತ್ತೆ ತಲೆಯೆತ್ತಿ ನಿಂತಿತು. ಹೀಗಾಗಿ ಕ್ರಮೇಣ ತೋಟದ ಕೆಲಸವನ್ನು ತನ್ನ ಮೇಲೆ ಹಾಕಿಕೊಳ್ಳಲಾರಂಭಿಸಿದ. ಒಮ್ಮೊಮ್ಮೆ ತಂದೆಯೂ ಮಾಲಿಯಿಂದ ಅದನ್ನೋ ಇದನ್ನೋ ಮಾಡಿಸಲು ಹೇಳುತ್ತಿದ್ದರು. ಇದರಿಂದಾಗಿ ತುಂಬಾ ಸಮಯ ವ್ಯಯವಾಗುತ್ತಿತ್ತು. ಕೊನೆಗೆ ಹೇಗಾಯಿತೆಂದರೆ, ಧ್ಯಾನ ಮಾಡಲು ಕುಳಿತರೆ ತೋಟದ ಕೆಲಸಕಾರ್ಯಗಳ ಯೋಚನೆಯೇ ಬರಲಾರಂಭಿಸಿತು; ಧ್ಯಾನ ಮಾಡುತ್ತ ಒಮ್ಮೊಮ್ಮೆ ಎದ್ದುಹೋಗಿ, ಕೆಲಸದ ಮೇಲುಸ್ತುವಾರಿ ಮಾಡಿ ಬರಬೇಕಾಗುತ್ತಿತ್ತು. ಸಾಧನೆ ಭಜನೆಗಳಲ್ಲಿ ಮೊದಲಿಗೆ ಇದ್ದ ಆ ನಿಷ್ಠೆ ಮತ್ತು ಏಕತಾನತೆ ಈಗ ಶಿಥಿಲವಾದಂತಾಯಿತು. ಅಲ್ಲದೆ ರಾತ್ರಿ ಮನೆಗೆ ಬಂದಾಗ ಹಿಂದೆ ಹೇಳಿದಂತಹ ತಂದೆಯ ಕೆಲಸಗಳು ಇದ್ದೇ ಇರುತ್ತಿದ್ದವು.

ಶ್ರೀರಾಮಕೃಷ್ಣರು ಉದಾಹರಿಸಿದಂತಹ 'ಕೋಟೆಯ ಇಳಿಜಾರು ರಸ್ತೆ'ಯು ಪಯಣಿಗನನ್ನು ಗೊತ್ತಾಗದಂತೆ ತಳಕ್ಕೆ ಕರೆದೊಯ್ಯುವಂತೆ, ತಾನೂ ನಿಧಾನವಾಗಿ ಸಂಸಾರದಲ್ಲಿ ಬದ್ಧನಾಗುತ್ತಿರುವುದನ್ನು ನೋಡಿ ಕಾಳೀಕೃಷ್ಣನ ವಿವೇಕವು ಎಚ್ಚೆತ್ತುಕೊಂಡಿತು. ಗೀತೆಯಲ್ಲಿ ಹೇಳಿರುವ 'ಸಂಗಾತ್ ಸಂಜಾಯತೇ ಕಾಮಃ' ಎಂದರೆ ಇದೇ ಅಲ್ಲವೇ, ಎಂದುಕೊಂಡನು. 'ನಾನು ಮನೆಗೆ ಬಂದುದು ಇದಕ್ಕೇ ಏನು? ಶ್ರೀಮಾತೆಯವರು ಹೇಳಿದಂತೆ ನಡೆಯಲಾಗುತ್ತಿಲ್ಲವಲ್ಲ, ನಾನಾ ಪ್ರಕಾರದ ಮಾಯೆ, ಮೋಹಾಸಕ್ತಿಗಳು ಇಲ್ಲಿ ಬಂದು ಮುತ್ತುತ್ತಿವೆ. ಇಲ್ಲ! ಇನ್ನು ಸಾಧ್ಯವಿಲ್ಲ! ಈ ಬಂಧನಗಳನ್ನು ಬಲವಂತವಾಗಿ ಕಿತ್ತೊಗೆಯಲೇಬೇಕು' ಎಂದು ತೀರ್ಮಾನಿಸಿದನು. ಮಠದವರಿಗೆ ಎಲ್ಲವನ್ನೂ ವಿವರಿಸ

---

[೨] ಸ್ವಾಮೀಜಿಯವರು ಅಮೇರಿಕಾದಲ್ಲಿ ನೀಡಿದ ಭಾಷಣ, ಸಂಭಾಷಣೆ ಇತ್ಯಾದಿಗಳು 'ಇಂಡಿಯನ್ ಮಿರರ್' ಎಂಬ ಪತ್ರಿಕೆಯಲ್ಲಿ ಆಗ ನಿಯಮಿತವಾಗಿ ಪ್ರಕಟವಾಗುತ್ತಿದ್ದವು. ಅವುಗಳನ್ನೂ ತ್ರೈಲೋಕ್ಯನು ಕೇಳಲಿಚ್ಛಿಸುತ್ತಿದ್ದನು; ಕಾಳೀಕೃಷ್ಣನೂ ಓದಿಹೇಳುತ್ತಿದ್ದನು. ತ್ರೈಲೋಕ್ಯನು ಸ್ವಾಮೀಜಿಯವರನ್ನು ಬಾಲ್ಯದಿಂದಲೂ ನೋಡಿದ್ದನು. ಸಿಮ್ಲಾದಲ್ಲಿ ಇವನ ಮನೆಯು ಸ್ವಾಮೀಜಿ ಮನೆಯ ಹತ್ತಿರವೇ ಇತ್ತು. ಇವನ ಒಬ್ಬ ತಮ್ಮ ಅಮೃತಲಾಲ್ ಬಸು; ಸ್ವಾಮೀಜಿಯವರ ಸಹಪಾಠಿ. ತ್ರೈಲೋಕ್ಯನಾಥನು ಕೆಲವು ದಿನ ಕೇಶವಚಂದ್ರ ಸೇನನ ಮನೆಯ (ಲಿಲಿ ಕಾಟೇಜ್) ಗೃಹಚಿಕಿತ್ಸಕನಾಗಿದ್ದ. ಬಹುಶಃ ಅಲ್ಲಿ ತ್ರೈಲೋಕ್ಯನು ಶ್ರೀರಾಮಕೃಷ್ಣರನ್ನೂ ಕಂಡಿದ್ದಿರಬಹುದು. ಕಾಳೀಕೃಷ್ಣನು ಗೃಹತ್ಯಾಗ ಮಾಡಿದ ನಂತರ ಹಾಗೂ ವರಾಹನಗರದ ಮಠದಿಂದ ಸಂನ್ಯಾಸಿಗಳು ಇವನ ಮನೆಗೆ ಬಂದು ಹೋಗುತ್ತಿದ್ದುದರ ಫಲವಾಗಿ ತ್ರೈಲೋಕ್ಯನಿಗೆ ಕ್ರಮೇಣ ಧಾರ್ಮಿಕ ವಿಷಯಗಳಲ್ಲಿ ಆಕರ್ಷಣೆ ಹೆಚ್ಚಾಗಿತ್ತು.

ಲಾಗಿ, ಅವರು ಕೆಲವು ದಿನಗಳ ಮಟ್ಟಿಗೆ ಕೊಲ್ಕತ್ತಾದಿಂದ ದೂರ ಹೋಗಿ ಇರಬೇಕೆಂದು ಸಲಹೆಯಿತ್ತರು. ಸ್ವಾಮಿ ಪ್ರೇಮಾನಂದರು ಆಗ ಬೃಂದಾವನದಲ್ಲಿದ್ದರು. ಅವರೊಂದಿಗಿದ್ದು ಸಾಧನೆಯನ್ನು ಮುಂದುವರಿಸು ಎಂದು ಕೆಲವರು ಹೇಳಿದರು. ಈ ಸಲಹೆಯು ಕಾಳೀಕೃಷ್ಣನಿಗೆ ತುಂಬ ಹಿಡಿಸಿತು. ಶ್ರೀಮಾತೆಯವರ ಅನುಮತಿ ಕೋರಿ, ಆಶೀರ್ವಾದ ಬೇಡಿ, ಅವರಿಗೆ ತನ್ನೆಲ್ಲಾ ಅಶಾಂತಿ-ಅಡೆತಡೆಗಳ ವಿಚಾರವನ್ನು ತೋಡಿಕೊಂಡು ವಿಸ್ತಾರವಾಗಿ ಪತ್ರ ಬರೆದನು. ಆ ಪತ್ರದಿಂದ ಆಯ್ದ ಭಾಗ ಹೀಗಿದೆ:

ನಂ. ೩೯, ನಾರಿಕೇಲ್‌ಡಾಂಗಾ ಮೇನ್‌ರೋಡ್,
ಕೊಲ್ಕತಾ.

೧೪ ಆಶ್ವಯುಜ ೧೩೦೨[೩]

ಪರಮಪೂಜ್ಯರೂ, ಪರಮಾರಾಧ್ಯರೂ ಆದ ಶ್ರೀಮಾತೆಯವರ ಚರಣಗಳಲ್ಲಿ-

ಪೂಜ್ಯ ಮಾತೆ, ಹಿಂದೆ ನಾನು ಮಲೇರಿಯಾದಿಂದ ನರಳುತ್ತಿದ್ದುದರಿಂದ ನೀವು ದುಃಖಪಟ್ಟು, ಮತ್ತು ಇನ್ನಿತರ ಕಾರಣಕ್ಕಾಗಿ ನಾನು ಮನೆಗೆ ಹೋಗಿ ಅಲ್ಲಿದ್ದರೆ ಆನಂದದಿಂದಿರಬಹುದೆಂದು ಭಾವಿಸಿ, ಹಾಗೇ ಮಾಡಲು ಹೇಳಿದಿರಿ. ಆಗ ನನ್ನ ಮೇಲೆ ಎಷ್ಟೊಂದು ಕೃಪೆಯ ಮಳೆಗರೆದಿರಿ! ನಾನೂ ಮನೆಗೆ ಬಂದು ಮೊದಲ ವರ್ಷವನ್ನು ನಿಮ್ಮ ಮಾತಿನಂತೆಯೇ ಸಾಕಷ್ಟು ಸಾಧನೆ ಮಾಡುತ್ತ ಕಳೆದೆ. ಆಗ ನನ್ನ ಸ್ವಲ್ಪ ಸಮಯ ವೃಥಾ ನಷ್ಟವಾಗುತ್ತಿರಲಿಲ್ಲ... ಈಗಂತೂ ೫-೬ ಗಂಟೆಗಳ ಸಮಯವೂ ದೊರೆಯದು; ಮೂವತ್ತು ಸಾವಿರ ಜಪ ಕೂಡ ಮಾಡಲಾಗುತ್ತಿಲ್ಲ. ಹಿಂದೆ ತುಂಬ ಜಪ ಮಾಡುತ್ತಿದ್ದೆ. ನನ್ನ ಮನಸ್ಸಿಗೆ ಅಷ್ಟೊಂದು ಸಾಮರ್ಥ್ಯವಿತ್ತು. ಆದರೆ ಈಗ ಅದು ಅತ್ಯಂತ ದುರ್ಬಲವಾಗಿದ್ದು, ಹಲವು ಬಗೆಯ ಆಸಕ್ತಿಗಳಿಂದ ನನ್ನನ್ನು ಕುಣಿಸುತ್ತಿದೆ ಹಾಗೂ ಅಧ್ಯಾತ್ಮ ಭಾವ ಒಮ್ಮೆಗೇ ಕಳೆದುಹೋದಂತಾಗಿದೆ..... ಅಮ್ಮಾ, ನೀವು ಅನುಮತಿ ನೀಡುವುದಾದರೆ ನಾನು ಈಗಲೇ, ಒಬ್ಬನೇ ಬೃಂದಾವನಕ್ಕೆ ಹೊರಡುವೆ. ಅಲ್ಲಿ ಬಾಬುರಾಮ ಬಾಬು[೪] ಮತ್ತು ಸುಬೋಧ ಬಾಬು ಇದ್ದಾರೆ. ಬಲರಾಮ ಬಾಬುವಿನ ಕುಂಜದಲ್ಲಿ (ಗೃಹ ದೇವಾಲಯದಲ್ಲಿ) ಊಟ, ವಸತಿಗೇನೂ ತೊಂದರೆಯಿಲ್ಲ. ನಾನು ಅವರೊಂದಿಗಿದ್ದರೆ ಯಾವ ಕಷ್ಟವೂ ಆಗದು. ಅಲ್ಲದೆ, ನಾನೇನೂ ಅಲ್ಲಿ ಒಬ್ಬನೇ ಇರಬೇಕಾಗಿಯೂ ಇಲ್ಲ. ಅಕಸ್ಮಾತ್ ಬಾಬುರಾಮ್ ಬಾಬು ಅಥವಾ ಸುಬೋಧ ಬಾಬು ಕೊಲ್ಕತ್ತೆಗೆ ಹಿಂತಿರುಗಿದರೆ ಮಠದವರು ಮತ್ತಾರು ಅಲ್ಲಿ ಇರುತ್ತಾರೋ ಅವರೊಂದಿಗಿರುವೆ. '...ಚಿಕ್ಕಹುಡುಗ ಎಲ್ಲಿಗೆ ಹೋಗುತ್ತಾನೋ, ಎಷ್ಟು ಕಷ್ಟ ಪಡುತ್ತಾನೋ' ಎಂದು ನೀವೇನೂ ಭಯಪಡಬೇಡಿ. ಇಲ್ಲಿ ನಾನೇನು ಕಡಿಮೆ ಕಷ್ಟ ಅನುಭವಿಸುತ್ತಿರುವೆನೇನು? ಇಷ್ಟು ದಿನ ಹೇಗೋ ಸಹಿಸಿಕೊಂಡಿದ್ದೆ. ನಿಮಗೆ ಏನನ್ನೂ ಹೇಳಿರಲಿಲ್ಲ. ನೀವು ಕೇಳಿದಾಗೆಲ್ಲಾ 'ಚೆನ್ನಾಗಿದ್ದೇನೆ' ಎಂದಷ್ಟೇ ಹೇಳುತ್ತಿದ್ದೆ. ಈ ಜನ ನಾನು ಸಹಿಸಿದಷ್ಟೂ ನನ್ನನ್ನು ಕಬಳಿಸುತ್ತಿದ್ದಾರೆ....

ಅಮ್ಮಾ, ನಾನು ನಿಮ್ಮ ಕೃಪೆಗೆ ಅಪಾತ್ರ. ತಾಯಿ, ಒಬ್ಬಾತ ಮತ್ತೊಬ್ಬನಿಂದ ಪ್ರೀತಿ-ವಿಶ್ವಾಸ ಗಳಿಸಿದರೆ ಅವನ ಮೇಲೆ ಆಕರ್ಷಣೆ ಅಥವಾ ಪ್ರೀತಿ ಸಹಜವಾಗಿ ಉಂಟಾಗುತ್ತದಲ್ಲವೆ? ಆದರೆ ಇದೇನಿದು ವಿಚಿತ್ರ, ತಾವು ಮಾನವರೂಪಿಣಿಯಾಗಿ ಬಂದಿದ್ದು, ಊಹಿಸಲೂ ಆಗದ ರೀತಿಯಲ್ಲಿ ಆದರ-ಪ್ರೀತಿ-ಮಮತೆ-ದಯೆಯನ್ನು ನನ್ನ ಮೇಲೆ ತೋರಿದಿರಿ. ಆದರೂ ಈ ಅಭಾಗ್ಯನಿಗೆ ನಿಮ್ಮನ್ನು ಪ್ರೀತಿಸಲಾಗುತ್ತಿಲ್ಲ... ಅಮ್ಮಾ, ನೀವು ನನಗೆ ನನ್ನ ಇಷ್ಟಾರ್ಥ ಸಿದ್ಧಿಸುತ್ತದೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಅದೇನು ಕ್ರಮೇಣ ಆಗುವುದೇ, ಅಥವಾ ಒಂದು ದಿನ ಹಠಾತ್ತಾಗಿ ಆಗುವುದೆ? ಕ್ರಮವಾಗಿ ಆಗುವುದಾದರೆ, ಇಷ್ಟು ದಿನಗಳಲ್ಲಿ (೨-೩ ವರ್ಷ) ಒಂದು ಸ್ವಲ್ಪವಾದರೂ ಆಗುತ್ತಿತ್ತಲ್ಲವೆ? ನಿಮ್ಮ ಸ್ವಭಾವಸಿದ್ಧ ಗುಣದಿಂದಲೇ ದಯೆ ತೋರಿ. ಇಂದು ಮಠದಲ್ಲಿ ಯಾರು ಸಂನ್ಯಾಸಿಗಳಾಗಿದ್ದಾರೋ ಅವರೇನು ಆತನ ಕೃಪೆಯಿಂದಲ್ಲದೆ, ಸ್ವಶಕ್ತಿಯಿಂದಲೇ ಸಂಸಾರ ತ್ಯಾಗ ಮಾಡಿದ್ದಾರೇನು? ನಿಮ್ಮ ಕೃಪೆಯೇನಾದರೂ ಇದ್ದರೆ ಅಲ್ಪನಾದ ನಾನೂ ಸಹ ಸಂನ್ಯಾಸಿಯಾಗಲು ಸಾಧ್ಯವಿಲ್ಲವೇನು? ಅಮ್ಮ, ಖೇಲಾತನು[೫] ನಿಮ್ಮನ್ನೊಮ್ಮೆ ಹೀಗೆ ಪ್ರಶ್ನಿಸಿದ್ದನು 'ನಿಮಗಾವುದು ಅಸಾಧ್ಯ?' ಅದಕ್ಕೆ ನೀವು ಹೇಳಿದ್ದಿರಿ, 'ನನಗಸಾಧ್ಯವಾದದ್ದು ಅವರು.' ಯಾವ ಅರ್ಥದಲ್ಲಿ ಅದನ್ನು ಹೇಳಿದ್ದಿರೋ ನಾನರಿಯೆ! ಆದರೆ ಶಾರದಾ ಮಹಾರಾಜರ[೬] ಬಾಯಿಂದ ಕೇಳಿದ್ದೆ, ಅವರು[೭] ನಿಮ್ಮ ವಿಷಯವಾಗಿ ಹೇಳಿದ್ದರು, 'ರಾಧೆಯ ಮಾಯೆಯು ಅನಂತ; ಹೇಳಲು ಅಸದಳವಾದದ್ದು. ಕೋಟಿ ಕೃಷ್ಣ, ಕೋಟಿ ರಾಮರು ಬಂದರು, ಇದ್ದು ಹೋದರು' ಎಂದು. ಆದ್ದರಿಂದ ನೀವು ಮನಸ್ಸು ಮಾಡಿದರೆ ಎಲ್ಲವನ್ನೂ ಮಾಡಬಲ್ಲಿರಿ... ನಿಮ್ಮ ಅನುಮತಿಯ ನಿರೀಕ್ಷಣೆಯಲ್ಲಿ....

ಅಮ್ಮಾ, ನಿಮ್ಮ ಅಯೋಗ್ಯ ಪುತ್ರ,
ಕಾಳೀಕೃಷ್ಣ

ಶ್ರೀಮಾತೆಯವರ ಉತ್ತರದಿಂದ ಆಯ್ದ ಭಾಗ:

ಜಯರಾಂಬಾಟಿ
೧೩೦೨ನೇ ವರ್ಷ ೨೦ನೇ ಆಶ್ವಯುಜ

ಚಿರಂಜೀವಿಗೆ,
ಪರಮ ಆಶೀರ್ವಾದಗಳು.

ಮಗು, ನಿನಗೆ ತೊಂದರೆಯಾಗುತ್ತಿದೆ ಎಂದು ಕೇಳಿ ತುಂಬಾ ದುಃಖವುಂಟಾಯಿತು. ನೀನು ಶ್ರೀ ಬೃಂದಾವನ ಧಾಮಕ್ಕೆ ಹೋಗಿ

೩ ಇದು ಬಂಗಾಳೀ ವರ್ಷ, ಮಾಸ. ಅಂದರೆ, ಅಕ್ಟೋಬರ್, ೧೮೯೫ನೇ ಇಸವಿ.
೪ ಆವರೆಗೂ ಮಠದ ಸಂನ್ಯಾಸಿಗಳನ್ನು ಮನೆಯ ಹೆಸರಿನಿಂದಲೇ ಗುರುತಿಸುತ್ತಿದ್ದರು. ಹೆಸರಿನೊಂದಿಗೆ 'ಬಾಬು' ಎಂದೂ ಸೇರಿಸುತ್ತಿದ್ದರು (ಗೌರವಾರ್ಥ).
೫ ಹಿಂದೆಯೇ ತಿಳಿಸಿದಂತೆ ಈತನು ಕಾಳೀಕೃಷ್ಣನ ಆಧ್ಯಾತ್ಮಿಕ ಸ್ನೇಹಿತ - ಖೇಲಾತ್ ಚಟ್ಟೋಪಾಧ್ಯಾಯ.
೬ ಸ್ವಾಮಿ ತ್ರಿಗುಣಾತೀತಾನಂದರು.
೭ ಶ್ರೀರಾಮಕೃಷ್ಣರು.

ಗೋವಿಂದಜೀ ದರ್ಶನ ಮಾಡಿದರೆ ತುಂಬ ಒಳ್ಳೆಯದೇ. ನಿನ್ನ ತಂದೆ-ತಾಯಿಗಳ ಅನುಮತಿ ಪಡೆದು ಗೋವಿಂದಜೀ ದರ್ಶನಕ್ಕೆ ಹೋಗಿ ಬಾ. ವಿಜಯ್, ಖಗೇನ್, ಸುಶೀಲ್, ಖೇಲಾತ್, ಶಶಿ, ಫಣಿ, ಹರಿಪದ, ಕನ್ಹಾಯ್ ಮುಂತಾದವರಿಗೆ ನನ್ನ ಆಶೀರ್ವಾದ ತಿಳಿಸು... ನಿನ್ನ ತಾಯಿಗೂ ನನ್ನ ಆಶೀರ್ವಾದ ತಿಳಿಸು.

ಇತಿ, ನಿನ್ನ ತಾಯಿ

೭

ಶ್ರೀಮಾತೆಯವರ ಆಶೀರ್ವಾದ, ಅನುಮತಿಗಳನ್ನು ಪಡೆದ ಕಾಳೀಕೃಷ್ಣನು, ತಾನು ಸಂಕಲ್ಪಿಸಿದ್ದನ್ನು ಕಾರ್ಯರೂಪಕ್ಕೆ ತರಲು ತಡಮಾಡಲಿಲ್ಲ. ಆಲಂಬಜಾರ್ ಮಠಕ್ಕೆ ಹೋಗಿ ಎಲ್ಲರನ್ನೂ ಭೇಟಿ ಮಾಡಿ ಬಂದನು. ದೂರ ಹೊರಟು ಹೋಗುತ್ತಿದ್ದಾನೆ, ಯಾವಾಗ ಹಿಂತಿರುಗಿ ಬರುವುದೆಂದು ತಿಳಿದಿಲ್ಲ. ಆದ್ದರಿಂದ ಶ್ರೀಮಾತೆ ಯವರ ದರ್ಶನ ಮಾಡಲು ಜಯರಾಂಬಾಟಿಗೆ ಹೋದನು. ಅವನನ್ನು ನೋಡಿ ಶ್ರೀಮಾತೆಯವರಿಗೆ ತುಂಬಾ ಆನಂದವುಂಟಾ ಯಿತು. ಅವರು ಅವನನ್ನು 'ಶ್ರೀರಾಮಕೃಷ್ಣರಲ್ಲಿ ನಿನಗೆ ಅಚಲ ವಾದ ಭಕ್ತಿಯುಂಟಾಗಲಿ' ಎಂದು ಆಶೀರ್ವದಿಸಿದರು. ಕಾಳೀ ಕೃಷ್ಣನು ೧೮೯೫ರ ಅಕ್ಟೋಬರ್ ೨೧ರಂದು ಬೃಂದಾವನಕ್ಕೆ ಹೊರಟು, ಮಾರ್ಗಮಧ್ಯದಲ್ಲಿ ಕಾಶಿಯಲ್ಲಿ ಇಳಿದನು. ಸುಮಾರು ಎರಡು ವರ್ಷಗಳ ಕಾಲ ಮನೆಯಲ್ಲಿದ್ದು, ಈಗ ಮತ್ತೆ ಸಂನ್ಯಾಸಿ ಸಂಘಕ್ಕೆ ಬರಲು ಸಾಧ್ಯವಾದದ್ದರಿಂದ ಅವನ ಆನಂದಕ್ಕೆ ಪಾರ ವಿಲ್ಲದಂತಾಯಿತು. ಕಾಶಿಗೆ ತಲುಪಿದ ನಂತರ ಶ್ರೀಮಾತೆಯವ ರಿಗೆ ಅವನು ಒಂದು ಪತ್ರ ಬರೆದನು:

''.....ಅಮ್ಮಾ, ನಿಮ್ಮದು ಅಪಾರ ಕರುಣೆ. ಕೇವಲ ಅವಿಶ್ವಾಸದಿಂದಾಗಿಯೇ ನನಗೀ ದುರ್ದಸೆ. ಅಮ್ಮಾ, ನಿಮ್ಮನ್ನು ನಾನೆಂದೂ ಮರೆಯದೆ ಇರುವಂತಾಗಲಿ... ನೀವು ನನಗೆ ಇನ್ನೇನು ಕೊಟ್ಟರೂ ಬಿಟ್ಟರೂ ಸರಿಯೇ, ಆದರೆ ನಿಮ್ಮ ಶ್ರೀಚರಣ ಗಳಲ್ಲಿ ಅಚಲವಾದ ಹೃತ್ಪೂರ್ವಕ ಭಕ್ತಿಯುಂಟಾಗಲು ಏನು ಬೇಕೋ ಅದನ್ನು ಮಾತ್ರ ಕೊಡಲೇಬೇಕು.... ಅಮ್ಮ, ನನ್ನ ಭಾರ ವನ್ನೆಲ್ಲ ನಿಮಗೇ ವಹಿಸಿರುವೆ. ನೀವು ಮಾತ್ರ ನನ್ನ ಕೈಬಿಡಬೇಡಿ, ಬಿಟ್ಟರೆ ನಾನು ಬಿದ್ದಂತೆಯೇ. ಯಾವ ಭಾವದಲ್ಲಿದ್ದರೆ, ಯಾವ ಪಥವನ್ನವಲಂಬಿಸಿದರೆ, ನಿಮ್ಮ ಶ್ರೀಚರಣಕಮಲಗಳಲ್ಲಿ ನಾನು ಬೇಗನೆ ಅರಳುವಂತಾಗುವೆನೋ, ಬಲವಂತವಾಗಿಯಾದರೂ ಸರಿ, ನೀವು ನನ್ನನ್ನು ಆ ದಿಕ್ಕಿನಲ್ಲಿಯೇ ಕರೆದೊಯ್ಯಿರಿ...

ಅಮ್ಮಾ, ನಿಮ್ಮ ಪ್ರೀತಿಯ

ಕಾಳೀಕೃಷ್ಣ

ಪುನಶ್ಚ—

ಅಮ್ಮಾ, ರಾಖಾಲ್ ಬಾಬು ಮತ್ತು ಯೋಗಿನ್ ಬಾಬುಗಳ ಮಾತಿನ ಮೇರೆಗೆ ನಾನೀಗ ಕಾಷಾಯವಸ್ತ್ರವನ್ನು ಧರಿಸುತ್ತಿರುವೆ.''




ಸ್ವಾಮಿ ಅದ್ವೈತಾನಂದರು

ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರಲ್ಲೊಬ್ಬರಾದ ಸ್ವಾಮಿ ಅದ್ವೈತಾನಂದರು (ಬಡೋ ಗೋಪಾಲ್ ದಾದಾ) ಈ ಸಮಯ ದಲ್ಲಿ ಕಾಶೀಧಾಮದ ಬಂಗಾಲಿ ಟೋಲಾದ ವಂಶೀಧರ ದತ್ತರ ಮನೆಯಲ್ಲಿ ಇಳಿದುಕೊಂಡಿದ್ದರು. ಕಾಳೀಕೃಷ್ಣನೂ ಅವರೊಂದಿಗೆ ಈಗ ಇಳಿದುಕೊಂಡನು. ವೃದ್ಧರಾಗಿದ್ದರೂ ಅದ್ವೈತಾ ನಂದರ ಜೀವನವು ಅತ್ಯಂತ ನಿಯಮ, ನಿಷ್ಠೆಗಳಿಂದ ಕೂಡಿತ್ತು. ಅವರ ನಿರಾಡಂಬರ ವಾಸಗೃಹದ ಅತಿ ಅಚ್ಚುಕಟ್ಟುತನ, ಸಮಯ ನಿಷ್ಠೆ ಹಾಗೂ ಸ್ವಾವಲಂಬನೆಗಳನ್ನು ಕಂಡು ಕಾಳೀಕೃಷ್ಣನು ತುಂಬ ಪ್ರಭಾವಿತನಾದನು. ಕಾಳೀಕೃಷ್ಣನ ಸ್ವಭಾವವೂ ಅದೇ ರೀತಿಯಾದ್ದ ರಿಂದ ಗೋಪಾಲ್ ದಾ ಅವನನ್ನು ತುಂಬ ಪ್ರೀತಿಸತೊಡಗಿದರು. ಅವರು ಕಾಳೀಕೃಷ್ಣನಿಗೆ, ''ಕಾಶಿ ವಿಶ್ವೇಶ್ವರನ ರಾಜ್ಯ, ಇಲ್ಲಿಯೇ ಇದ್ದುಬಿಡು, ಬೃಂದಾವನಕ್ಕೆ ಹೋಗಿ ಏನಾಗಬೇಕಾಗಿದೆ?'' ಎಂದು ಸಲಹೆ ಇತ್ತರು. ಆದರೆ ಕಾಳೀಕೃಷ್ಣನು ಒಪ್ಪಲಿಲ್ಲ; ಏಕೆಂದರೆ ಬೃಂದಾವನಕ್ಕೆ ಹೋಗುವ ಆಕಾಂಕ್ಷೆ ಅವನಲ್ಲಿ ಆಗ ಪ್ರಬಲ ವಾಗಿತ್ತು. ಮೇಲಾಗಿ, ಶ್ರೀಮಾತೆಯವರಿಗೂ ಹಾಗೆಂದು ಹೇಳಿ ಬಂದದ್ದಾಗಿದೆ. ಅಕ್ಟೋಬರ್ ೨೯ರಂದು ಶ್ರೀಮಾತೆಯವರ ಆಶೀ ರ್ವಾದವನ್ನು ಹೊತ್ತ ಪತ್ರವೊಂದು ಬಂತು. ಅದರಲ್ಲಿ ಶ್ರೀಮಾತೆ, ''ನಿನಗಂತೂ ನಾನು ಆಶೀರ್ವಾದ ಮಾಡಿಯೇ ಇದ್ದೇನೆ. ನಿಮ್ಮೆ ಲ್ಲರಿಗೋಸ್ಕರ ನಾನು ಸದಾ 'ಅವರಲ್ಲಿ' ಪ್ರಾರ್ಥಿಸುತ್ತಲೇ ಇರು ತ್ತೇನೆ. ಆಗಾಗ ನಿನ್ನ ಯೋಗಕ್ಷೇಮ ತಿಳಿಸಿ ಪತ್ರ ಬರೆ. ಶ್ರೀಮಾನ್ ಗೋಪಾಲ್‌ಗೆ ನನ್ನ ಆಶೀರ್ವಾದ ತಿಳಿಸು ಮತ್ತು ಆಗಾಗ್ಗೆ ಅಲ್ಲಿಯ ಸಮಾಚಾರ ತಿಳಿಸಲು ಹೇಳು... ಸಾವಧಾನದಿಂದಿರು, ಸರ್ವದಾ 'ಅವರತ್ತ' ದೃಷ್ಟಿಯನ್ನಿಟ್ಟು ನಡೆಯಲು ಪ್ರಯತ್ನಿಸು'' ಎಂದು ಬರೆದಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಕಾಳೀಕೃಷ್ಣನು ಹೀಗೆ ಬರೆ ದನು: ''...ಅಮ್ಮಾ, ನೀವು ನನಗೆ 'ಸರ್ವದಾ ಅವರತ್ತ' ದೃಷ್ಟಿ ಯನ್ನಿಟ್ಟು ನಡೆ ಎಂದು ಬರೆದಿರುವಿರಿ, ಅದು ನನ್ನಿಂದ ಹೇಗೆ ತಾನೇ ಸಾಧ್ಯ? ನನ್ನ ಮನಸ್ಸಂತೂ ನನ್ನ ವಶದಲ್ಲಿಲ್ಲ; ನೀವು ಕೃಪೆ ಯಿಟ್ಟು ನನ್ನ ದೃಷ್ಟಿಯನ್ನು ಅವರಲ್ಲಿರಿಸಿ. ಇದೇ ನನ್ನ ಒತ್ತಾಯದ ಬೇಡಿಕೆ.''

(ಮುಂದುವರಿಯುವುದು)

ಪುಸ್ತಕ ಪರಿಚಯ

ಸುಮಧುರ ಶೈಲಿಯ ರಾಮಾಯಣ ಕೃತಿ



ಕೃತಿ : **ಜನಪ್ರಿಯ ಶ್ರೀ ವಾಲ್ಮೀಕಿ ರಾಮಾಯಣ**
ಲೇಖಕರು : **ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ**
ಪ್ರಕಾಶಕರು : **ನವಭಾರತೀ ಪ್ರಕಾಶನ**
ಸರಸ್ವತಿಪುರಂ, ಮೈಸೂರು - 570009
ಪುಟಗಳು : **349** *ಬೆಲೆ* : **200/-**

ವಾಲ್ಮೀಕಿ ಮಹರ್ಷಿಯ ರಾಮಾಯಣವನ್ನು ಗದ್ಯರೂಪದಲ್ಲಿ ನಿರೂಪಿಸುವ ಅನೇಕ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಆದರೆ ಕಥನಶೈಲಿ, ನಿರೂಪಣೆಯ ಬಗೆ, ರಾಮಾಯಣದ ಆದರ್ಶ-ಮೌಲ್ಯಗಳ ಅಭಿವ್ಯಕ್ತಿ ಈ ಎಲ್ಲ ದೃಷ್ಟಿಗಳಿಂದ ಸಮಗ್ರವೂ, ಸರ್ವಾಂಗ ಸುಂದರವೂ ಆದ ಒಂದು ಕೃತಿ ಮೂಡಿಬಂದಿದೆಯೇ ಎಂದು ಕೇಳಿದರೆ, 'ಅಂಥ ಕೃತಿಯನ್ನು ಯಾರಾದರೂ ರಚಿಸಬೇಕು' ಎಂಬ ಉತ್ತರ ದೊರೆತೀತು. ಜನಜೀವನದ ಎಲ್ಲ ಸ್ತರದವರಿಗೂ ರುಚಿಸುವಂತೆ, ವಿದ್ವಜ್ಜನರಿಗೂ ಪಾಮರರಿಗೂ ಮಕ್ಕಳಿಗೂ ಹಿತವಾಗುವಂತೆ, ಶ್ರದ್ಧಾಳುಗಳಾದ ಆಸ್ತಿಕರಿಗೂ ಸಾಹಿತ್ಯಾಸಕ್ತ ರಸಿಕರಿಗೂ ಸಮಾನವಾಗಿ ಉಪಯುಕ್ತವಾಗುವಂತೆ ಒಂದು ಉತ್ತಮ ರಾಮಾಯಣ ಗದ್ಯಕೃತಿಯ ಅಗತ್ಯವೇನೋ ಇದ್ದೇ ಇದೆ. ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳ 'ವಚನ ಭಾರತ'ದಂತೆ ಸಮಸ್ತ ಕನ್ನಡಿಗರೂ ಆದರಿಸುವಂತಹ ಒಂದು ರಚನೆ ರಾಮಾಯಣವನ್ನು ಕುರಿತು ಈವರೆಗೆ ರಚಿತವಾಗಿಲ್ಲವೆಂದೇ ಹೇಳಬೇಕಾಗಿದೆ. ಶ್ರೀ ಲ.ನ. ಶಾಸ್ತ್ರೀ ಅವರ ಹೊಸ ಕೃತಿ **'ಜನಪ್ರಿಯ ಶ್ರೀ ವಾಲ್ಮೀಕಿ ರಾಮಾಯಣ'** ಗ್ರಂಥವು ಈ ಕೊರತೆಯನ್ನು ತುಂಬುವ ಕೃತಿಯೆನ್ನಬೇಕು.

ಮೂಲ ವಾಲ್ಮೀಕಿಯ ರಾಮಾಯಣವು ಅಷ್ಟೊಂದು ಜನಮನ್ನಣೆ ಗಳಿಸಲು ಅನೇಕ ಕಾರಣಗಳನ್ನು ಗುರುತಿಸಬಹುದು; ಎಲ್ಲಕ್ಕಿಂತ ಹೆಚ್ಚಾಗಿ, ಮನ ಮುಟ್ಟುವಂತಹ ಸುಲಲಿತವಾದ, ಸೌಂದರ್ಯಪೂರ್ಣವಾದ ಶೈಲಿ ಅದರದು. ಪ್ರಸ್ತುತ ಕೃತಿಯ ಕನ್ನಡ ಭಾಷೆಯನ್ನು ನೋಡುವಾಗ ಈ ಅಂಶ ಪದೇ ಪದೇ ಮನಸ್ಸಿಗೆ ಬರುತ್ತದೆ. ಸಂಕ್ಷಿಪ್ತವೂ, ಸುಮಧುರವೂ, ಎಷ್ಟು ಬೇಕೋ ಅಷ್ಟರ ಮಟ್ಟಿಗೆ ಸಂಭಾಷಣಾತ್ಮಕವೂ ಆದ ಕಥನ ಶೈಲಿ ಇಲ್ಲಿನದು. ಕಥೆಯ ಓಟಕ್ಕೆ ಧಕ್ಕೆಯಾಗದಂತೆ ಸಂಕ್ಷೇಪವೂ ಅಲ್ಲದ, ವಿಸ್ತಾರವೂ ಅಲ್ಲದ ಕಾವ್ಯಸೌಂದರ್ಯದ ಅಂಶಗಳಿಂದ ಕೂಡಿರುವ ವರ್ಣನೆಗಳು ಇಲ್ಲಿವೆ.

ಅದೇರೀತಿ, ಹಳೆಯ ಕಾಲದ ಕಥೆಯಾದ್ದರಿಂದ ಪುರಾತನ ಚಿತ್ರಣವನ್ನು ನೀಡಲು ಅಗತ್ಯವಾದ ಪರಂಪರಾಗತ ಸಂಸ್ಕೃತಮಯ ಪದಪುಂಜಗಳ ಬಳಕೆ, ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸಲು ಯೋಗ್ಯವಾದ ರೀತಿಯಲ್ಲಿ ಮೂಡಿಬಂದಿದೆ. ಆದರೆ ಎಲ್ಲೂ ಸಂಸ್ಕೃತ ಪದಗಳು ಭಾರವೆನಿಸಿಲ್ಲ, ಬದಲಾಗಿ ಕಥೆಗೆ ಶೋಭೆಯನ್ನು ನೀಡುತ್ತವೆ. ಅಷ್ಟೇ ಅಲ್ಲ, ಆಡುಮಾತುಗಳ ಸೊಗಡು ಹಲವೆಡೆ ಭಾಷೆಗೆ ನಾವೀನ್ಯತೆಯನ್ನೂ ನೀಡುತ್ತವೆ. ಸುಂದರ ಕಾಂಡದಲ್ಲಿ ಹನುಮಂತನು ಅಶೋಕ ವನವನ್ನು ಕಂಡ ಸಂದರ್ಭ ಇದಕ್ಕೆ ಒಂದು ಉತ್ತಮ ಉದಾಹರಣೆ : ''ಅದು ವಸಂತ ಋತುವಿನ ಆರಂಭ ಕಾಲ. ಅಶೋಕವನವು ನಾನಾ ಬಗೆಯ ಸುಗಂಧ ಪುಷ್ಪಗಳಿಂದ ಮನೋಹರವಾಗಿತ್ತು. ಆಂಜನೇಯನು ಆ ವನದ ಪ್ರಾಕಾರಕ್ಕೆ ನೆಗೆದು, ಒಂದು ಮಾವಿನ ತೋಪಿನಲ್ಲಿ ಇಳಿದನು. ಗಿಡಗಳಲ್ಲಿ ಹೂಗಳು ಚಿಗಿತು, ಸುತ್ತಲೂ ಕಂಪನ್ನು ಬೀರುತ್ತಿದ್ದುವು. ಗಿಡಗಳಲ್ಲಿ ಮಲಗಿ ನಿದ್ರಿಸುತ್ತಿದ್ದ ಪಕ್ಷಿಗಳು ಆಂಜನೇಯನು ನೆಗೆದ ರಭಸದಿಂದ ಗಾಬರಿಗೊಂಡು, ಎಚ್ಚರಗೊಂಡವು. ಅವು ಸ್ವಲ್ಪ ಕಾಲ ಸುತ್ತಲೂ ಹಾರಾಡಿದುವು. ಇನ್ನೂ ಮಲಗದೇ ಇದ್ದ ಕೆಲವು ಮೃಗಪಕ್ಷಿಗಳು ಅಲ್ಲಲ್ಲಿ ಅಡ್ಡಾಡುತ್ತಿದ್ದುವು. ಆ ವನದಲ್ಲಿ ಅಲ್ಲಲ್ಲಿ ಜಲಾಶಯಗಳು, ಅವುಗಳಲ್ಲಿ ನೈದಿಲೆ, ತಾವರೆ ಬಳ್ಳಿಗಳೂ ಹರಡಿದ್ದುವು. ಅಲ್ಲಲ್ಲಿ ವಿಹಾರಕ್ಕೆ, ವಿಶ್ರಾಂತಿಗೆ ಮಂಟಪಗಳು ನಿರ್ಮಿತವಾಗಿದ್ದುವು. ಅಲ್ಲೆಲ್ಲಾ ಸುತ್ತಾಡುತ್ತ, ದೊಡ್ಡದಾದ ಶಿಂಶುಪಾ ವೃಕ್ಷ ವನ್ನು ನೋಡಿದನು. ಅದರ ಮೇಲೆ ಕುಳಿತು ಸೀತೆಗಾಗಿ ಕಣ್ಣು ಹಾಯಿಸಿದನು...''

ಎಲ್ಲರಿಗೂ ಹಿತವೆನಿಸುವ ಕಥನಶೈಲಿಯಿದು. ರಾಮಾಯಣ ಕಥೆಯು ಮನಃಪಟಲದಲ್ಲಿ ಅಚ್ಚೊತ್ತಿ ನಿಲ್ಲಲು ಸಹಾಯಕವಾಗುವಂತೆ ಅಲ್ಲಲ್ಲಿ ರೇಖಾಚಿತ್ರಗಳು (ಇವು ಇನ್ನಷ್ಟು ಇರಬೇಕಿತ್ತು ಅನಿಸುತ್ತವೆ), ಕೆಲವು ಸಂಸ್ಕೃತ ಶ್ಲೋಕಗಳೊಂದಿಗೆ ಅವುಗಳ ಅನುವಾದ, ಈ ಕೃತಿಯ ಸೊಬಗನ್ನು ಹೆಚ್ಚಿಸಿವೆ. ಐತಿಹಾಸಿಕ ವಿವರಗಳನ್ನು ನೀಡುವ ಲೇಖಕರ ಮುನ್ನುಡಿ ಅರ್ಥಪೂರ್ಣವಾಗಿದೆ. ಪ್ರಾಚೀನ ಕಾಲದ ಶಾಸ್ತ್ರೀಯ ಗ್ರಂಥಗಳ ಬಗ್ಗೆ ಅಸಡ್ಡೆ ಇರುವ 'ಆಧುನಿಕ'ರೆಲ್ಲರೂ ಇದನ್ನು ಒಂದು ಬಾರಿ ಓದಿ ನೋಡಬೇಕು; ಆಗ ಅವರಿಗೆ ನಮ್ಮ ಪರಂಪರೆಯ ಸತ್ವ, ಸಾಹಿತ್ಯಕೃತಿಗಳ ಸೌಂದರ್ಯ, ಧಾರ್ಮಿಕ-ಸಾಂಸ್ಕೃತಿಕ ಮೌಲ್ಯಗಳ ಹಿಂದಿರುವ ಆಧ್ಯಾತ್ಮಿಕ ಶ್ರೀಮಂತಿಕೆ ಮನವರಿಕೆಯಾಗದಿರದು.

ಕೃಷ್ಣಸಖ ಸಂತ ನರಸೀ ಮೆಹ್ತಾ

ಸ್ವಾಮಿ ವೀರೇಶಾನಂದ

‘ವೈಷ್ಣವಜನ ತೋ ತೇನೇ ಕಹಿಯೇ ರೇ ಜೋ ಪೀಡ ಪರಾಯೈ ಜಾನೇ ರೇ’ – ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಈ ಭಜನೆಯನ್ನು ಯಾರು ತಾನೇ ಕೇಳಿಲ್ಲ! ‘ಯಾರು ಇತರರ ಕಷ್ಟವನ್ನು ಕಂಡು ಮರುಗುತ್ತಾರೆಯೋ ಅವರೇ ನಿಜವಾದ ವೈಷ್ಣವರು’ ಎಂದು ಆರಂಭವಾಗುವ ಈ ಸುಂದರ ಗೀತೆಯನ್ನು ರಚಿಸಿದವರು ಗುಜರಾತಿನ ಅತ್ಯಂತ ಪ್ರಸಿದ್ಧ ಭಕ್ತ–ಸಂತ ಹಾಗೂ ಗುಜರಾತಿ ಸಾಹಿತ್ಯದ ಆದಿಕವಿ ನರಸೀ ಮೆಹ್ತಾ ಅಥವಾ ನರಸಿಂಹ ಮೆಹ್ತಾ.



ನಗರ ಬ್ರಾಹ್ಮಣ ಕುಲ ಎನ್ನುವುದು ಗುಜರಾತಿನ ಬ್ರಾಹ್ಮಣರಲ್ಲಿ ಒಂದು ಪಂಗಡ. ನರಸಿಂಹ ಮೆಹ್ತಾ ಹುಟ್ಟಿದ್ದು ಈ ಕುಲದಲ್ಲಿ, ತಲಜಾ ಎಂಬ ಗ್ರಾಮದಲ್ಲಿ. ಅದು ಗುಜರಾತಿನ ಜುನಾಗಢ ನಗರದ ಹತ್ತಿರ ಇದೆ. ೧೪೧೪ರಲ್ಲಿ ಹುಟ್ಟಿದ ನರಸಿಂಹನು ತನ್ನ ತಂದೆತಾಯಿಗಳನ್ನು ಐದು ವರ್ಷದವನಿದ್ದಾಗ ಕಳೆದುಕೊಂಡನು. ಇಷ್ಟಲ್ಲದೆ ಎಂಟು ವರ್ಷ ವಯಸ್ಸಾಗುವ ತನಕ ಅವನಿಗೆ ಮಾತೇ ಬರುತ್ತಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಜುನಾಗಢಕ್ಕೆ ಬಂದ ಅವನು ತನ್ನ ಅಜ್ಜಿಯ ಆರೈಕೆಯಲ್ಲಿ ಬೆಳೆದನು. ಆಕೆಯ ಹೆಸರು ಜಯಾ ಕುನ್ವರ್ ಎಂದು.

ನರಸಿಂಹನಿಗೆ ಒಬ್ಬ ಅಣ್ಣನಿದ್ದನು. ಅವನ ಹೆಸರು ಬನ್ಸೀಧರ. ಅವನು ನರಸಿಂಹನಿಗಿಂತ ಹದಿನೇಳು ವರ್ಷ ವಯಸ್ಸಿನಲ್ಲಿ ದೊಡ್ಡವನು. ಅವನಿಗೆ ಮದುವೆಯಾಗಿತ್ತು. ಹೆಂಡತಿಯ ಹೆಸರು ಗೌರಿ ಎಂದು. ನರಸಿಂಹನು ಜುನಾಗಢದ ಹಾಟಕೇಶ್ವರ ದೇವಸ್ಥಾನಕ್ಕೆ ತನ್ನ ಅಜ್ಜಿಯ ಜೊತೆಗೆ ಆಗಾಗ್ಗೆ ಹೋಗುತ್ತಿದ್ದನು. ಅಲ್ಲಿ ಭಜನೆಗಳನ್ನು ಅತ್ಯಾಸಕ್ತಿಯಿಂದ ಕೇಳುತ್ತಿದ್ದನು. ಅವನಿಗೆ ಈಗ ಎಂಟು ವರ್ಷ ವಯಸ್ಸು. ಇನ್ನೂ ಮಾತು ಬರುತ್ತಿರಲಿಲ್ಲ. ಒಮ್ಮೆ ಶಿವ ಮಂದಿರಕ್ಕೆ ಹೋದಾಗ ಒಬ್ಬ ಸಾಧುವಿನ ದರ್ಶನವನ್ನು ಮಾಡಿದನು. ಹುಡುಗನತ್ತ ದೃಷ್ಟಿ ಹರಿಸಿದ ತಪಸ್ವಿಯು ‘ಮುಂದೆ ಈ ಹುಡುಗ ಮಹಾತ್ಮನಾಗುವನು’ ಎಂದು ಭವಿಷ್ಯ ನುಡಿದನು. ಇದನ್ನು ಕೇಳಿದ ಆತನ ಅಜ್ಜಿ ಹುಡುಗನ ಕಿವುಡುತನದ ಬಗ್ಗೆ ಸಾಧುವಿಗೆ ಅರಿಕೆ ಮಾಡಿಕೊಂಡಳು. ಸಾಧುವು ನರಸಿಗೆ ಗಿಡ ಮೂಲಿಕೆಯ ಔಷಧವನ್ನು ಕೊಟ್ಟು ‘ರಾಧೇ ಕೃಷ್ಣ’ ಎಂದು ಉಚ್ಚರಿಸುವಂತೆ ಹೇಳಿದನು. ಔಷಧವನ್ನು ಸೇವಿಸಿದ ನರಸಿಂಹನು ಆಶ್ಚರ್ಯವೆಂಬಂತೆ, ಜೀವನದಲ್ಲಿ ಮೊಟ್ಟಮೊದಲ ಬಾರಿಗೆ ಮಾತನಾಡಿದನು. ‘ರಾಧೇ ಕೃಷ್ಣ, ರಾಧೇ ಕೃಷ್ಣ’ ಎಂದು ಉಚ್ಚರಿಸಿದನು.

ಇದಾದ ಮೇಲೆ ನರಸಿಂಹನು ಸಂಸ್ಕೃತ ಪಾಠಶಾಲೆಗೆ ಹೋಗಲಾರಂಭಿಸಿದನು. ಶಾಲೆಯಿಂದ ಬಂದ ಮೇಲೆ ಹಾಟಕೇಶ್ವರ ಮಹಾದೇವನ ಮಂದಿರಕ್ಕೆ ಹೋಗಿ, ಭಕ್ತರ ಜೊತೆಗೆ ಸೇರಿಕೊಂಡು ಭಜನೆಗಳನ್ನು ಹಾಡುತ್ತಿದ್ದನು. ಇವನು ಸಂನ್ಯಾಸಿಯಾಗಿ ಬಿಡುವನೇನೋ ಎಂದು ಅವನ ಅಜ್ಜಿಗೆ ಭಯವಾಯಿತು. ಒಡನೆ ಅವನಿಗೆ ಮದುವೆ ಮಾಡಿಬಿಟ್ಟಳು. ವಧುವಾಗಿ ಬಂದವಳು ಇನ್ನೂ ಏಳು ವರ್ಷದ ಬಾಲೆ ಮನೇಕಾ ಬಾಯಿ. ಮದುವೆ ನಡೆದದ್ದು ೧೪೨೯ರಲ್ಲಿ.

ನರಸಿಂಹನು ಹೆಂಡತಿಯ ಜೊತೆಗೆ ಅಣ್ಣನ ಮನೆಯಲ್ಲಿಯೇ ಸಂಸಾರ ಹೂಡಿದನು. ಕಾಲಾಂತರದಲ್ಲಿ ಅವನಿಗೆ ಕುನ್ವರಿಬಾಯಿ ಎಂಬ ಮಗಳು ಮತ್ತು ಶ್ಯಾಮಲ್ ಎಂಬ ಮಗ ಹುಟ್ಟಿದರು. ಮನೆಯಲ್ಲಿ ಮಕ್ಕಳು ಮರಿ ಹೆಚ್ಚಾಗಿ ಹೋದರು. ಬಡತನ ಕಿತ್ತು ತಿನ್ನುತ್ತಿತ್ತು. ಮೊದಲೇ ಅಣ್ಣನ ಹೆಂಡತಿ ಗೌರಿಗೆ ನರಸಿಂಹನ ಮೇಲೆ ತಾತ್ಸಾರ. ಈಗಂತೂ ನರಸಿಂಹನಿಗೆ ಇಲ್ಲಸಲ್ಲದ ತೊಂದರೆ ಕೊಡಲಾರಂಭಿಸಿದಳು. ತನ್ನ ಗಂಡ ಬನ್ಸೀಧರನ ಹತ್ತಿರ ಚಾಡಿ ಹೇಳಲು ಆರಂಭಿಸಿದಳು. ಆದರೆ ಅಜ್ಜಿಯ ಸಹಾಯದಿಂದ ನರಸಿಂಹನು ತನ್ನ ಮಗಳ ಮದುವೆಯನ್ನು ಮಾಡಿದನು. ಉನಾ ನಗರದ ಧನಿಕನೊಬ್ಬನ ಮಗನೊಂದಿಗೆ ಕುನ್ವರಿ ಬಾಯಿಯ ವಿವಾಹವಾಯಿತು. ಇದಾದ ಸ್ವಲ್ಪದಿನಗಳಲ್ಲಿಯೇ ೬೫ ವರ್ಷ

ವಯಸ್ಸಾಗಿದ್ದ ಅವನ ಅಜ್ಜಿ ಜಯಾ ಕುನ್ವರ್ ಮರಣ ಹೊಂದಿದಳು.

ಅಜ್ಜಮ್ಮನ ನಿಧನದ ನಂತರ ಅತ್ತಿಗೆ ಗೌರಿಯ ಅಟ್ಟಹಾಸ ಮೇರೆಮೀರಿತು. ಅವಳು ನರಸಿಂಹನನ್ನು ಹಗಲಿರುಳೂ ಹಂಗಿಸುತ್ತಿದ್ದಳು. ಊಟ ನೀಡುವುದಕ್ಕೂ ನಿರಾಕರಿಸುತ್ತಿದ್ದಳು. ಮನೆವಾರ್ತೆಗೆ ಏನನ್ನೂ ಕೊಡುತ್ತಿಲ್ಲ ಎಂದು ಗಂಡನಿಗೆ ದೂರು ನೀಡಿದಳು. ಬನ್ಸೀಧರನು ಕೂಡ ನರಸಿಂಹನನ್ನು ಹೀಯಾಳಿಸಿದನು; ಸರಿಯಾಗಿ ಬೈದನು.

ಇನ್ನು ನರಸಿಂಹನಿಗೆ ಇದನ್ನು ತಡೆದುಕೊಳ್ಳಲಾಗಲಿಲ್ಲ. ಅವನು ಮನೆ ಬಿಟ್ಟು ಹತ್ತಿರದ ಕಾಡಿಗೆ ಹೋದನು. ಜುನಾಗಢಕ್ಕೆ ಹತ್ತಿರವಿರುವ ಒಂದು ಪಾಳುಬಿದ್ದ ಶಿವಮಂದಿರವನ್ನು ಆಶ್ರಯಿಸಿದನು. ಏಳು ದಿನಗಳ ಕಾಲ ಅನ್ನನೀರುಗಳಿಲ್ಲದೆ ಉಪವಾಸ ವ್ರತವನ್ನು ಕೈಗೊಂಡನು. ಶಿವನು ಈ ತಪಸ್ಯೆಯಿಂದ ಸುಪ್ರೀತನಾದನು. ಆ ಮಂದಿರದ ಅಧಿದೇವತೆಯಾದ ಗೋಪನಾಥ ಮಹಾದೇವನು ದರ್ಶನವನ್ನು ನೀಡಿದನು. ವರವನ್ನು ಕೇಳುವಂತೆ ಹೇಳಿದನು. ಶ್ರೀಕೃಷ್ಣನ ರಾಸಲೀಲೆಯ ದರ್ಶನವನ್ನು ಮಾಡಿಸುವಂತೆ ನರಸಿಂಹನು ಶಿವನನ್ನು ಕೇಳಿಕೊಂಡನು. ಮಹಾದೇವನ ದಯದಿಂದ ಆ ದರ್ಶನವೂ ಆಯಿತು.

ಈ ಘಟನೆಯಿಂದ ನರಸಿಂಹನ ಜೀವನದಲ್ಲಿ ಮಹತ್ತರವಾದ ಪರಿವರ್ತನೆ ಉಂಟಾಯಿತು. ನರಸಿಂಹನು ಭಗವದಾನಂದದಲ್ಲಿ ಮುಳುಗಿಹೋದನು. ನರಸಿಂಹನು ಸಂತ 'ನರಸಿಂಹ' ಅಥವಾ 'ನರಸೀ' ಆಗಿಬಿಟ್ಟನು. ಭಗವದ್ಭಕ್ತಿಯಿಂದ ಉನ್ಮತ್ತನಾದ ಸಂತ ನರಸಿಂಹ ಮೆಹ್ತಾ ಸಂತೋಷದಿಂದ ಭಗವನ್ನಾಮ ಸಂಕೀರ್ತನೆಯನ್ನು ಮಾಡುತ್ತ, ನಗುನಗುತ್ತ ಜುನಾಗಢದತ್ತ ನಡೆದರು. ನರಸಿಂಹರು ಮೊದಲು ಅಣ್ಣನ ಮನೆಗೆ ಹೋಗಿ ಅತ್ತಿಗೆಗೆ ನಮಸ್ಕಾರ ಮಾಡಿದರಂತೆ. ಆಕೆ ಅವಮಾನ ಮಾಡಿದ್ದರಿಂದಲೇ ಅವರಿಗೆ ವೈರಾಗ್ಯವುಂಟಾದದ್ದು! ಅದಕ್ಕಾಗಿಯೇ ಅವರು ಮನೆಬಿಟ್ಟು ಹೋಗಿ ಶಿವನ ದರ್ಶನ ಪಡೆದು ದಿವ್ಯಾನುಭವವನ್ನು ಪಡೆದುಕೊಂಡದ್ದು!

ತಮ್ಮ ಹೆಂಡತಿ ಮತ್ತು ಮಕ್ಕಳ ಜೊತೆಗೆ ಸಂತ ನರಸಿಂಹರು ಜುನಾಗಢದಲ್ಲಿ ಬೇರೆ ಮನೆ ಮಾಡಿದರು. ಒಮ್ಮೆ ಪಿತೃಶ್ರಾದ್ಧವನ್ನು ಮಾಡಬೇಕಾಗಿತ್ತು. ಅದಕ್ಕಾಗಿ ಅವರು ಊರಿನ ಬ್ರಾಹ್ಮಣರಲ್ಲಿ ಕೆಲವರನ್ನು ಆಹ್ವಾನಿಸಿದರು. ಅಡುಗೆಗಾಗಿ ತುಪ್ಪ ಬೇಕಾಗಿತ್ತು. ತುಪ್ಪವನ್ನು ತರಲು ನರಸಿಂಹ ಮೆಹ್ತಾ ಪೇಟೆಗೆ ಹೋದರು. ದಾರಿಯಲ್ಲಿ ಒಬ್ಬ ಭಕ್ತನು ಎದುರಾದನು. ಊರಿನಲ್ಲಿ ನಡೆಯುತ್ತಿದ್ದ ಸಂಕೀರ್ತನೆಯೊಂದಕ್ಕೆ ಕರೆದುಕೊಂಡು ಹೋದನು. ಮೆಹ್ತಾ ಭಜನೆಯಲ್ಲಿ ಪಾಲ್ಗೊಂಡರು. ಮನೆಯಲ್ಲಿ ನಡೆಯಬೇಕಾದ ಆರಾಧನೆಯನ್ನು ಸಂಪೂರ್ಣ ಮರೆತುಬಿಟ್ಟರು. ಹಾಡುಗಳನ್ನು ಕಟ್ಟಿ ಹಾಡುತ್ತ ನಿಂತುಬಿಟ್ಟರು. ಅವುಗಳಲ್ಲಿ ಒಂದು ಹೀಗಿತ್ತು: **ಪ್ರಾಣ್ ತಕಿ ಮನೆ ವೈಷ್ಣವ ವಹಾಲಾ** – 'ಭಗವದ್ಭಕ್ತನು ನನ್ನ ಪ್ರಾಣ ಕ್ಕಿಂತಲೂ ಹೆಚ್ಚಿನವನು'.

ಇಷ್ಟರಲ್ಲಿ ಒಂದು ಅವಗಢ ನಡೆದುಹೋಗಿತ್ತು. ಯಾರೋ ಒಬ್ಬ ಕುತಂತ್ರಿಯು ಊರಿನ ಬ್ರಾಹ್ಮಣರನ್ನೆಲ್ಲ ನರಸೀ ಮೆಹ್ತಾನ ಮನೆಯ ಶ್ರಾದ್ಧ ಭೋಜನಕ್ಕೆ ಕರೆದುಬಿಟ್ಟಿದ್ದನು. ಮನೆಯ ಮುಂದೆ ನೂರಾರು ಬ್ರಾಹ್ಮಣರು ಸೇರಿಬಿಟ್ಟಿದ್ದರು. ಮನೇಕಾಬಾಯಿಗೆ ಏನು ಮಾಡುವುದೆಂದು ತೋಚಲಿಲ್ಲ. ಅಷ್ಟರಲ್ಲಿ ಎಲ್ಲಿಂದಲೋ ಅಡುಗೆಯವರು ಬಂದುಬಿಟ್ಟರು, ಅಡುಗೆಯ ಸಾಮಾನುಗಳೂ ಗಾಡಿಗಟ್ಟಲೆ ಬಂದುಬಿದ್ದವು. ಬಾಣಸಿಗರು ಅಡುಗೆಗೆ ಶುರು ಹಚ್ಚೇಬಿಟ್ಟರು. ರುಚಿಕಟ್ಟಾದ ಭಕ್ಷ್ಯಭೋಜ್ಯಗಳಲ್ಲದೆ, ಗುಜರಾತಿನ ಪ್ರಸಿದ್ಧ ಸಿಹಿತಿಂಡಿಗಳೂ ತಯಾರಾದವು.

ಇತ್ತ ಸಂತರು ಮೈಮರೆತು ಹಾಡುತ್ತಲೇ ಇದ್ದರು; ಭಜನೆ ಮಾಡುತ್ತಲೇ ಇದ್ದರು; ಉನ್ಮತ್ತರಾಗಿದ್ದರು. ಆ ಕಾಲದಲ್ಲಿ ಅವರ ವದನಾರವಿಂದದಿಂದ ನೂರಾರು ಗೀತೆಗಳ ಸಾಲುಗಳು ಹೊರಹೊಮ್ಮುತ್ತಿದ್ದವು. ಯಾವುದೋ ಹಂತದಲ್ಲಿ ಸಂತರಿಗೆ ಮನೆಯ ಶ್ರಾದ್ಧಾಚರಣೆಯ ನೆನಪಾಯಿತು. ತಾನು ಪೇಟೆಯಿಂದ ತುಪ್ಪ ತರಬೇಕಾಗಿತ್ತು ಎನ್ನುವುದೂ ಸ್ಮರಣೆಗೆ ಬಂತು. ಒಡನೇ ತುಪ್ಪವನ್ನು ಕೊಂಡುಕೊಂಡು ಮನೆಗೆ ಓಡಿದರು.

ಇಷ್ಟರಲ್ಲಿ ಬ್ರಾಹ್ಮಣ ಭೋಜನ ಮುಗಿದೇ ಹೋಗಿತ್ತು. ಬ್ರಾಹ್ಮಣರು ಭರ್ಜರಿ ಭೋಜನ ಮಾಡಿ ಸಂತುಷ್ಟರಾಗಿ ಹೊರಗೆ ಬರುತ್ತಿದ್ದರು. ಅವರೆಲ್ಲ 'ನರಸಿಂಹ ಭಗವಾನರಿಗೆ ಜೈ' ಎಂದು ಉದ್ಘೋಷಿಸುತ್ತಿದ್ದರು. ಸಂತ ನರಸಿಂಹರಿಗೆ ಗೊತ್ತಾಯಿತು, ಇದೆಲ್ಲ ಭಗವಂತನ ಲೀಲೆ ಎಂದು. ಶ್ರೀಹರಿಯೇ ತಮಗೆ ಸಹಾಯ ಹಸ್ತವನ್ನು ಚಾಚಿದನೆಂದು ತಿಳಿದು ಸಂತರು ಸಂತೋಷಪಟ್ಟರು.

ನರಸಿಂಹರದ್ದು ಪರಿಶುದ್ಧ ಭಕ್ತಿ. ಜಾತಿ ಮತ ಪಂಥಗಳನ್ನು ಎಣಿಸದೆ ಎಲ್ಲರ ಮನೆಗಳಿಗೂ ಹೋಗಿ ಅವರು ಭಜನೆ ಮಾಡಿ, ಆನಂದವನ್ನು ನೀಡುತ್ತಿದ್ದರು. ಬಡವ ಬಲ್ಲಿದರೆಂಬ ಭೇದವೆಣಿಸಿದೆ ಎಲ್ಲರಿಗೂ ಭಗವದಾನಂದವನ್ನು ಪ್ರದಾನ ಮಾಡುತ್ತಿದ್ದರು. ಒಮ್ಮೆ ಅಸ್ಪೃಶ್ಯರು ಎಂದು ಅನ್ನಿಸಿಕೊಂಡವರ ಕೇರಿಗೆ ಹೋಗಿ ಅಲ್ಲಿ ಕೂಡ ಭಜನೆಯನ್ನು ಮಾಡಿದರು. ಆಗಲೇ 'ವೈಷ್ಣವ ಜನ ತೋ ತೇನೇ ಕಹಿಯೇ ರೇ ಜೋ ಪೀಡ ಪರಾಯ್ಯೆ ಜಾನೇ ರೇ' ಎಂಬ ಅವರ ಸುಪ್ರಸಿದ್ಧ ಗೀತೆ ಹೊರಹೊಮ್ಮಿದ್ದು. ಇದನ್ನು ಕಂಡ ನಗರದ ಬ್ರಾಹ್ಮಣರು ರೊಚ್ಚಿಗೆದ್ದರು. ಅವರನ್ನು ಕುಲದಿಂದ ಬಹಿಷ್ಕರಿಸಿದರು. ಇಷ್ಟಾದರೂ ಸಂತ ನರಸಿಂಹ ಮೆಹ್ತಾ ಶಾಂತಚಿತ್ತರಾಗಿಯೇ ಇದ್ದರು. ಮನಸ್ಸಿನ ಸಾಮ್ಯತೆಯನ್ನು ಕಾಪಾಡಿಕೊಂಡಿದ್ದರು. ಮಾನಾಪಮಾನಗಳಲ್ಲಿ, ಮಿತ್ರಶತ್ರುಗಳಲ್ಲಿ ಸಮಭಾವವನ್ನು ಇಟ್ಟುಕೊಳ್ಳಬೇಕೆಂಬ ಭಗವದ್ಗೀತೆಯ ಸಂದೇಶವನ್ನು ಪರಿಪಾಲಿಸಿದರು. ಈ ಸಂದರ್ಭದಲ್ಲಿ ತಾತ್ತ್ವಿಕ ವಿಚಾರಗಳನ್ನು ಒಳಗೊಂಡ ಈ ಗೀತೆಯನ್ನು ರಚಿಸಿದರು: **'ಜ್ಯಾಂ ಲಗೀ ಆತ್ಮಾ**

ತತ್ತ್ವ ಚಿನ್ಯೋ ನಹಿ, ತ್ಯಾಂ ಲಗೀ ಸಾಧನಾ ಸರ್ವ ಜುಠೀ' – 'ಆತ್ಮವನ್ನು ಸಾಕ್ಷಾತ್ಕರಿಸಿಕೊಂಡ ಹೊರತು, ಎಲ್ಲ ರೀತಿಯ ಸಾಧನೆಗಳೂ ಅರ್ಥಹೀನವಾಗುತ್ತವೆ.'

ಭಗವಂತನು ಭಕ್ತರನ್ನು ಪರೀಕ್ಷಿಸುತ್ತಾನೆ. ಕಷ್ಟಗಳನ್ನು ಕೊಟ್ಟು ಪೀಡಿಸುತ್ತಾನೆ. ನರಸಿಂಹರ ಮಗ ಶ್ಯಾಮಲ ತನ್ನ ಹದಿನೇಳನೆಯ ವಯಸ್ಸಿನಲ್ಲಿ ಅಪಮೃತ್ಯುವಿಗೆ ಈಡಾದನು. ಇದನ್ನು ತಾಳಲಾಗದೆ ಹೆಂಡತಿ ಮನೇಕಾ ಬಾಯಿಯೂ ಮರಣ ಹೊಂದಿದಳು. ಇಷ್ಟಾದರೂ ಸಂತ ನರಸಿಂಹರ ಮನಸ್ಸು ಪ್ರಕ್ಷುಬ್ಧಗೊಳ್ಳಲಿಲ್ಲ. ಜೀವನದ ನಶ್ವರತೆಯ ಪರಿಪೂರ್ಣ ಅರಿವು ಅವರಿಗೆ ಇತ್ತು. ತಮ್ಮ ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನ ಮೇಲೆ ಭಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂಬ ಹಾತೊರಿಕೆಯೊಂದೇ ಅವರನ್ನು ಹಗಲಿರುಳೂ ಕಾಡುತ್ತಿತ್ತು. ಈ ಸಂದರ್ಭದಲ್ಲಿ ನರಸಿಂಹ ಮೆಹ್ತಾ ಹೀಗೆ ಹಾಡಿದರು: **ಭಲುಂ ಥಯುಂ ಭಾಂಗಿ ಜಂಜಾಲ್, ಸುಖೇ ಭಜೀಶುಂ ಶ್ರೀಗೋಪಾಲ್** – 'ಒಳ್ಳೆಯದೇ ಆಯಿತಲ್ಲ! ಮಾಯೆಯ ಹಂದರ ಕಳೆಯಿತಲ್ಲ! ನಿಶ್ಚಿಂತೆಯಿಂದ ಶ್ರೀಗೋಪಾಲನ ಭಜನೆ ಮಾಡುವ ಸುಖ ಸಿಕ್ಕಿತಲ್ಲ!'

ಸಂತರ ಜೀವನದಲ್ಲಿ ಅವರ ಮಹಾನತೆಯನ್ನು ಪರೀಕ್ಷಿಸುವ ಹಲವು ಪ್ರಸಂಗಗಳು ಎದುರಾಗುತ್ತವೆ. ಅದೇ ರೀತಿ ನರಸಿಂಹ ಮೆಹ್ತಾ ಅವರ ಜೀವನದಲ್ಲಿಯೂ ಆಯಿತು. ಅವರ ಪರಿಶುದ್ಧ ಭಕ್ತಿಯನ್ನು ಸಹಿಸದವರೂ ಇದ್ದರು. ಅವರೆಲ್ಲ ಅಲ್ಲಿನ ರಾಜನ ಹತ್ತಿರ ಹೋಗಿ ಸಂತ ನರಸಿಂಹರು ಶಾಸ್ತ್ರವಿಧಿಗಳನ್ನು ಪಾಲಿಸುತ್ತಿಲ್ಲ ಎಂದು ಆರೋಪಿಸಿದರು. ರಾಜನು ಸಂತರನ್ನು ಕರೆಸಿದನು. ''ದೇವಸ್ಥಾನದಲ್ಲಿರುವ ಶ್ರೀ ದಾಮೋದರ ಮೂರ್ತಿಗೆ ಹಾಕಿದ ಹಾರವು, ನಾಳೆ ಬೆಳಗ್ಗೆಯ ಒಳಗೆ ನಿಮ್ಮ ಕೊರಳಲ್ಲಿ ಕಂಡರೆ ಮಾತ್ರ ನೀವು ನಿರಪರಾಧಿಯೆಂದು ಪರಿಗಣಿಸುತ್ತೇನೆ'' ಎಂದನು. ಅವನನ್ನು ಸೆರೆ ಮನೆಗೆ ದೂಡಿದನು. ಸಂತ ನರಸಿಂಹರ ಕಳವಳಕ್ಕೆ ಎಣೆಯೇ ಇರಲಿಲ್ಲ. ಅವರು ಸೆರೆಮನೆಯಲ್ಲಿಯೇ ಭಗವತ್ ಸಂಕೀರ್ತನೆಯನ್ನು ಮಾಡಲು ಆರಂಭಿಸಿದರು. ಮನಸ್ಸಿನ ದುಗುಡವನ್ನು ಕಳೆದು ಭಗವದಾನಂದದಲ್ಲಿ ಮಗ್ನರಾದರು. ಸಂತರ ಗಾನವು ನಡೆಯುತ್ತಿದ್ದಂತೆ ದೇವಸ್ಥಾನದ ಬಾಗಿಲುಗಳು ತಾನೇತಾನಾಗಿ ತೆರೆದುಕೊಂಡವು. ದಾಮೋದರ ಮೂರ್ತಿಯ ಕೊರಳಲ್ಲಿ ಹಾಕಿದ್ದ ಹಾರವು ಗಾಳಿಯಲ್ಲಿ ಹಾರಿಕೊಂಡು ಬಂದು ಸೆರೆಮನೆಯಲ್ಲಿ ಭಗವದ್ಧ್ಯಾನದಲ್ಲಿ ಮಗ್ನರಾಗಿದ್ದ ಸಂತ ನರಸಿಂಹರ ಕೊರಳನ್ನು ಸೇರಿತು.

ನರಸಿಂಹ ಮೆಹ್ತಾ ಮಂಗ್ರೋಲ್ ಎಂಬ ಊರಿಗೆ ಹೋಗಿದ್ದರು. ಅಲ್ಲಿಯೇ ಭಗವಂತನ ಪಾದಗಳನ್ನು ಸೇರಿದರು. ಆಗ ಅವರ ವಯಸ್ಸು ೭೯. ಅಲ್ಲಿನ ಸ್ಮಶಾನವನ್ನು 'ನರಸಿಂಹರ ಸ್ಮಶಾನ' ಎಂದು ಕರೆಯುತ್ತಾರೆ.

ನರಸಿಂಹ ಮೆಹ್ತಾ ಭಕ್ತ ಸಂತರು ಮಾತ್ರವಲ್ಲ, ಗುಜರಾತಿ ಸಾಹಿತ್ಯದ ಆದಿಕವಿ. ಶಿವಮಂದಿರದಲ್ಲಿ ತಮಗೆ ಆದ ದಿವ್ಯ ದರ್ಶನದ ನಂತರ ೨೨,೦೦೦ ಕೀರ್ತನೆಗಳನ್ನು ರಚಿಸುತ್ತೇನೆ ಎಂದು ಅವರು ಸಂಕಲ್ಪ ಮಾಡಿದರಂತೆ! ಮೆಹ್ತಾ 'ಪದ', 'ಆಖ್ಯಾನ್' 'ಪ್ರಭಾತಿಯಾ' ಎಂಬ ಕಾವ್ಯಪ್ರಕಾರಗಳಿಗೆ ಹೆಸರಾಗಿದ್ದಾರೆ. ಅವರ ಕೀರ್ತನೆಗಳು ಎಷ್ಟು ಪ್ರಸಿದ್ಧವಾಗಿದ್ದವೆಂದರೆ, ಕಾಲ ಕಾಲಕ್ಕೆ ಅವುಗಳ ಭಾಷೆಯೇ ಮಾರ್ಪಟ್ಟಿತು ಎಂದು ವಿದ್ವಾಂಸರು ಹೇಳುತ್ತಾರೆ. ಅವರ ರಚನೆಗಳ ಅತ್ಯಂತ ಹಳೆಯ ಪಾಂಡುಲಿಪಿಯ ಕಾಲ ಸುಮಾರು ೧೬೧೨. ಮೆಹ್ತಾ ಶ್ರೀಕೃಷ್ಣನ ಕುರಿತಾಗಿ ಅನೇಕ ಆರಾತ್ರಿಕ ಗೀತೆಗಳನ್ನು ಮತ್ತು ಭಜನೆಗಳನ್ನು ರಚಿಸಿದ್ದಾರೆ. ಇವುಗಳು ಹಲವಾರು ಗ್ರಂಥಗಳಲ್ಲಿ ಪ್ರಕಟವಾಗಿವೆ.

ನರಸಿಂಹ ಮೆಹ್ತಾ ಅವರ ಗ್ರಂಥರಾಶಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು:

೧. **ಆತ್ಮಚರಿತ್ರೆಯನ್ನು ಉಲ್ಲೇಖಿಸುವ ರಚನೆಗಳು:** ನರಸಿಂಹರ ಅನೇಕ ರಚನೆಗಳು ಅವರ ಜೀವನದ ಒಳಮುಖಗಳನ್ನು ಮತ್ತು ಅನೇಕ ಘಟನೆಗಳನ್ನು ನಮಗೆ ಪರಿಚಯ ಮಾಡಿಕೊಡುತ್ತವೆ. ಭಗವಂತನು ಅವರಿಗೆ ಅನೇಕ ಸನ್ನಿವೇಶಗಳಲ್ಲಿ ಸಹಾಯ ಮಾಡಿದ್ದನ್ನು ಸಂತರು ಹೃದಯಂಗಮವಾಗಿ ಈ ರಚನೆಗಳಲ್ಲಿ ವರ್ಣಿಸುತ್ತಾರೆ.

೨. **ಇತರ ಕಥಾನಕಗಳು:** ಶ್ರೀಮದ್ಭಾಗವತದ ಕಥೆಗಳನ್ನು ಆಧರಿಸಿದ ಅನೇಕ ರಚನೆಗಳನ್ನು ಸಂತ ನರಸಿಂಹರು ರಚಿಸಿದ್ದಾರೆ. ಇವುಗಳನ್ನು 'ಆಖ್ಯಾನ'ಗಳೆಂದು ಕರೆಯುತ್ತಾರೆ. ಇಂಥ ಕಾವ್ಯ ಪ್ರಕಾರವನ್ನು ಗುಜರಾತಿ ಭಾಷೆಯಲ್ಲಿ ಆರಂಭಿಸಿದವರೇ ಸಂತ ನರಸಿಂಹರು.

೩. **ಶೃಂಗಾರ ಕಾವ್ಯಗಳು :** ರಾಧಾಕೃಷ್ಣರ ರಾಸಲೀಲೆಯನ್ನು ಬಣ್ಣಿಸುವ ಅನೇಕ ಗೀತೆಗಳನ್ನು ನರಸಿಂಹ ಮೆಹ್ತಾ ರಚಿಸಿದ್ದಾರೆ. ಅವು ಶೃಂಗಾರ ಶೈಲಿಯಲ್ಲಿವೆ.

ಸಂತ ನರಸಿಂಹ ಮೆಹ್ತಾ ಗುಜರಾತಿನ ಮೇರು ಕವಿಗಳು, ಸಾಹಿತಿಗಳು, ಕೀರ್ತನಕಾರರು. ಎಲ್ಲಕ್ಕಿಂತ ಮಿಗಿಲಾಗಿ ಭಗವಂತನ ಪ್ರೇಮಸುಧೆಯನ್ನು ಸವಿದು ಎಲ್ಲರಿಗೂ ಅದನ್ನು ಉಣಬಡಿಸಿದ ಮಹಾನ್ ಭಗವತ್ಪ್ರೇಮಿಗಳು.

ಗುರುವಾಕ್ಯದಲ್ಲಿ ವಿಶ್ವಾಸವಿಡಬೇಕು. ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು. ಆತನ ಮಾತಿನಲ್ಲಿ ವಿಶ್ವಾಸವಿಟ್ಟರೆ, — ಬಾಲಕನ ಹಾಗೆ ವಿಶ್ವಾಸವಿಟ್ಟರೆ, — ಭಗವಂತ ದೊರೆತುಬಿಡುತ್ತಾನೆ.

ಗುರುವಾಕ್ಯದಲ್ಲಿ ಇಂಥ ವಿಶ್ವಾಸ ಬೇಕು. ಕಪಟಿಯ, ಲೆಕ್ಕಾಚಾರದ, ವಿಚಾರದ ಬುದ್ಧಿಯಿಂದ ಭಗವಂತನನ್ನು ಪಡೆಯಲಾಗುವುದಿಲ್ಲ.

ಸಚ್ಚಿದಾನಂದನೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಗುರು ಎನ್ನುವವರೇ ಇಲ್ಲ. ಆತನ ವಿನಾ ಬೇರೆ ಯಾವ ಆಸರೆಯೂ ಇಲ್ಲ. ಕೇವಲ ಆತ ಮಾತ್ರವೇ ಈ ಭವ ಸಾಗರದ ಅಂಬಿಗ.


– ಶ್ರೀರಾಮಕೃಷ್ಣರು

ತ್ರ್ಯಂಬಕೇಶ್ವರದ ಜ್ಯೋತಿರ್ಲಿಂಗ

ಕಥೆ: ಟಿ. ವಿಶ್ವನಾಥನ್ ಮತ್ತು ಎಂ. ಜಯಶ್ರೀ ಚಿತ್ರ: ಶಂಕರ್

1

ಗೌತಮ ಮಹರ್ಷಿ ಮತ್ತು ಅವನ ಪತ್ನಿ ಅಹಲ್ಯೆ ಬ್ರಹ್ಮಗಿರಿಯ ತಪ್ಪಲಿನ ಆಶ್ರಮವೊಂದರಲ್ಲಿ ವಾಸಿಸುತ್ತಿದ್ದರು. ಒಮ್ಮೆ ವರ್ಷಗಟ್ಟಲೆ ಮಳೆಯೇ ಬಾರದ ಕಾರಣ ಆ ಪ್ರದೇಶವು ಬರಗಾಲದಿಂದ ತತ್ತರಿಸಿತು. ಆದ್ದರಿಂದ ದಂಪತಿಗಳಿಬ್ಬರೂ ಮಳೆಗಾಗಿ ಕಠಿಣ ತಪಸ್ಸನ್ನು ಆಚರಿಸಿ, ಶಿವನನ್ನು ಪ್ರಾರ್ಥಿಸಿದರು.



2

ಅವರ ಪ್ರಾರ್ಥನೆಯನ್ನು ಮನ್ನಿಸಿ ಈಶ್ವರನು ಆ ಭಾಗದಲ್ಲಿ ತುಂಬಾ ಮಳೆಯನ್ನು ಕರೆದನು. ಆಶ್ರಮದ ಬಳಿಯ ಕೆರೆ, ಬಾವಿಗಳು ನೀರಿನಿಂದ ತುಂಬಿದವು. ಆಶ್ರಮವು ಸಂಪದ್ಭರಿತವಾಯಿತು.




3


ಅಕ್ಕಪಕ್ಕದ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಋಷಿಮುನಿಗಳೂ, ಅವರ ಪತ್ನಿಯರೂ ಈ ಹಚ್ಚಹಸಿರು ಪ್ರದೇಶಕ್ಕೆ ಬಂದು ವಾಸ ಮಾಡಿದರು. ಇತರ ಋಷಿಗಳ ಪತ್ನಿಯರು ಇಂತಹ ಸಮೃದ್ಧಿಗೆ ಕಾರಣಳಾದ ಅಹಲ್ಯೆಗೆ ಕೃತಜ್ಞರಾಗಿರಲಿಲ್ಲ. ಅವರೊಳಗೆ ತೀವ್ರ ಭಿನ್ನಾಭಿಪ್ರಾಯ ತಲೆದೋರಿತು. ಹೀಗೇ ಕಾಲಕಳೆಯುತ್ತಿತ್ತು.




4 ಗೌತಮ ಮಹರ್ಷಿ ಮತ್ತು ಅಹಲ್ಯೆಯು ಮಾಡಿದ ಸತ್ಕಾರ್ಯವನ್ನು ಮರೆತ ಋಷಿ ಪತ್ನಿಯರು ಗಣೇಶನ ಬಳಿ ಪ್ರಾರ್ಥಿಸಿದರು.




5 ಗಣೇಶನು ಈ ಹೆಂಗಸರಿಗೊಂದು ಪಾಠವನ್ನು ಕಲಿಸಲು ಬಯಸಿದನು. ಅವರಿಗೆ ಸಹಾಯ ಮಾಡುವವನಂತೆ ಅಭಿನಯಿಸುತ್ತಾ ತಾನು ಒಂದು ಗೋವಿನ ರೂಪವನ್ನು ತಳೆದನು. ಗೌತಮನ ಆಶ್ರಮಕ್ಕೆ ನುಗ್ಗಿ ಅಲ್ಲಿಯ ಉದ್ಯಾನವನದಲ್ಲಿ ಸಿಕ್ಕಿದ್ದನ್ನೆಲ್ಲಾ ತಿನ್ನಲು ತೊಡಗಿದನು.




6 ಗೌತಮನು ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದು ಹಸುವನ್ನು ಸಮೀಪಿಸಿದನು. ಆದರೆ ಅವನು ಅದನ್ನು ಸಮೀಪಿಸುವ ಮೊದಲೇ ಆ ತೋರಿಕೆಯ ವೇಷಧಾರಿ ಹಸುವು ಸತ್ತು ಬಿದ್ದಿತು.





7
ಋಷಿಪತ್ನಿಯರು ಇಂತಹ ಅವಕಾಶಕ್ಕೆ ಕಾದಿದ್ದಂತೆ, ತಮ್ಮತಮ್ಮ ಗಂಡಂದಿರ ಹತ್ತಿರ ಧಾವಿಸಿದರು.
ಗೌತಮ ಋಷಿ ಹಸುವನ್ನು ಹೊಡೆದು ಕೊಂದಿದ್ದಾನೆ.
ಹೌದೇನು?
8
ಋಷಿಗಳು ಗೌತಮನ ಬಳಿಗೆ ಹೋದರು.
ಹೇ ಋಷಿವರ್ಯ, ಇದೆಂತಹ ಪಾಪಕೃತ್ಯ! ನೀನೇ ಈ ಹಸುವನ್ನು ಕೊಂದೆಯೇನು? ನಮಗೆ ವಿಶ್ವಾಸವೇ ಉಂಟಾಗುತ್ತಿಲ್ಲ.
ನಿನಗೀಗ ಗೋಹತ್ಯಾ ಪಾಪವು ಸುತ್ತಿಕೊಳ್ಳುವುದು !
ನೀನು ಆ ಪಾಪ ಪರಿಹಾರಕ್ಕಾಗಿ ಘೋರ ತಪಸ್ಸನ್ನು ಮಾಡಬೇಕು.
ನೀನು ಈ ಬ್ರಹ್ಮಗಿರಿಯ ಸುತ್ತ ನೂರೊಂದು ಬಾರಿ ಪ್ರದಕ್ಷಿಣೆ ಮಾಡಬೇಕು. ಅದರ ಜತೆ ನೀನು ಒಂದು ಕೋಟಿ ಶಿವಲಿಂಗಗಳನ್ನು ರಚಿಸಿ, ಅವುಗಳನ್ನು ಪೂಜಿಸಬೇಕು.
9
ಇದಕ್ಕೆ ಏನಾದರೂ ಪ್ರತಿಕ್ರಿಯೆ ತೋರುವ ಬದಲು ಗೌತಮನು ಶಿವನ ಧ್ಯಾನಕ್ಕೆ ತೊಡಗಿದನು. ಪರಿಣಾಮವಾಗಿ ಶಿವನು ಉಮಾದೇವಿಯೊಂದಿಗೆ ಅವನೆದುರು ಪ್ರತ್ಯಕ್ಷನಾದನು.
ಹೇ ಭಗವನ್, ದಯವಿಟ್ಟು ನಾನು ಮಾಡಿದ ಗೋಹತ್ಯಾ ದೋಷವನ್ನು ಮನ್ನಿಸುವ ಕೃಪೆ ಮಾಡು.

10 ಮಹಾದೇವನು ಗೌತಮನಿಗೆ ಇತರ ಋಷಿ ಪತ್ನಿಯರು ಮಾಡಿದ ದ್ರೋಹವನ್ನು ವಿವರಿಸಿದನು.



12 ಗೌತಮನು ದೇವದತ್ತವಾದ ಗಂಗಾಜಲವನ್ನು ಬೆಟ್ಟದ ತಪ್ಪಲಿನಲ್ಲಿದ್ದ ಒಂದು ಅತ್ತಿಯ ಮರದ ಕೆಳಗೆ ಸುರಿದನು. ತಕ್ಷಣವೇ ಅಲ್ಲಿ ಗಂಗೆ ಉಕ್ಕಿ ಬಂದು, ಗೋದಾವರೀ ನದಿಯಾಗಿ ಹರಿಯತೊಡಗಿದಳು.





15 ಗೌತಮನಿಂದಾಗಿ ಈ ನದಿಯು ಹುಟ್ಟಿದ ಕಾರಣ ಅವಳನ್ನು ಗೌತಮಿ ಎಂದೂ, ಗೋದಾವರಿಯೆಂದೂ ಕರೆಯುತ್ತಾರೆ.
ಶಿವನು ಗೌತಮನಿಗೆ ದರ್ಶನ ನೀಡಿದ ಸ್ಥಳದಲ್ಲಿ ಶಿವನನ್ನು ತ್ರಯಂಬಕೇಶ್ವರ (ಮೂರು ಕಣ್ಣಿನ ಭಗವಂತ) ಎಂದು ಪೂಜಿಸುತ್ತಾರೆ ಮತ್ತು ಅವನು ಭಕ್ತಕೋಟಿಯನ್ನು ಸದಾ ಹರಸುತ್ತಿರುತ್ತಾನೆ.







ಢಾಕಾ ರಾಮಕೃಷ್ಣ ಮಿಷನ್ನಿನ ಶತಮಾನೋತ್ಸವ

ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹಾಗೂ ಸ್ವಾಮಿ ಪ್ರೇಮಾನಂದರು ೧೯೧೬ರಲ್ಲಿ ಢಾಕಾ ರಾಮಕೃಷ್ಣ ಮಠ ಹಾಗೂ ಮಿಷನ್ನನ್ನು ಆರಂಭಿಸಿದರು. ೨೦೧೬ರ ಮಾರ್ಚ್ ೯ರಿಂದ ೧೬ರ ವರೆಗೆ ಢಾಕಾ ಮಿಷನ್ ಶತಮಾನೋತ್ಸವವನ್ನು ನೆರವೇರಿಸಿತು.

ಉದ್ಘಾಟನೆ: ಬಾಂಗ್ಲಾದೇಶದ ಮುಖ್ಯನ್ಯಾಯಾಧೀಶರಾದ ಸುರೇಂದ್ರ ಕುಮಾರ್ ಸಿನ್ಹ ಅವರು ಮಾರ್ಚ್ ೯ರಂದು ಶತಮಾನೋತ್ಸವದ ಉದ್ಘಾಟನೆ ಮಾಡಿದರು. ರಾಮಕೃಷ್ಣ ಮಠ, ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸುಹಿತಾನಂದಜಿ ಉಪಸ್ಥಿತರಿದ್ದರು. ಢಾಕಾ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಧ್ರುವೇಶಾನಂದಜಿಯವರು ಸ್ವಾಗತ ಕೋರುವುದರ ಮೂಲಕ ೮ ದಿನಗಳ ಕಾರ್ಯಕ್ರಮಗಳು ಆರಂಭಗೊಂಡವು.

ಆಧ್ಯಾತ್ಮಿಕ ವಿಚಾರಣ ಸಂಕಿರಣ: ಶತಮಾನೋತ್ಸವದ ಅಂಗವಾಗಿ ನಡೆದ ಈ ಸಂಕಿರಣದಲ್ಲಿ ನೂರಕ್ಕೂ ಹೆಚ್ಚು ಮಂದಿ ಸಾಧು-ಬ್ರಹ್ಮಚಾರಿಗಳು ಭಾಗವಹಿಸಿದ್ದರು. ಸ್ವಾಮಿ ವಾಗೀಶಾನಂದಜಿ, (ಮಠ-ಮಿಷನ್ನಿನ ಉಪಾಧ್ಯಕ್ಷರು), ಸ್ವಾಮಿ ಗಿರೀಶಾನಂದಜಿ, ಸ್ವಾಮಿ ಸುವೀರಾನಂದಜಿ (ಸಹಕಾರ್ಯದರ್ಶಿಗಳು) ಸ್ವಾಮಿ ಸುಪರ್ಣಾನಂದಜಿ, ಸ್ವಾಮಿ ತತ್ತ್ವವಿದಾನಂದಜಿ, ಸ್ವಾಮಿ ಪರದೇವಾನಂದಜಿ, ಸ್ವಾಮಿ ಅಖಿಲೇಶಾನಂದಜಿ ಮೊದಲಾದವರು ಇವರಲ್ಲಿ ಪ್ರಮುಖರು. ವಿವಿಧ ಶಾಖಾಕೇಂದ್ರಗಳಿಂದ ಬಂದ ಅಧ್ಯಕ್ಷರುಗಳು ಹಾಗೂ ಇತರ ಸಂನ್ಯಾಸಿಗಳು ವಿವಿಧ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಬಾಂಗ್ಲಾದೇಶದ ಮಹಾನಾಮ ಸಂಪ್ರದಾಯದ ಅಧ್ಯಕ್ಷರಾದ ಶ್ರೀ ಕಾಂತಿಬಂಧು ಬ್ರಹ್ಮಚಾರಿ, ಬಾಂಗ್ಲಾದೇಶ ಸರಕಾರದ ಮಂತ್ರಿಗಳಾದ ಬೇಗಂ ಮತಿಯಾ ಚೌಧುರಿ, ತೊಫಾಯೆಲ್ ಅಹಮದ್, ಅಸದುಜಾಮನ್ ಖಾನ್ ಕಮಲ್, ಅನಿಸುಲ್ ಇಸ್ಲಾಂ ಮಹಮುದ್, ಬಾಂಗ್ಲಾದೇಶದಲ್ಲಿರುವ ಭಾರತದ ರಾಯಭಾರಿ ಹರ್ಷವರ್ಧನ್ ಶೃಂಗಲಾ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಚರ್ಚಾಗೋಷ್ಠಿಗಳಲ್ಲಿ ಪಾಲ್ಗೊಂಡ ವಿದ್ವಾಂಸರುಗಳಲ್ಲಿ ನ್ಯಾಯಾಧೀಶರಾದ ಶ್ರೀ ಸೌಮೇಂದ್ರ ಸರ್ಕಾರ್, ಶ್ರೀ ಆಲಾಪನ್ ಬಂದೋಪಾಧ್ಯಾಯ, ಪ್ರೊ.ಸೋನಾಲಿ ಚಕ್ರವರ್ತಿ(ಕಲ್ಕತ್ತಾ ವಿ.ವಿ. ಉಪಕುಲಪತಿಗಳು), ಪ್ರೊ. ಅಮಿನುಲ್ ಇಸ್ಲಾಂ (ಢಾಕಾ ವಿ.ವಿ.), ದೆಹಲಿ ವಿಶ್ವವಿದ್ಯಾಲಯದ ಪ್ರೊ. ಸಯ್ಯದ್ ಅನ್ವರ್ ಹೊಸೈನ್, ಪ್ರೊ. ಈನಬೋಧಿ ಭಿಕ್ಷು (ಚಿಟ್ಟಗಾಂಗ್ ವಿ.ವಿ.), ರಾಜರ್ಷಿ ವಿಶ್ವವಿದ್ಯಾನಿಲಯದ ಪ್ರೊ. ಸೋಮನಾಥ ಭಟ್ಟಾಚಾರ್ಯ, ಬಿಷಪ್ ಶರತ್ ಫ್ರಾನ್ಸಿಸ್ ಗೊಮೆಜ್ (ಢಾಕಾ), ಪ್ರೊ. ರೀಟಾ ದತ್ತ, ಡಾ. ಸಮಂತಲಾಲ್ ಸೇನ್, ಅಶೋಕ್ ದಾಸಗುಪ್ತ, ಪ್ರೊ. ನಿಖಿಲ್ ಭಟ್ಟಾಚಾರ್ಯ ಮುಂತಾದವರು ಪ್ರಮುಖರು.

ಪ್ರತಿದಿನ ಪ್ರಾರ್ಥನೆ, ಪೂಜೆ, ಕೀರ್ತನೆಗಳಲ್ಲದೆ, ಕಥಾಮೃತ, ಜಪಯಜ್ಞ, ಸಪ್ತಶತೀ ಚಂಡೀಹೋಮ ನಡೆದವು. ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ತತ್ತ್ವವಿದಾನಂದರು ಸಪ್ತಶತೀ ಚಂಡೀಹೋಮದ ಪ್ರಧಾನ ಅರ್ಚಕರಾಗಿ ನೇತೃತ್ವ ವಹಿಸಿದ್ದರು. ಬಾಂಗ್ಲಾದೇಶದ **ವಿವೇಕಾನಂದ ಶಿಕ್ಷಾ ಓ ಸಂಸ್ಕೃತಿ ಪರಿಷತ್**ನ ಸದಸ್ಯರು ನಡೆಸಿಕೊಟ್ಟ **ಯುವ ಸಮ್ಮೇಳನ**, ಬಾಂಗ್ಲಾದೇಶದ **ಶಾರದಾ ಸಂಘ**ದ ಸದಸ್ಯರು ನಡೆಸಿಕೊಟ್ಟ **'ಮಾತೃ ಸಮ್ಮೇಳನ'**, ಬಾಂಗ್ಲಾದೇಶದ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಸಂಸದ್ ನಡೆಸಿಕೊಟ್ಟ **ಭಾವ ಪ್ರಸಾರ ಸಮ್ಮೇಳನ** ಗಮನಾರ್ಹ ಕಾರ್ಯಕ್ರಮಗಳಾಗಿದ್ದವು. 'ಇಂದಿನ ಯುವ ಜನತೆಗೆ ಸ್ವಾಮಿ ವಿವೇಕಾನಂದರ ಕರೆ' 'ಶತರೂಪೇ ಶಾರದಾ','ಸ್ವಾಮಿ ವಿವೇಕಾನಂದರ ವಿಶ್ವಸಂದೇಶ', 'ರಾಮಕೃಷ್ಣ-ವಿವೇಕಾನಂದರ ಆದರ್ಶ' - ಇವೇ ಮೊದಲಾದ ಹಲವು ವಿಚಾರಸಂಕಿರಣಗಳು ನಡೆದವು.

ಸಾಂಸ್ಕೃತಿಕ ಕಾರ್ಯಕ್ರಮಗಳು: ಡಾ. ಸುಭದ್ರಾ ದೇಸಾಯಿ (ಅಶೋಕ ವಿ.ವಿ. ನವದೆಹಲಿ), ಅದಿತಿ ಮುನ್ಷಿ (ಕಲ್ಕತ್ತಾ), ಬಾಂಗ್ಲಾದೇಶದ ಅಂತರರಾಷ್ಟ್ರೀಯ ಖ್ಯಾತಿಯ ಶ್ರೀ ಸುಬಿರ್ ನಂದಿ, ಶ್ರೀರತೀಂದ್ರನಾಥ ರಾಯ್ ಹಾಗೂ ಫಾತಿಮಾ-ತುಜ್ -ಜೋಹುರಾ ಮುಂತಾದವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಪಾಟ್ನಾ ರಾಮಕೃಷ್ಣ ಮಠದ







ಸ್ವಾಮಿ ಸುಖಾನಂದಜಿ '**ರಾಮ ಚರಿತ ಮಾನಸ**', ನಿಮಾಯ್ ದಾಸ್ ಹಾಗೂ ತಪನ್ ಮಂಡಲ್ ಅವರು '**ರಾಮಾಯಣ ಗೀತೆ**' ನಡೆಸಿ ಕೊಟ್ಟರು. ಮುಂಬೈನ ಪದ್ಮಶ್ರೀ ಶೇಖರ್ ಸೇನ್ ಅವರು ಸ್ವಾಮಿ ವಿವೇಕಾನಂದರನ್ನು ಕುರಿತ **ಏಕಪಾತ್ರಾಭಿನಯವನ್ನು** ನಡೆಸಿಕೊಟ್ಟರು.

ಇತರ ದಿನಗಳಲ್ಲಿ '**ಕರುಣಾಧಾರಾಯ್ ಏಶೋ**', '**ಗಂತವ್ಯ ವಿವೇಕಾ ನಂದ**', '**ಆತ್ಮಪರಿಚಯ**', '**ಸಂಪ್ರೀತಿ**' ಮೊದಲಾದ ನಾಟಕಗಳನ್ನು ಪ್ರದರ್ಶಿಸಲಾಯಿತು. ರಾಮಕೃಷ್ಣ ಮಿಷನ್ ಹೈಸ್ಕೂಲ್ ಹಾಗೂ ಶಾರದಾ ಶಿಶು ನಿಕೇತನದ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳೂ ಶತಮಾನೋತ್ಸವಕ್ಕೆ ಮೆರುಗು ನೀಡಿದವು. ಸ್ವಾತಂತ್ರ್ಯ ದಿನದಂದು ರಕ್ತದಾನ, ಮಧುಮೇಹ ಅರಿವು ಮುಂತಾದ ಕಾರ್ಯಕ್ರಮಗಳು ನಡೆದವು. '**ಸರ್ವ ಧರ್ಮಸಮನ್ವಯ ಹಾಗೂ ಸಹಬಾಳ್ವೆ**' ಹಾಗೂ **ಶಾಂತಿ ಮೆರವಣಿಗೆ** ಇವು ಸ್ವಾಮಿ ವಿವೇಕಾನಂದರ ಧ್ಯೇಯ-ಆದರ್ಶಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾದ ಕಾರ್ಯಕ್ರಮಗಳೆನಿಸಿಕೊಂಡವು. ಸುಮಾರು ನಾಲ್ಕು ಸಾವಿರ ಮಂದಿ ಈ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.







ಪುಣೆ ರಾಮಕೃಷ್ಣ ಮಠದಲ್ಲಿ ''ವಿವೇಕಾನಂದ ಪುಣ್ಯ ನಗರಿ ಸೇವಾ ಪ್ರಕಲ್ಪ''

ಪುಣೆ ರಾಮಕೃಷ್ಣ ಮಠದಲ್ಲಿ ೨೦೧೭ರ ಮೇ ೧೦ ಹಾಗೂ ೧೧ ರಂದು ''**ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ**''ದ ಉದ್ಘಾಟನೆ ನೆರವೇರಿತು. ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡಜನರ ಸೇವೆ ಹಾಗೂ ಏಳಿಗೆಗಾಗಿ ಆರಂಭಿಸಿರುವ ಹೊಸ ಚಟುವಟಿಕೆಯೇ ಈ 'ಸೇವಾ ಪ್ರಕಲ್ಪ.' ಪುಣೆ ರಾಮಕೃಷ್ಣ ಮಠದ ಮೂರೂ ಭಾಗಗಳಲ್ಲಿ ಕೊಳೆಗೇರಿಗಳಿದ್ದು, ಅಲ್ಲಿನ ಬಹುಪಾಲು ಜನರು ಮದ್ಯಪಾನ, ಇತರ ಮಾದಕ ದ್ರವ್ಯ ಹಾಗೂ ಜೂಜಾಟವೇ ಮೊದಲಾದ ವ್ಯಸನಗಳಿಗೆ ಬಲಿಯಾದವರು. ಅವರ ಬಡತನ ಹಾಗೂ ಇತರ ಆರ್ಥಿಕ - ಸಾಮಾಜಿಕ ಸಮಸ್ಯೆಗಳಿಗೆ ಮದ್ಯಪಾನವೇ ಮೂಲ ಕಾರಣವಾಗಿದೆ. ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮೇಲೆತ್ತಲು ಪುಣೆ ಆಶ್ರಮ ಆರಂಭಿಸಿರುವ ಯೋಜನೆಯೇ ''ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ''. ಈ ಯೋಜನೆಯಲ್ಲಿ ಮದ್ಯಪಾನ ವ್ಯಸನದಿಂದ ಬಿಡುಗಡೆ, ಪುನರ್ವಸತಿ, ಮುಂದಿನ ಹಂತಗಳಲ್ಲಿ ವೈದ್ಯಕೀಯ ಹಾಗೂ ಶೈಕ್ಷಣಿಕ ನೆರವು ನೀಡುವಿಕೆ — ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಇದರೊಂದಿಗೆ, ಶ್ರೇಷ್ಠ ಜೀವನ ಹಾಗೂ ವ್ಯಸನಮುಕ್ತ ಜೀವನವನ್ನು ನಡೆಸುತ್ತಾ ಗೌರವಾನ್ವಿತ ಬದುಕನ್ನು ನಡೆಸಲು ಅವರಿಗೆ ಪ್ರೇರಣೆ ನೀಡಲು ಕಾರ್ಯಕ್ರಮಗಳನ್ನು ನಡೆಸಲಾಗುವುದು.

ಈಗಾಗಲೇ ಬುದ್ಧ ಪೌಣಿಮೆಯ ದಿನದಂದು (ಮೇ ೧೦, ೨೦೧೭) ೧೦ ಮಂದಿ ಆಯ್ದ ಮದ್ಯಪಾನ ವ್ಯಸನಿಗಳು ಭಗವಾನ್ ಬುದ್ಧನ ಹೆಸರಿನಲ್ಲಿ ಮದ್ಯಪಾನ ಚಟವನ್ನು ಬಿಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಅವರು ತಮ್ಮ ಕುಟುಂಬದ ಸದಸ್ಯರ, ಸಂನ್ಯಾಸಿಗಳ ಹಾಗೂ ಮಠದ ನಿಕಟಭಕ್ತರ ಸಮ್ಮುಖದಲ್ಲಿ ಈ ಪ್ರತಿಜ್ಞೆಯನ್ನು ತೆಗೆದುಕೊಂಡರು. ಅವರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಈ ಹತ್ತು ಮಂದಿಗಳು ತೋರಿಸಿದ ಸಾಹಸೀ ಕಾರ್ಯಕ್ಕಾಗಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು.

೨೦೧೭ರ ಮೇ ೧೧ ರಂದು ''**ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ**'' ಯೋಜನೆಯ ನಿಮಿತ್ತ ಹಾಗೂ ಬುದ್ಧಪೂರ್ಣಿಮೆ ಅಂಗವಾಗಿ ಕೊಳೆಗೇರಿಯ ನಿವಾಸಿಗಳಿಗಾಗಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಬುದ್ಧನ ಅನುಯಾಯಿಗಳಾದ ಸುಮಾರು ೮೦೦ ಮಂದಿ ಕೊಳೆಗೇರಿಯ ನಿವಾಸಿಗಳು ಇದರಲ್ಲಿ ಭಾಗವಹಿಸಿದ್ದರು. ಪುಣೆ ರಾಮಕೃಷ್ಣ ಮಠದ ಅಧ್ಯಕ್ಷರು ಹಾಗೂ ಶ್ರೀ ಭಂತೇರಾಜ್ ಶತಾನಿ (ಬೌದ್ಧ ಸಂನ್ಯಾಸಿ ಹಾಗೂ ವಿದ್ವಾಂಸರು) ಬುದ್ಧನ ಜೀವನ ಹಾಗೂ ಉಪದೇಶಗಳ ಬಗ್ಗೆ ಮಾತನಾಡಿದರು. ಪ್ರತಿನಿಧಿಗಳಿಗೆ ಬುದ್ಧನನ್ನು ಕುರಿತ ಪುಸ್ತಕಗಳನ್ನು ಹಾಗೂ ಆಹಾರ ಪ್ಯಾಕೆಟ್‌ಗಳನ್ನು ವಿತರಿಸಿ ಸನ್ಮಾನಿಸಲಾಯಿತು.

ಈ ''**ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ**''ದ ಮೂಲಕ ನಮ್ಮ ಸಮಾಜದಲ್ಲಿ ನಿಜವಾಗಿಯೂ ಅಗತ್ಯವಿರುವ ವ್ಯಕ್ತಿಗಳಿಗೆ ಸೇವೆಯನ್ನು ಸಲ್ಲಿಸಲು, ಹಾಗೂ ಕೊಳೆಗೇರಿ ನಿವಾಸಿಗಳ ಹಾಗೂ ಮಠದ ನಿವಾಸಿಗಳ ನಡುವೆ ಸಂಪರ್ಕ ಬಲಪಡಿಸಲು ಸಾಧ್ಯವಾಗುವುದು ಎಂದು ಪುಣೆ ರಾಮಕೃಷ್ಣ ಮಠವು ಬಲವಾಗಿ ನಂಬಿದೆ.






ಕರೀಂಗಂಜ್ ರಾಮಕೃಷ್ಣ ಮಿಷನ್ನಿನ ಶತಮಾನೋತ್ಸವದ ಉದ್ಘಾಟನೆ

ಕರೀಂಗಂಜ್ ರಾಮಕೃಷ್ಣ ಮಿಷನ್ ಈ ವರ್ಷ ತನ್ನ ೧೦೦ನೇ ವರ್ಷವನ್ನು ಪೂರ್ಣಗೊಳಿಸಿದೆ. ಇದರ ಆಚರಣೆಯ ಪ್ರಯುಕ್ತ ಮೇ ೨೦೧೭ ರಿಂದ ನವೆಂಬರ್ ೨೦೧೮ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಶತಮಾನೋತ್ಸವವನ್ನು ಸ್ಮರಣಾರ್ಹವನ್ನಾಗಿಸಲು ಕೆಲವು ಶಾಶ್ವತ ಯೋಜನೆಗಳನ್ನು ಆಶ್ರಮವು ಹಮ್ಮಿಕೊಂಡಿದೆ. ೧) ಶ್ರೀದುರ್ಗಾ ಮಂಟಪದ ನಿರ್ಮಾಣ ೨) ಪ್ರಸಾದ ವಿತರಣೆಯ ಭೋಜನಶಾಲೆ ೩) ಸ್ವಾಮಿ ವಿವೇಕಾನಂದರ ಪೂರ್ಣ ಪ್ರಮಾಣದ ಕಂಚಿನ ವಿಗ್ರಹದ ಸ್ಥಾಪನೆ.

ಈ ಶತಮಾನೋತ್ಸವದ ಉದ್ಘಾಟನೆಯನ್ನು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು ೨೦೧೭ರ ಮೇ ೧೦ನೇ ತಾರೀಖು ಬುದ್ಧ ಪೂರ್ಣಿಮೆಯ ಪುಣ್ಯದಿನದಂದು ನೆರವೇರಿಸಿದರು. ಸ್ವಾಮಿ ಜುಷ್ಟಾನಂದಜೀ, ಸ್ವಾಮಿ ನರೇಶಾನಂದಜಿ, ಸ್ವಾಮಿ ಸತ್ಯಸ್ಥಾನಂದಜಿ ಹಾಗೂ ಇನ್ನಿತರ ಸಂನ್ಯಾಸಿಗಳು, ಸುಮಾರು ೫೦೦ ಮಂದಿ ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ೧೧೦ ಮಂದಿ ಬಡ ಹಾಗೂ ಅರ್ಹ ಜನರಿಗೆ ಕಂಬಳಿ, ಸೊಳ್ಳೆಪರದೆ, ಧೋತಿ/ಸೀರೆ ಹಾಗೂ ಸಿಹಿ ತಿಂಡಿಯ ಪ್ಯಾಕೇಟ್‌ಗಳನ್ನು ''**ದರಿದ್ರ ನಾರಾಯಣ ಸೇವೆ**''ಯ ಅಂಗವಾಗಿ ಹಂಚಲಾಯಿತು. ಶತಮಾನೋತ್ಸವದ ಅಂಗವಾಗಿ ಹಲವು ಬಗೆಯ ಕಾರ್ಯಕ್ರಮಗಳು ವರ್ಷವಿಡೀ ನಡೆಯಲಿವೆ.

ತೆಂಕಲಮೋಳೆಯಲ್ಲಿ ಆರೋಗ್ಯ ತಪಾಸಣಾ ಶಿಬಿರ

ಮೈಸೂರು ಶ್ರೀರಾಮಕೃಷ್ಣ ಆಶ್ರಮ ಹಾಗೂ ಬೆಂಗಳೂರಿನ ಕಲ್ಪತರು ಟ್ರಸ್ಟ್ ಇದರ ಸಂಯುಕ್ತ ಆಶ್ರಯದಲ್ಲಿ ಚಾಮರಾಜನಗರ ತಾಲ್ಲೂಕಿನ ತೆಂಕಲಮೋಳೆ ಗ್ರಾಮದಲ್ಲಿ ನಡೆದ **ಉಚಿತ ಆರೋಗ್ಯ ತಪಾಸಣೆ ಶಿಬಿರ**ದಲ್ಲಿ ೩೫೦ಕ್ಕೂ ಹೆಚ್ಚು ಮಂದಿ ಗ್ರಾಮಸ್ಥರು ತಪಾಸಣೆಗೆ ಒಳಪಟ್ಟರು.



ಶಿಬಿರವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ ಮಹಾರಾಜ್, ''ಜನರು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಮತ್ತು ಸ್ವಚ್ಛತೆ ಕಾಪಾಡಬೇಕು. ಮಕ್ಕಳಿಗೆ ಉತ್ತಮ ಹಾಗು ಮೌಲ್ಯಯುತ ಶಿಕ್ಷಣ ಕೊಡಿಸುವುದರ ಮೂಲಕ ಗ್ರಾಮದಲ್ಲಿ ಎಲ್ಲರೂ ಸೌಹಾರ್ದಯುತ ಜೀವನ ನಡೆಸಬೇಕು'' ಎಂದು ಸಲಹೆ ನೀಡಿದರು.



ಆಶ್ರಮದ ವತಿಯಿಂದ ಮುಂದಿನ ದಿನಗಳಲ್ಲಿ ಪ್ರತಿದಿನ ಸಂಜೆ ವಿಶೇಷ ತರಗತಿ ನಡೆಸುವ ಮೂಲಕ ಶೈಕ್ಷಣಿಕ ಪ್ರಗತಿಗೆ ಕಾರ್ಯಕ್ರಮ ರೂಪಿಸಲಾಗುವುದು. ಅಲ್ಲದೆ ಪ್ರತಿನಿತ್ಯ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುವುದೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ **ಪ್ರಾಂಜಲ್ಸ್ ೩.ಎಂ ಸಲ್ಯೂಷನ್** ವತಿಯಿಂದ ಧೂಳು ಮತ್ತು ಪ್ಲಾಸ್ಟಿಕ್‌ನಿಂದ ಉಂಟಾಗುವ ತೊಂದರೆ ಕುರಿತು ಅರಿವು ಮೂಡಿಸಲಾಯಿತು. ಮುನ್ನೂರು ಜನರಿಗೆ ಮಾಸ್ಕ್ ವಿತರಣೆ ಮಾಡಲಾಯಿತು. **ದೀನಬಂಧು ಶಿಕ್ಷಣ ಸಂಸ್ಥೆ**ಯ ವತಿಯಿಂದ ಶಿಬಿರದಲ್ಲಿ ಪಾಲ್ಗೊಂಡಿದ್ದ ಜನರಿಗೆ ಉಪಹಾರ ನೀಡಲಾಯಿತು.

ಆಶ್ರಮದ ಹಿರಿಯ ಸನ್ಯಾಸಿಗಳಾದ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಕಲ್ಪತರು ಅಧ್ಯಕ್ಷ ಗೌತಮ್ ಘೋರ್ಪಡೆ, ಕಾರ್ಯದರ್ಶಿ ಶಿವಕುಮಾರ್, ಟ್ರಸ್ಟಿಗಳಾದ ಡಾ. ಶಿವಕಿಶೋರ್, ಸತೀಶ್ ಗುಡುಗೇ, ಹೇಮಂತ್, ದೀನಬಂಧು ಆಶ್ರಮದ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ್, ವಿವೇಕಾನಂದ ಟ್ರಸ್ಟ್ ಅಧ್ಯಕ್ಷ ಮಲ್ಲೇಶ್, ಡಾ. ಸ್ವರೂಪ್, ಡಾ. ಮಹದೇವು, ಡಾ. ಅಂಜಲಿ, ಡಾ. ಮೇಘಾ, ಡಾ.ಕನ್ಯಾ ಹಾಗೂ ಇತರರು ಇದ್ದರು.

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

೨ನೇ ಪುಟದಿಂದ...

ಕಾಲದಲ್ಲಿ ಅದು ಅತ್ಯುತ್ತಮ ಆಸ್ಪತ್ರೆಯಾಗಿ ಪರಿಗಣಿಸಲ್ಪಟ್ಟಿತು. ೧೯೬೫ರಲ್ಲಿ ರಂಗೂನ್ ಸೇವಾಶ್ರಮವನ್ನು ಅಲ್ಲಿನ ಮಿಲಿಟರಿ ಆಡಳಿತವು ವಹಿಸಿಕೊಂಡಾಗ ಪೂಜ್ಯ ಸ್ವಾಮೀಜಿಯವರು ಭಾರತಕ್ಕೆ ಮರಳಿದರು. ೧೯೬೬ರಲ್ಲಿ ಅವರು ರಾಜ್‌ಕೋಟ್ ಆಶ್ರಮದ ಅಧ್ಯಕ್ಷರಾಗಿ ನಿಯುಕ್ತರಾದರು. ಅವರು ಅಲ್ಲಿ ಅಧ್ಯಕ್ಷರಾಗಿದ್ದಾಗಲೇ, ಹಾಗೂ ಅವರ ಮುಂದಾಳುತ್ವದಲ್ಲೇ ರಾಜ್‌ಕೋಟ್ ಆಶ್ರಮದ ಭವ್ಯ ಮಂದಿರದ ನಿರ್ಮಾಣಕಾರ್ಯ ನಡೆಯಿತು.



ಪೂಜ್ಯ ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಬೇಲೂರು ಮಠದಲ್ಲಿ: ೧೯೭೩ರಲ್ಲಿ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಠದ ವಿಶ್ವಸ್ತರಾಗಿಯೂ, ರಾಮಕೃಷ್ಣ ಮಿಷನ್ನಿನ ಆಡಳಿತ ಮಂಡಳಿಯ ಸದಸ್ಯರಾಗಿಯೂ ಆಯ್ಕೆಯಾದರು. ೧೯೭೫ರಲ್ಲಿ ಅವರು ಮಠ ಹಾಗೂ ಮಿಷನ್ – ಇವೆರಡರ ಸಹ ಕಾರ್ಯದರ್ಶಿಗಳಾಗಿ ನಿಯುಕ್ತಿ ಹೊಂದಿದರು. ರಾಮಕೃಷ್ಣ ಮಿಷನ್ನಿನ ಪರಿಹಾರ ಕಾರ್ಯಗಳ ನೇತೃತ್ವವನ್ನು ಪೂಜ್ಯರು ವಹಿಸಿ ಕೊಂಡಿದ್ದಾಗ ಬೇಲೂರು ಮಠವು ಭಾರತ, ನೇಪಾಳ ಹಾಗೂ ಬಾಂಗ್ಲಾದೇಶಗಳಲ್ಲಿ ವ್ಯಾಪಕವಾಗಿ ಹಲವು ಪರಿಹಾರ ಕಾರ್ಯಗಳನ್ನು ನಡೆಸಿತು. ೧೯೯೨ರಲ್ಲಿ ಅವರು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಪ್ರಧಾನ ಕಾರ್ಯಕರ್ಶಿಗಳಾಗಿ ನೇಮಕಗೊಂಡರು. ಮುಂದೆ ಐದು ವರ್ಷಗಳ ಕಾಲ ಅವರು ಅದೇ ಪದವಿಯಲ್ಲಿ ಮುಂದುವರಿದು, ೧೯೯೭ರಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದರು. ೨೦೦೭ರ ಡಿಸೆಂಬರ್ ೩ರಂದು ಅವರು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿ ಆಯ್ಕೆಯಾದರು.



ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ದೇಶದುದ್ದಕ್ಕೂ ಪ್ರವಾಸ ಮಾಡಿ, ರಾಮಕೃಷ್ಣ ಮಹಾಸಂಘದ ಹಲವು ಶಾಖಾ ಕೇಂದ್ರಗಳಿಗೂ, ಇತರ ಖಾಸಗಿ ಕೇಂದ್ರಗಳಿಗೂ ಭೇಟಿ ನೀಡಿದ್ದಾರೆ. ೧೯೮೮ರಲ್ಲಿ ಅವರು ಅಮೆರಿಕ, ಕೆನಡಾ, ಜಪಾನ್ ಹಾಗೂ ಸಿಂಗಾಪುರದ ಹಲವು ಪ್ರದೇಶಗಳಿಗೆ ಭೇಟಿಯಿತ್ತರು. ಇದಲ್ಲದೆ, ವಿವಿಧ ಸಂದರ್ಭಗಳಲ್ಲಿ ಅವರು ಮಲೇಷ್ಯಾ , ಫಿಜಿ, ಶ್ರೀಲಂಕಾ, ಬಾಂಗ್ಲಾದೇಶಗಳಿಗೆ ಭೇಟಿ ನೀಡಿದ್ದಾರೆ. ಅಲ್ಲೆಲ್ಲ ಅವರು ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಹಾಗೂ ವೇದಾಂತದ ಸಂದೇಶಗಳನ್ನು ಹರಡುವುದಲ್ಲದೆ, ಆಧ್ಯಾತ್ಮಿಕ ಸಾಧಕರಿಗೆ ಮಂತ್ರದೀಕ್ಷೆಯನ್ನೂ ನೀಡುತ್ತ ಬಂದಿದ್ದಾರೆ. ರಾಮಕೃಷ್ಣ ಮಠ, ಮಿಷನ್ನಿನ ಚಟುವಟಿಕೆಗಳ ನಡುವೆ ಅನೇಕ ಮಂದಿ ಸಂನ್ಯಾಸಿ ವೃಂದದವರಿಗೂ, ಆಧ್ಯಾತ್ಮಿಕ ಸಾಧಕರಿಗೂ, ದೇಶದ ಅನೇಕ ಮಂದಿ ಖ್ಯಾತ ವ್ಯಕ್ತಿಗಳಿಗೂ ಸ್ವಾಮೀಜಿ ಸ್ಫೂರ್ತಿಯ ಸೆಲೆಯಾಗಿದ್ದರು.

ಶ್ರೀರಾಮಕೃಷ್ಣರ ಜನ್ಮಸ್ಥಳವಾದ ಕಾಮಾರಪುಕುರದಲ್ಲೂ, ಶ್ರೀಮಾತೆಯವರ ಜನ್ಮಸ್ಥಳ ಜಯರಾಮಬಾಟಿ ಗ್ರಾಮದಲ್ಲೂ **'ಪಲ್ಲಿಮಂಗಲ್'** ಎಂಬ ಸಮಗ್ರ ಗ್ರಾಮೀಣಾಭಿವೃದ್ಧಿಯ ಕಾರ್ಯಕ್ರಮ ವನ್ನು ರೂಪಿಸಿ ಸಂಘಟಿಸುವಲ್ಲಿ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಮಹತ್ವದ ಪಾತ್ರ ವಹಿಸಿದ್ದರು. ಅದರೊಂದಿಗೆ ಬೇಲೂರು ಮಠದಲ್ಲಿರುವ ಪ್ರಮುಖ ವಿದ್ಯಾಸಂಸ್ಥೆಯಾದ 'ರಾಮಕೃಷ್ಣ ಶಾರದಾಪೀಠ'ದಲ್ಲಿ **'ಸಮಾಜ ಸೇವಾ'** ಯುವ ತರಬೇತಿ ಕೇಂದ್ರ ಹಾಗೂ ಇತರ ಅನೇಕ ಸೇವಾಕಾರ್ಯಗಳಿಗೂ ಅವರು ರೂವಾರಿಯಾಗಿದ್ದರು. ಪೂಜ್ಯರ ಮಹಾಸಮಾಧಿಯು ಅವರ ಅಪಾರ ಶಿಷ್ಯವೃಂದವನ್ನು ಹಾಗೂ ದೇಶದೆಲ್ಲೆಡೆ ಹರಡಿರುವ ಅಸಂಖ್ಯಾತ ಭಕ್ತಮಂಡಲಿಯನ್ನು ಶೋಕಸಾಗರದಲ್ಲಿ ಮುಳುಗಿಸಿದೆ.





ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್: ಭಾವಚಿತ್ರಗಳಲ್ಲಿ







ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid
Travel & Tours

ಅಂತರಾಷ್ಟ್ರೀಯ ವಿಶೇಷ ಪ್ರವಾಸಗಳು

7 ದಿನಗಳ ರಷ್ಯಾ ಪ್ರವಾಸ

ಮಾಸ್ಕೋ : ಕ್ರೆಮ್‌ಲಿನ್ ಗ್ರೌಂಡ್, ರೆಡ್ ಸ್ಕ್ವೈರ್, ರಷ್ಯಾ ಸರ್ಕಸ್,
ಅಂಡರ್‌ಗ್ರೌಂಡ್ ಟೂರ್ ಆಫ್ ಮಾಸ್ಕೊ (ಮೆಟ್ರೊ), ಸಿಟಿ ಟೂರ್
ಸೆಂಟ್ ಪೀಟರ್ಸ್‌ಬರ್ಗ್ : ಗ್ರ್ಯಾಂಡ್ ಪ್ಯಾಲೇಸ್, ಪೀಟರ್ ಓಫ್ ಗಾರ್ಡನ್,
ಹೆರ್ಮಿಟೇಜ್ ಮ್ಯೂಸಿಯಂ, ನೇವ ಬೋಟ್ ರೈಡ್, ಸೈಂಟ್ ಐಸಾಕ್ಸ್ ಕೆಥಡ್ರಲ್, ಸಿಟಿ ಟೂರ್

ರಷ್ಯಾ



ಜುಲೈ, ಆಗಸ್ಟ್

8 ದಿನಗಳ ಥೈಲ್ಯಾಂಡ್ – ಕಾಂಬೋಡಿಯ ಪ್ರವಾಸ

ಕಾಂಬೋಡಿಯ – ಸಿಯಾಮ್‌ರಿಪ್, ಅಂಕೊರ್‌ವಾಟ್,
ತೋಂಲ್ಲೇ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

ಕಾಂಬೋಡಿಯಾ



ಸೆಪ್ಟೆಂಬರ್

7 ದಿನಗಳ ಸಿಂಗಾಪುರ–ಮಲೇಶಿಯ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ,
ವಿಂಗ್ಸ್ ಆಫ್ ಟೈಮ್, ಜುರೋಂಗ್ ಬರ್ಡ್‌ಪಾರ್ಕ್,
ಯುನಿವರ್ಸಲ್ ಸ್ಟುಡಿಯೋ
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ,
ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್

ಸಿಂಗಾಪುರ್



ಜುಲೈ, ಆಗಸ್ಟ್
ಸೆಪ್ಟೆಂಬರ್

15 ಮತ್ತು 18 ದಿನಗಳ ಗ್ರ್ಯಾಂಡ್ ಯು.ಕೆ.–ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್
ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

ಲಂಡನ್



ಜುಲೈ, ಆಗಸ್ಟ್

18 ದಿನಗಳ ಅಮೇರಿಕಾ ಹಾಗೂ ಬಹಮಾಸ್ ಕ್ರೂಸ್ ಪ್ರವಾಸ

ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೆಗಾಸ್,
ಲಾಸ್ ಎಂಜಲೀಸ್, ಸ್ಯಾನ್‌ಫ್ರಾನ್ಸಿಸ್‌ಕೋ, ಆರ್‌ಲ್ಯಾಂಡೊ, ಬಹಮಾಸ್‌ಕ್ರೂಸ್

ಅಮೆರಿಕಾ




ಸೆಪ್ಟೆಂಬರ್
ಅಕ್ಟೋಬರ್

10 ದಿನಗಳ ಚೈನಾ, ಹಾಂಕಾಂಗ್, ಮಕಾವ್ ಪ್ರವಾಸ

ಆಕ್ರೋಬೆಟಿಕ್ ಶೋ, ಓಷನ್ ಪಾರ್ಕ್, ಬೀಜಿಂಗ್ ನಗರ ವೀಕ್ಷಣೆ,
ಶಾಂಘೈ ನಗರ ವೀಕ್ಷಣೆ, ಏಳು ಅದ್ಭುತಗಳಲ್ಲಿ ಒಂದಾದ ಚೀನಾ
ಮಹಾಗೋಡೆ (Great Wall of China) ಸಮ್ಮರ್ ಪ್ಯಾಲೇಸ್,
ಹಾಂಕಾಂಗ್ ಮ್ಯೂಸಿಯಂ ಮತ್ತು ಮಕಾವ್ ಹಾಗೂ ಇತರೆ.

ಚೈನಾ



ಸೆಪ್ಟೆಂಬರ್
ಅಕ್ಟೋಬರ್

ಪ್ರಧಾನ ಕಛೇರಿ : ಬಸವನಗುಡಿ
ನಂ. 98, 1ನೇ ಮಹಡಿ, ಡಿವಿಜಿ ರಸ್ತೆ
ಬಸವನಗುಡಿ, ಬೆಂಗಳೂರು – 560004.
ಫೋನ್: 080-26670646, 26621983
ಮೊಬೈಲ್ : 9900080794, 9900080796

ಶಾಖಾ ಕಛೇರಿ : ಮಲ್ಲೇಶ್ವರಂ
ನಂ.198, 1ನೇ ಮಹಡಿ, 11ನೇ ಕ್ರಾಸ್, ಯತಿರಾಜಮಠ
ಬಿಲ್ಡಿಂಗ್, ಮಲ್ಲೇಶ್ವರಂ, ಬೆಂಗಳೂರು – 560003.
ಫೋನ್: 080-41204155, 23445559
ಮೊಬೈಲ್ : 9900080792

www.orchidtours.net

VIVEKA PRABHA (KANNADA MONTHLY)
July 2017 , Vol.18, No.7, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2015-17. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2015-17

Printed at mayur graphics,Bangalore